ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 8 ಬುಧವಾರ 2023

ಸಂಪುಟ: 43 | ಸಂಚಿಕೆ: 291 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬಿಜೆಪಿಯಲ್ಲಿ ವೀರಶೈವ ಮುಖಂಡರು ಮೂಲೆಗುಂಪು

- ಬಿಜೆಪಿ ವಿರುದ್ಧ ವಾಗ್ದಾಳಿ ಮುಂದುವರೆಸಿದ ಕುಮಾರಸ್ವಾಮಿ
- ಜೋಶಿ ಸಂಬಂಧಿತ ಹೇಳಿಕೆ ಹಿಂಪಡೆಯುವ ಪ್ರಶ್ನೆಯೇ ಇಲ್ಲ

ಬೆಂಗಳೂರು,ಫೆ.7(ಕೆಎಂಶಿ)–ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಮುಖ್ಯಮಂತ್ರಿ ಮಾಡುವ ಉದ್ದೇಶದಿಂದ ವೀರಶೈವ ಮುಖಂಡರನ್ನು ಬಿಜೆಪಿ ಮೂಲೆಗುಂಪು ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಗಂಭೀರ ಆರೋಪ ಮಾಡಿದ್ದಾರೆ.



ಜೋಶಿ ಅವರ ಬಗ್ಗೆ ನೀಡಿರುವ ಹೇಳಿಕೆ ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಇವರು ಅಧಿಕಾರಕ್ಕೆ ಬಂದರೆ, ಕರ್ನಾಟಕ ಶೋಚನೀಯ ಸ್ಥಿತಿ ತಲುಪುತ್ತದೆ ಎಂಬ ಎಚ್ಚರಿಕೆ ನೀಡುತ್ತಿದ್ದೇನೆಯೇ ಹೊರತು, ಯಾವುದೇ ಜಾತಿ, ಸಮಾಜಕ್ಕೆ ಅಗೌರವ ತೋರಿಲ್ಲ. ಕ್ಷಮೆ ಕೇಳುವ ಪ್ರಮೇಯವೇ ಇಲ್ಲ. ಸರ್ವ ಜನಾಂಗದ ಶಾಂತಿಯ ತೋಟ ಎಂದು ಭಾವಿಸುವ ಬ್ರಾಹ್ಮಣರ ಬಗ್ಗೆ ಮಾತನಾಡಿಲ್ಲ. ಗಾಂಧೀ ಕೊಂದ ಕುಟುಂಬ, ಶೃಂಗೇರಿಯನ್ನು ವಿಭಜನೆ ಮಾಡಿದ್ದ ಡಿಎನ್ಎ ಬಗ್ಗೆ ಅಷ್ಟೇ ಮಾತನಾಡಿದ್ದೇನೆ, ಅದಕ್ಕೆ ಈಗಲೂ ಬದ್ಧ ಎಂದು ಸಮರ್ಥಿಸಿಕೊಂಡರು. ಈ ಡಿಎನ್ಎ ಸಂಸ್ಕೃತಿ ಅವರಿಗೆ ಅಧಿಕಾರ ನೀಡಬಾರದು ಎಂಬುದಷ್ಟೇ ನನ್ನ ಕಳಕಳಿ. ಮುಂದಾಗುವ ಅನಾಹುತ ತಪ್ಪಿಸಲು ಹೇಳಿಕೆ ನೀಡಿದ್ದೇನೆ. ಮುಖ್ಯಮಂತ್ರಿ ಸ್ಥಾನದಲ್ಲಿ ▶ 8ನೇ ಪುಟಕ್ಕೆ

ಹೆಚ್‌ಡಿಕೆ ಬ್ರಾಹ್ಮಣ ಬ್ರಹ್ಮಾಸ್ತ್ರ: ಬಿಜೆಪಿ, ಆರ್‌ಎಸ್‌ಎಸ್‌ಗೆ ನುಂಗಲಾರದ ತುತ್ತು

ಬೆಂಗಳೂರು,ಫೆ.7(ಕೆಎಂಶಿ)–ಬಿಜೆಪಿ ಅಧಿಕಾರಕ್ಕೆ ಬಂದರೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮುಖ್ಯಮಂತ್ರಿಯಾಗುತ್ತಾರೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ರಾಜ್ಯ ಬಿಜೆಪಿ ಘಟಕದಲ್ಲೇ ಕುಮಾರಸ್ವಾಮಿ ಪರ ಮತ್ತು ವಿರುದ್ಧ ಪ್ರತ್ಯೇಕ ಮತ್ತು ಆಂತರಿಕವಾಗಿ ಚರ್ಚೆಗಳು ನಡೆದಿವೆ. ಕುಮಾರಸ್ವಾಮಿ ಹೇಳಿಕೆಯು ಕೇಂದ್ರ ವರಿಷ್ಠರು ಮತ್ತು ಆರ್‌ಎಸ್‌ಎಸ್‌ಗೆ ನುಂಗಲಾರದ ತುತ್ತಾಗಿದೆ. ವಿಧಾನಸಭಾ ಚುನಾವಣಾ ಹೊಸ್ತಿಲಲ್ಲಿ ತಮ್ಮ ಮತ ಬ್ಯಾಂಕ್ ಅನ್ನು ಛಿದ್ರಗೊಳಿಸಲು ಬ್ರಹ್ಮಾಸ್ತ್ರ ಬಿಟ್ಟಿದ್ದಾರೆ ಎಂದು ಬಿಜೆಪಿ ಕಿಡಿಕಾರುತ್ತಿದೆ. ರಾಜ್ಯ ವಿಧಾನ ಸಭಾ ಚುನಾವಣೆಯನ್ನು ಹಿಂದುತ್ವದ ▶ 8ನೇ ಪುಟಕ್ಕೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಚೇರಿಯಲ್ಲಿ 'ಲಂಚ' ವ್ಯವಹಾರ

- ಎನ್‌ಎಂಸಿ ಸದಸ್ಯತ್ವಕ್ಕಾಗಿ ಶಿವಮೊಗ್ಗ ವ್ಯಕ್ತಿಯಿಂದ ವಸೂಲಿ: ವಿಧಾನಪರಿಷತ್‌ನ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಭೋಜೇಗೌಡ ಗಂಭೀರ ಆರೋಪ
- ಇದಕ್ಕೆ ಸಂಬಂಧಿಸಿದ ದಾಖಲೆ ಪತ್ರ ಬಿಡುಗಡೆ; ಉನ್ನತ ಮಟ್ಟದ ತನಿಖೆಗೆ ಆಗ್ರಹ



ಬೆಂಗಳೂರು: ಕೇಂದ್ರ ಸರ್ಕಾರದ ಅಧೀನದಲ್ಲಿರುವ ರಾಷ್ಟ್ರೀಯ ವೈದ್ಯಕೀಯ ಮಂಡಳಿ (ಎನ್‌ಎಂಸಿ) ಸದಸ್ಯರನ್ನಾಗಿ ನೇಮಿಸಲು ಶಿವಮೊಗ್ಗದ ವೈದ್ಯರೊಬ್ಬರಿಂದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಕಚೇರಿಯಲ್ಲಿ ಲಂಚ ಪಡೆಯಲಾಗಿದೆ ಎಂದು ವಿಧಾನಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್.ಭೋಜೇಗೌಡ ಆರೋಪಿಸಿದರು. ಪಕ್ಷದ ಕಚೇರಿ ಜೆ.ಪಿ.ಭವನದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಹರೀಶ್ ಅಯ್ಯಣ್ಣ ಎಂಬುವವರನ್ನು ಎನ್‌ಎಂಸಿ ▶ 8ನೇ ಪುಟಕ್ಕೆ

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯಲ್ಲಿ ಡಿಕೆಶಿ ಕೈ ಮೇಲು

ಬೆಂಗಳೂರು, ಫೆ.7(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲು ಎಐಸಿಸಿ ನೇಮಿಸಿರುವ ಸ್ಕ್ರೀನಿಂಗ್ ಕಮಿಟಿಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೇಲುಗೈ ಸಾಧಿಸಿದ್ದಾರೆ. ಕೆಪಿಸಿಸಿ ಚುನಾವಣಾ ಸಮಿತಿ ಸಿದ್ಧಪಡಿಸಿರುವ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಸ್ಕ್ರೀನಿಂಗ್ ಕಮಿಟಿ ಇದೇ 13ರಂದು ನಗರದಲ್ಲೇ ಸಭೆ ಸೇರಿ ಪರಾಮರ್ಶೆ ಮಾಡಲಿದೆ.



ಎಐಸಿಸಿ ಸ್ಕ್ರೀನಿಂಗ್ ಕಮಿಟಿಯ ಅಧ್ಯಕ್ಷ ಸ್ಥಾನಕ್ಕೆ ಮೋಹನ್ ಪ್ರಕಾಶ್, ಸದಸ್ಯರಾಗಿ ನೀರಜ್ ಡಂಘೀ, ಮೊಹಮದ್ ಜಾವೀದ್ ಹಾಗೂ ಸಪ್ತಗಿರಿ ಉಲ್ಕಾ ಜೊತೆಗೆ ರಾಜ್ಯದಿಂದ ಡಿ.ಕೆ.ಶಿವಕುಮಾರ್, ವಿಧಾನಮಂಡಲದ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್ ಹಾಗೂ ಹಿರಿಯ ನಾಯಕ ಡಾ. ಜಿ.ಪರಮೇಶ್ವರ್ ಜೊತೆಗೆ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೇವಾಲಾ ಇದ್ದಾರೆ. ವಿಧಾನಸಭಾ ಚುನಾವಣೆಗೆ ಸಮಿತಿ ಅಂತಿಮಗೊಳಿಸುವ ಅಭ್ಯರ್ಥಿಗಳ ಪಟ್ಟಿಗೆ ಎಐಸಿಸಿ ಬಹುತೇಕ ಹಸಿರು ನಿಶಾನೆ ತೋರುತ್ತದೆ. ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗಲು ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಮುಂಚೂಣಿಯಲ್ಲಿದ್ದಾರೆ. ಶಾಸಕರ ಬಲ ಇದ್ದವರಿಗೆ ನಾಯಕತ್ವ ಸುಲಭವಾಗಿ ದೊರೆಯುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡ ಶಿವಕುಮಾರ್ ತಮ್ಮ ಬೆಂಬಲಿಗರಿಗೆ ಹೆಚ್ಚು ಟಿಕೆಟ್ ಕೊಡಿಸಲು ಸ್ಕ್ರೀನಿಂಗ್ ಕಮಿಟಿ ಸದಸ್ಯರ ನೇಮಕಾತಿಯಲ್ಲೇ ರಾಜಕೀಯ ಮಾಡಿದ್ದಾರೆ. ದೆಹಲಿ ಪ್ರಭಾವವನ್ನು ಬಳಸಿಕೊಂಡು ಕಮಿಟಿಗೆ ತಮಗೆ ಅನುಕೂಲವಾದವರನ್ನು ನೇಮಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ▶ 8ನೇ ಪುಟಕ್ಕೆ

ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯ ಸ್ಕ್ರೀನಿಂಗ್ ಕಮಿಟಿಯಲ್ಲಿ ಹಿತೈಷಿಗಳ ಬಲ

ಮಾನನಷ್ಟ ಮೊಕದ್ದಮೆ

ಬೆಂಗಳೂರು: ಭೋಜೇಗೌಡ ಆರೋಪಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಹೇಳಿದ್ದಾರೆ.



ಭೋಜೇಗೌಡ ಅವರು ಪ್ರದರ್ಶಿಸಿರುವ ಪತ್ರವನ್ನು ವೈದ್ಯರೊಬ್ಬರಿಗೆ ಬರೆಯಲಾಗಿತ್ತು. ನಾನು ವೈದ್ಯ ಅಲ್ಲ. ಅವರು ಆರೋಪಿಸಿದಂತಹ ವ್ಯಕ್ತಿ ನನ್ನ ಕಚೇರಿಯಲ್ಲೂ ಇಲ್ಲ. ಅವರಿಗೆ ದಾಖಲೆಯ ಮೇಲೆ ಅಷ್ಟೊಂದು ವಿಶ್ವಾಸವಿದ್ದರೆ ಹೆಸರನ್ನು ಏಕೆ ಅಡಗಿಸಿಡಲಾಗಿದೆ ಎಂದು ಸಚಿವ ಪ್ರಹ್ಲಾದ್ ಜೋಶಿ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಇಂತಹ ಆಧಾರರಹಿತ ಆರೋಪಗಳನ್ನು ಗಂಭೀರವಾಗಿ ಎದುರಿಸಲಾಗುವುದು. ನನ್ನ ವ್ಯಕ್ತಿತ್ವದ ತೇಜೋವಧೆಗೆ ಯತ್ನಿಸುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ. ಕೇಂದ್ರ ಆರೋಗ್ಯ ಸಚಿವರಾಗಿದ್ದ ಹರ್ಷವರ್ಧನ್ ಅವರು ಡಾ.ಬಿ.ಡಿ. ಪಾಂಡೆ ಎಂಬುವವರಿಗೆ ಬರೆದಿದ್ದ ಪತ್ರವನ್ನು ಹಂಚಿಕೊಂಡಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ದರೋಡೆ

ಸರಿರಾತ್ರಿ ಮೈಸೂರು ದಂಪತಿಯ ಚಿನ್ನಾಭರಣ, ಹಣ ಸುಲಿಗೆ

- ಬೆಂಗಳೂರಿನಿಂದ ಕಾರಿನಲ್ಲಿ ವಾಪಸ್ಸಾಗುವಾಗ ಮಂಡ್ಯ ಬಳಿ ಮೂತ್ರ ವಿಸರ್ಜನೆಗೆಂದು ನಿಂತಾಗ ಇಬ್ಬರು ಖದೀಮರು ಪ್ರತ್ಯಕ್ಷ
- ದಂಪತಿ ಕತ್ತಿಗೆ ಡ್ರ್ಯಾಗರ್, ಚಾಕು ಇಟ್ಟು ಕೊಲ್ಲುವ ಬೆದರಿಕೆಯೊಡ್ಡಿ ಸುಲಿಗೆ
- ಆಳೆತ್ತರದ ಫೆನ್ಸಿಂಗ್ ಹಾರಿ ಹೆದ್ದಾರಿ ಪ್ರವೇಶಿಸಿದ ಖದೀಮರು

ಮೈಸೂರು, ಫೆ.7(ಎಸ್‌ಬಿಡಿ)– ಬೆಂಗಳೂರಿನಿಂದ ಕಾರಿನಲ್ಲಿ ವಾಪಸ್ಸಾಗುತ್ತಿದ್ದ ಮೈಸೂರು ದಂಪತಿಯಿಂದ ಚಿನ್ನಾಭರಣ ಹಾಗೂ ಹಣ ದರೋಡೆ ಮಾಡಿರುವ ಘಟನೆ ಭಾನುವಾರ(ಫೆ.5) ತಡರಾತ್ರಿ ನಡೆದಿದೆ.

ಮೈಸೂರಿನ ರೈಲ್ವೆ ಕಾರ್ಯಾಗಾರ ಕಾಲೋನಿಯ ಸರ್ಕಾರಿ ಪ್ರೌಢಶಾಲೆ ಶಿಕ್ಷಕ, ರಾಮಕೃಷ್ಣನಗರ ನಿವಾಸಿ ಎನ್.ನಾಗರಾಜು (58) ಹಾಗೂ ಎಲ್.ಜಯಶ್ರೀ ದಂಪತಿ ಬೆಂಗಳೂರಿನಿಂದ ದಶಪಥ ಹೆದ್ದಾರಿಯಲ್ಲಿ ವಾಪಸ್ಸಾಗುವಾಗ ಮಂಡ್ಯದ ಸಮೀಪ ಮೂತ್ರ ವಿಸರ್ಜನೆಗೆಂದು ಕಾರು ನಿಲ್ಲಿಸಿದ್ದಾಗ ಇಬ್ಬರು ದುಷ್ಕರ್ಮಿಗಳು ಮಾರಕಾಸ್ತ್ರಗಳನ್ನು ತೋರಿಸಿ ಕೊಲೆ ಬೆದರಿಕೆ ಹಾಕಿ, ನಾಲ್ಕೈದು ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿದ್ದಾರೆ.

ಘಟನೆ ವಿವರ: ಶಿಕ್ಷಕ ನಾಗರಾಜು ಪುತ್ರ ಎಂ.ಎನ್. ಮದನ್ ಬೆಂಗಳೂರಿನಲ್ಲಿ ವೃತ್ತಿ ಮಾಡುತ್ತಿದ್ದಾರೆ. ಅಲ್ಲಿಯೇ ಬಾಡಿಗೆ ಮನೆಯಲ್ಲಿರುವ ಅವರು ಶುಕ್ರವಾರ(ಫೆ.3) ಮೈಸೂರಿಗೆ ಬಂದಿದ್ದರು. ತಮ್ಮ ಮಗುವಿನ ನಾಮಕರಣಕ್ಕಾಗಿ ಮನೆಯವರೊಂದಿಗೆ ಮದನ್, ಪತ್ನಿಯ ಊರಾದ ಹಿರಿಯೂರಿಗೆ ಶನಿವಾರ ತೆರಳಿದ್ದರು. ಕಾರ್ಯಕ್ರಮದ ಬಳಿಕ ಪತ್ನಿ ಹಾಗೂ ಮಗುವನ್ನು ಮೈಸೂರಿಗೆ ಕರೆತಂದು ಬಿಟ್ಟು, ಭಾನುವಾರ ಬೆಂಗಳೂರಿಗೆ ಹೊರಟಿದ್ದರು. ನಾಗರಾಜು ಅವರು ತಮ್ಮ ಸ್ವಿಫ್ಟ್ ಕಾರಿ(ಕೆಎ–09, ಎಂಎಫ್–2831)ನಲ್ಲೇ ಮಗ, ಸೊಸೆ ಹಾಗೂ ಮಗುವನ್ನು ಬೆಂಗಳೂರಿಗೆ ಬಿಟ್ಟು ಬರಲು ಹೋಗಿದ್ದರು. ಅವರೊಂದಿಗೆ ಪತ್ನಿ ಜಯಶ್ರೀ ಕೂಡ ತೆರಳಿದ್ದರು. ಸಂಜೆ 5 ಗಂಟೆಗೆ ಬೆಂಗಳೂರು ತಲುಪಿದ ಅವರು ಊಟ ಮುಗಿಸಿಕೊಂಡು ರಾತ್ರಿ 10.30ರ ವೇಳೆಗೆ ಅಲ್ಲಿಂದ ಹೊರಟರು. ದಶಪಥ ಹೆದ್ದಾರಿಯಲ್ಲಿ ಬರುತ್ತಿದ್ದ ನಾಗರಾಜು ದಂಪತಿ ತಡರಾತ್ರಿ 1.10ರಲ್ಲಿ ಮಂಡ್ಯ ಸಮೀಪದ ಮಲ್ಲಯ್ಯನದೊಡ್ಡಿ ಬಳಿ ಕಾರು ನಿಲ್ಲಿಸಿದ್ದಾಗ ಈ ದುಷ್ಕೃತ್ಯ ನಡೆದಿದೆ.

'ನಾನು ಮೂತ್ರ ವಿಸರ್ಜನೆ ಬಳಿಕ ನೀರಿನ ಬಾಟಲ್ ತೆಗೆದುಕೊಂಡು ಮುಖ ತೊಳೆದುಕೊಳ್ಳುತ್ತಿದ್ದೆ. ಆಗ 28–30 ವರ್ಷದ ಇಬ್ಬರು ಕಾರಿನ ಬಳಿ ಧಾವಿಸಿದರು. ಅವರಲ್ಲಿ ಒಬ್ಬ ನನ್ನನ್ನು ಡ್ರೈವಿಂಗ್ ಸೀಟ್‌ಗೆ ತಳ್ಳಿ, ಕಾರಿನ ಕೀ ಕಿತ್ತುಕೊಂಡು ಹಿಂದಿನ ಸೀಟ್‌ನಲ್ಲಿ ▶ 8ನೇ ಪುಟಕ್ಕೆ





ಹೆದ್ದಾರಿ ಖದೀಮರ ಬಗ್ಗೆ ಎಚ್ಚರ

ಶಿಕ್ಷಕ ನಾಗರಾಜ್ ದಂಪತಿ ಆ ಕ್ಷಣದ ಭಯ, ಯಾತನೆ ಕೇಳುವುದಕ್ಕೂ ಭಯವಾಗುತ್ತದೆ. ಇಂತಹ ದುಷ್ಕೃತ್ಯಗಳು ನಡೆಯುತ್ತಲೇ ಇವೆ. ರಾತ್ರಿಯಲ್ಲಿ ಹೆದ್ದಾರಿಯಲ್ಲಿ ಸಂಚರಿಸುವುದಕ್ಕೆ ಭಯವಾಗುತ್ತದೆ. ಮಾರ್ಗಮಧ್ಯೆ ವಾಹನ ನಿಲ್ಲಿಸುವುದಂತೂ ಇನ್ನೂ ಅಪಾಯಕಾರಿ. ಯಾವ ಸ್ಥಳದಲ್ಲಿ ದುಷ್ಕರ್ಮಿಗಳು ಹೊಂಚು ಹಾಕಿರುತ್ತಾರೋ ತಿಳಿಯುವುದಿಲ್ಲ. ಅದರಲ್ಲೂ ದಶಪಥದಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತಿರುತ್ತವೆ. ಹಾಗಾಗಿ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿರುವ ವಾಹನಗಳ ಮೇಲೆ ಹೆಚ್ಚು ಗಮನಹರಿಸುವುದಿಲ್ಲ. ಹೈವೇ ಪೆಟ್ರೋಲ್ ವಾಹನಗಳ ಮೂಲಕ ಪೊಲೀಸರು ಗಸ್ತು ಮಾಡಿದರೂ ದರೋಡೆಕೋರರ ಸದೆಬಡಿಯಲು ಸಾಧ್ಯವಾಗಿಲ್ಲ. ವಾಹನ ಸವಾರರ ಸುರಕ್ಷತೆಗೆ ಪೊಲೀಸರು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಿದೆ. ಜೊತೆಗೆ ಸಾರ್ವಜನಿಕರೂ ಎಚ್ಚರಿಕೆಯಿಂದಿರಬೇಕು. ರಾತ್ರಿ ವೇಳೆ ಒಂಟಿಯಾಗಿ ಪ್ರಯಾಣಿಸುವುದು ಅಪಾಯಕಾರಿ. ಮಾರ್ಗಮಧ್ಯೆ ಸುರಕ್ಷಿತ ಸ್ಥಳದಲ್ಲಷ್ಟೇ ವಾಹನ ನಿಲ್ಲಿಸುವುದು ಸೂಕ್ತ.

ಬರ್ತ್‌ಡೇ ಪಾರ್ಟಿಯಲ್ಲಿ ಮಾರಾಮಾರಿ

ಒಡೆದ ಬಾಟಲಿ, ಡ್ರ್ಯಾಗರ್‌ನಿಂದ ಇರಿತ

- ಮೂವರಿಗೆ ಗಾಯ
- ಮೈಸೂರಿನ ಹಿನಕಲ್ ರಿಂಗ್ ರಸ್ತೆ ಜಂಕ್ಷನ್ ಬಾರ್‌ನಲ್ಲಿ ಸೋಮವಾರ ತಡರಾತ್ರಿ ಘಟನೆ, ತಲೆಮರೆಸಿಕೊಂಡಿರುವ ಆರೋಪಿಗಾಗಿ ಪೊಲೀಸರ ಶೋಧ

ಮೈಸೂರು,ಫೆ.7(ಆರ್‌ಕೆ)–ಕ್ಷುಲ್ಲಕ ಕಾರಣಕ್ಕೆ ಬರ್ತ್‌ಡೇ ಪಾರ್ಟಿಯಲ್ಲಿ ಪಾನಮತ್ತ ವ್ಯಕ್ತಿಯೋರ್ವ ಮೂವರು ಸ್ನೇಹಿತರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಹಿನಕಲ್ ಬಳಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸೋಮವಾರ ತಡರಾತ್ರಿ ಸಂಭವಿಸಿದೆ.



ಹಿನಕಲ್ ನಿವಾಸಿಗಳಾದ ರವಿಸ್ವಾಮಿ, ಸಂತೋಷ್ ಕುಮಾರ್ ಹಾಗೂ ಚಂದ್ರು ಹಲ್ಲೆಯಿಂದ ಗಾಯಗೊಂಡವರು. ಕುಡಿದ ಮತ್ತಿನಲ್ಲಿ ಬಿಯರ್ ಬಾಟಲಿ ಮತ್ತು ಡ್ರ್ಯಾಗರ್‌ನಿಂದ ಹಲ್ಲೆ ಮಾಡಿದ್ದಾರೆನ್ನಲಾದ ವಿಜಯನಗರ ನಿವಾಸಿ ಅನುಶಿವಪ್ಪ ತಲೆಮರೆಸಿಕೊಂಡಿದ್ದು, ಆತನಿಗಾಗಿ ವಿಜಯನಗರ ಠಾಣೆ ಪೊಲೀಸರು ಬಲೆ ಬೀಸಿದ್ದಾರೆ.

ಘಟನೆಯ ವಿವರ: ಹಿನಕಲ್ ಜಂಕ್ಷನ್ ಬಳಿ ರಿಂಗ್ ರಸ್ತೆಯಲ್ಲಿರುವ ಭೂಮಿಪುತ್ರ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಪ್ರದೀಪ್ ಎಂಬುವರ ಬರ್ತ್‌ಡೇ ಪಾರ್ಟಿಯಲ್ಲಿ ರವಿಸ್ವಾಮಿ, ಸಂತೋಷ್, ಚಂದ್ರು, ಅನುಶಿವಪ್ಪ ಹಾಗೂ ಇತರರು ಮದ್ಯಪಾನ ಮಾಡಿದ್ದಾರೆ. ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಂಡ ಪ್ರದೀಪ್, ಸ್ನೇಹಿತರಿಗೆ ಪಾರ್ಟಿ ವ್ಯವಸ್ಥೆ ಮಾಡಿ, ಸ್ವಲ್ಪ ಹೊತ್ತಿನಲ್ಲೇ ಆತ ಅಲ್ಲಿಂದ ತೆರಳಿದ್ದ. ಪಾರ್ಟಿ ಮುಂದುವರೆದಿದ್ದು, ಮಾತು ಮಾತಿನ ನಡುವೆ ಕ್ಷುಲ್ಲಕ ಕಾರಣಕ್ಕೆ ಅನುಶಿವಪ್ಪ ಬಿಯರ್ ಬಾಟಲಿಯಿಂದ ರವಿಸ್ವಾಮಿಯ ಎಡಕಿವಿ ಭಾಗಕ್ಕೆ ಇರಿದಿದ್ದಾನೆ. ಅಲ್ಲದೆ ಚಂದ್ರುವಿನ ಎಡಮುಂಗೈಗೂ ಹೊಡೆದು ಗಾಯಗೊಳಿಸಿದ್ದಾನೆ. ಅದನ್ನು ತಡೆಯಲು ಹೋದ ಸಂತೋಷ್ ಕುಮಾರ್ ಹೊಟ್ಟೆ ಭಾಗಕ್ಕೆ 5 ಕಡೆ ಡ್ರ್ಯಾಗರ್‌ನಿಂದ ಇರಿದು, ತನ್ನ ಸ್ಕಾರ್ಪಿಯೋ ಕಾರಿನಲ್ಲಿ ಪರಾರಿಯಾಗಿದ್ದಾನೆ.

ತಕ್ಷಣ ಅವರನ್ನು ಮಧ್ಯರಾತ್ರಿ 1 ಗಂಟೆ ವೇಳೆಗೆ ಬೃಂದಾವನ ಆಸ್ಪತ್ರೆಗೆ ಕರೆತರಲಾಗಿದೆ. ತೀವ್ರವಾಗಿ ಗಾಯಗೊಂಡಿರುವ ಸಂತೋಷ್ ಮತ್ತು ರವಿಸ್ವಾಮಿ ಅವರಿಗೆ ಇಂದು ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಚಂದ್ರ ಹೊರರೋಗಿಯಾಗಿ ಚಿಕಿತ್ಸೆ ಪಡೆದಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಪ್ರದೀಪ್ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಸಿಸಿಟಿವಿ ▶ 8ನೇ ಪುಟಕ್ಕೆ

ಚಿನ್ನ–ಬೆಳ್ಳಿ ಆಭರಣಗಳ ತಯಾರಕರ ಮಾರಾಮಾರಿ ಮೂವರಿಗೆ ಗಾಯ

ಮೈಸೂರು, ಫೆ. 7(ಆರ್‌ಕೆ)– ಕಡಿಮೆ ವೇಸ್ಟೇಜ್‌ನಲ್ಲಿ ಆಭರಣ ಸಿದ್ಧಪಡಿಸುವುದಾಗಿ ಆಫರ್ ನೀಡಿದ್ದಾರೆಂಬ ಕಾರಣಕ್ಕೆ ಚಿನ್ನ–ಬೆಳ್ಳಿ ಆಭರಣ ತಯಾರಕರು ಮಾರಾಮಾರಿ ನಡೆಸಿರುವ ಘಟನೆ ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿ ಸೋಮವಾರ ಸಂಜೆ ನಡೆದಿದೆ. ನೂತನ್, ಚೇತನ ಮತ್ತು ಮನೋಜ್ ಗಲಾಟೆಯಲ್ಲಿ ಗಾಯಗೊಂಡವರಾಗಿದ್ದು, ಅವರು ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ.

ಮೈಸೂರಿನ ಇರ್ವಿನ್ ರಸ್ತೆಗೆ ಹೊಂದಿಕೊಂಡಂತಿರುವ ಮನೋಜ್ ಅಂಗಡಿಗೆ ನುಗ್ಗಿದ ಕೆಲ ಚಿನ್ನ–ಬೆಳ್ಳಿ ಆಭರಣ ತಯಾರಕರು, ಕಡಿಮೆ ವೇಸ್ಟೇಜ್‌ನಲ್ಲಿ ಆಭರಣ ತಯಾರಿಸಿ ಕೊಡುವುದಾಗಿ ಆಫರ್ ನೀಡಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ವಾಗ್ವಾದ ನಡೆಸಿದ್ದಾರೆ. ಈ ವೇಳೆ ಮಾತಿಗೆ ಮಾತು ಬೆಳೆದು ನೂಕಾಟ–ತಳ್ಳಾಟವಾಯಿತು. ಸಾಮಾನ್ಯವಾಗಿ ಶೇ.5ರಷ್ಟು ವೇಸ್ಟೇಜ್‌ನಲ್ಲಿ ಆಭರಣ ತಯಾರಿಸಲಾಗುತ್ತದೆ. ನೀವು ಶೇ.4ರಷ್ಟು ವೇಸ್ಟೇಜ್ ಆಫರ್ ನೀಡಿ ಭಿತ್ತಿಪತ್ರ ವಿತರಿಸಿರುವುದರಿಂದ ನಮಗೆ ನಷ್ಟವಾಗುತ್ತದೆ ಎಂದು ಜಗಳಕ್ಕಿಳಿದಿದ್ದಾರೆ. ಈ ವೇಳೆ ಸಮಜಾಯಿಷಿ ನೀಡುತ್ತಿದ್ದ ನೂತನ್, ಚೇತನ ಹಾಗೂ ಮನೋಜ್ ಮೇಲೆ ಗುಂಪು ಹಲ್ಲೆ ಮಾಡಿದೆ ಎಂದು ಹೇಳಲಾಗಿದೆ. ನೂತನ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್, ಸಿಸಿಟಿವಿ ಫುಟೇಜ್ ಪಡೆದು ತನಿಖೆ ನಡೆಸುತ್ತಿದ್ದಾರೆ.

ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ: ತ್ವರಿತಗತಿಯಲ್ಲಿ ಸಾಗಿದೆ

ಮೈಸೂರು ಭಾಗದ ಕೊನೆಯ ಹಂತದ ಕಾಮಗಾರಿ

ಮೈಸೂರು, ಫೆ. 7 (ಆರ್‌ಕೆ)– ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯ ಅಂತಿಮ ಹಂತದ ಕಾಮಗಾರಿ ಮೈಸೂರು ಭಾಗದಲ್ಲಿ ತೀವ್ರಗತಿಯಲ್ಲಿ ಸಾಗಿದೆ.

ಮೈಸೂರು ಭಾಗದ ಕಳಸ್ತವಾಡಿ ಮತ್ತು ಸಿದ್ದಲಿಂಗಪುರ ಬಳಿ ಹೆದ್ದಾರಿಯಡಿ ಹಾದು ಹೋಗಿರುವ ಕಾಲುವೆಗೆ ಸಿಮೆಂಟ್ ಕಾಂಕ್ರೀಟ್ ತಡೆಗೋಡೆ ಮತ್ತು ಹಳೇ ಸೇತುವೆ ತೆರವುಗೊಳಿಸಿ ಹೊಸದಾಗಿ ನಿರ್ಮಿಸುವ ಕಾಮಗಾರಿಯನ್ನು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳು ಇದೀಗ ಕೈಗೆತ್ತಿಕೊಂಡಿದ್ದಾರೆ.

ಫೆಬ್ರವರಿ ಅಂತ್ಯಕ್ಕೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಎನ್‌ಹೆಚ್–275 ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂಬ ಗುರಿ ಹೊಂದಿರುವ ಪ್ರಾಧಿಕಾರವು, ಮಾರ್ಚ್ ಮೊದಲು ಅಥವಾ ಎರಡನೇ ವಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ದಶಪಥ ಹೆದ್ದಾರಿಯನ್ನು ಲೋಕಾರ್ಪಣೆಗೊಳಿಸುವ ಉದ್ದೇಶದಿಂದ ಅಂತಿಮ ಹಂತದ ಕಾಮಗಾರಿಯನ್ನು ತ್ವರಿತಗತಿಯಿಂದ ನಡೆಸುತ್ತಿದೆ. ಕಳಸ್ತವಾಡಿ ಬಳಿ ಕಾಲುವೆ ಮೇಲೆ ರಸ್ತೆ ಹಾದು ಹೋಗಿದ್ದು, ಅದಕ್ಕೆ ಎರಡೂ ಬದಿಯಲ್ಲಿ ತಡೆಗೋಡೆ ನಿರ್ಮಿಸಿ ನೀರು ಸರಾಗವಾಗಿ ಹಾದು ಹೋಗಲು ಅನುವು ಮಾಡಿಕೊಡಲಾಗುವುದು. ರಸ್ತೆ ನಿರ್ಮಾಣವಾಗಿರುವುದರಿಂದ ತಳಭಾಗದಲ್ಲಿರುವ ಕಾಲುವೆಗೆ ನೀರು ಹರಿಸಿದಾಗ ಸಲೀಸಾಗಿ ಹರಿದು ಹೋಗಲು ತೊಂದರೆಯಾಗಿದ್ದರಿಂದ ನೀರು ತುಂಬಿ ಹರಿದು ರಸ್ತೆ ಬದಿಯ ಕೆಲ ಮನೆಗಳಿಗೆ ನುಗ್ಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದರು. ▶ 6ನೇ ಪುಟಕ್ಕೆ





ಈಗಾಗಲೇ ಹೆದ್ದಾರಿಯ ಕಾಮಗಾರಿ ಪೂರ್ಣಗೊಂಡಿದ್ದು, ರಾಮನಗರ, ಚನ್ನಪಟ್ಟಣ, ಮದ್ದೂರು ಹಾಗೂ ಶ್ರೀರಂಗಪಟ್ಟಣ ಬಳಿ ಬೈಪಾಸ್ ರಸ್ತೆಯನ್ನು ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಲಾಗಿದೆ. ಬೆಂಗಳೂರಿನ ನೈಸ್ ರಿಂಗ್ ರಸ್ತೆಯಿಂದ ಮೈಸೂರು ರಿಂಗ್ ರಸ್ತೆ ಜಂಕ್ಷನ್ ಅನ್ನು ಕೇವಲ 90 ನಿಮಿಷಗಳಲ್ಲಿ ತಲುಪಬಹುದಾಗಿದೆ. ಮಾರ್ಗ ಮಧ್ಯೆ ಎರಡು ಕಡೆ ಟೋಲ್ ಪ್ಲಾಜಾ ನಿರ್ಮಿಸಲಾಗಿದ್ದು, ಬೆಂಗಳೂರು–ನಿಡಘಟ್ಟ ನಡುವಿನ ಪ್ಲಾಜಾದಲ್ಲಿ ಫೆಬ್ರವರಿ 15 ರಿಂದ ಟೋಲ್ ಶುಲ್ಕ ವಸೂಲಿ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ವೇಗ ನಿಯಂತ್ರಿಸಿ ಅಪಘಾತಗಳನ್ನು ತಪ್ಪಿಸಲು ಹಾಗೂ ಕಳ್ಳತನ ತಡೆಗಟ್ಟುವ ದೃಷ್ಟಿಯಿಂದ ಹೆದ್ದಾರಿಯುದ್ದಕ್ಕೂ ಪ್ರತೀ 500 ಮೀಟರ್‌ಗೊಂದರಂತೆ ಸಿಸಿ ಕ್ಯಾಮರಾ ಅಳವಡಿಸಿ, ಹೈವೇ ಪೆಟ್ರೋಲಿಂಗ್ ವಾಹನ ಕಾರ್ಯಾಚರಣೆ ಮಾಡಲು ತಯಾರಿ ನಡೆಸಲಾಗಿದೆ. ಒಟ್ಟಾರೆ ಫೆಬ್ರವರಿ 28 ರೊಳಗಾಗಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹಗಲು–ರಾತ್ರಿ ಕಾಮಗಾರಿಯನ್ನು ಕೈಗೊಂಡಿದೆ.

ನೀರಿನ ಟ್ಯಾಂಕ್ ನಿರ್ಮಾಣ ಖಂಡಿಸಿ ವಿಶೇಷಚೇತನರ ಮುಂದುವರೆದ ಪ್ರತಿಭಟನೆ



ಮೈಸೂರು, ಫೆ.7 (ಎಂಟಿವೈ)–ಅಂಧ ಹಾಗೂ ಶ್ರವಣದೋಷವುಳ್ಳವರಿಗಾಗಿ ಮೀಸಲಿಟ್ಟ ಸ್ಥಳದಲ್ಲಿ ನಿರ್ಮಿಸಲುದ್ದೇಶಿಸಿರುವ ಬೃಹತ್ ಜಲ ಸಂಗ್ರಹಾಗಾರದ ಕಾಮಗಾರಿಯನ್ನು ಸ್ಥಳಾಂತರಿಸುವಂತೆ ಆಗ್ರಹಿಸಿ ಮಂಗಳವಾರವೂ ಕರ್ನಾಟಕ ಅಂಧರ ಸಂಘದ ಸದಸ್ಯರು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರಿನ ತಿಲಕ್‌ನಗರದಲ್ಲಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಬಳಿ ಪ್ರತಿಭಟನೆ ನಡೆಸಿದ ವಿಶೇಷಚೇತನರು, ಅಂಧ ಹಾಗೂ ಶ್ರವಣ ದೋಷವುಳ್ಳ ಮಕ್ಕಳ ಸರ್ಕಾರಿ ವಸತಿ ಪಾಠಶಾಲೆಗೆ 1901ರಲ್ಲಿ ಅಂದಿನ ಮೈಸೂರು ಮಹಾರಾಣಿ ಅವರು 8.5 ಎಕರೆ ಸ್ಥಳವನ್ನು ದೇಣಿಗೆಯಾಗಿ ನೀಡಿದ್ದ ಸ್ಥಳದಲ್ಲಿ, 10 ಲಕ್ಷ ಲೀಟರ್ ಸಾಮರ್ಥ್ಯದ ಬೃಹತ್ ಜಲ ಸಂಗ್ರಹಾಗಾರವನ್ನು ನಿರ್ಮಿಸಲು ಮುಂದಾಗಿರುವುದು ಖಂಡನೀಯ.

ತಿಲಕ್‌ನಗರದಲ್ಲಿರುವ ಅಂಧ ಮಕ್ಕಳ ಹಾಗೂ ಶ್ರವಣ ದೋಷವುಳ್ಳ ಮಕ್ಕಳ ಸರ್ಕಾರಿ ವಸತಿಯುತ ಪಾಠಶಾಲೆಯ ಸ್ಥಳದಲ್ಲಿ ಅಂಗವಿಕಲರ ಶೈಕ್ಷಣಿಕ ಸಂಸ್ಥೆಗಳನ್ನು ನಿರ್ಮಾಣ ಮಾಡಲು ಖಾಲಿ ಜಾಗದ ಅವಶ್ಯಕತೆ ಇದೆ. ಈ ಸ್ಥಳದಲ್ಲಿ ಅಂಧರ ಮತ್ತು ಶ್ರವಣದೋಷವುಳ್ಳವರಿಗಾಗಿ ವಿಶೇಷ ಬಿ.ಎಡ್., ಎಂ.ಎಡ್ ಕಾಲೇಜುಗಳು ಬ್ರೈಲ್ ಮತ್ತು ಮಾತನಾಡುವ ಗ್ರಂಥಾಲಯ, ಅಂಗವಿಕಲ ಸ್ನೇಹಿ ಪಾರ್ಕ್‌ಗಳು ನಿರ್ಮಿಸಬೇಕಾಗಿದೆ. ಆದ್ದರಿಂದ ಈ ಸ್ಥಳದಲ್ಲಿ ಪ್ರಗತಿಯಲ್ಲಿರುವ ಸಾರ್ವಜನಿಕ ಬೃಹತ್ ಜಲ ಸಂಗ್ರಹಾಗಾರವನ್ನು ಸ್ಥಳಾಂತರಿಸಬೇಕು. ಈ ಸ್ಥಳದಲ್ಲಿ ಕಾಮಗಾರಿ ಉದ್ದೇಶಕ್ಕಾಗಿ ನಾಶ ಮಾಡಲ್ಪಟ್ಟ ಕಾಂಪೌಂಡ್ ಗೋಡೆ ಮತ್ತು 35ಕ್ಕೂ ಹೆಚ್ಚು ಮರಗಳನ್ನು ಮರು ಸ್ಥಾಪಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಶ್ರೀನಿವಾಸ್, ಸುರೇಶ್, ಸತೀಶ್, ನಾಗೇಶ್, ಮಾರುತಿ, ನಾಗರಾಜು, ಯೋಗೇಂದ್ರಸ್ವಾಮಿ ಇತರರಿದ್ದರು.

ವಲಯವಾರು ನಗರಪಾಲಿಕೆ ಅದಾಲತ್‌ಗೆ ತೆರೆ

ಬಾಕಿಯಿದ್ದ 150ಕ್ಕೂ ಹೆಚ್ಚು ಪ್ರಕರಣ ಇತ್ಯರ್ಥ



ಮೈಸೂರು, ಫೆ.7(ಆರ್‌ಕೆ)–ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಕೈಗೊಂಡಿದ್ದ ಮೈಸೂರು ಮಹಾನಗರ ಪಾಲಿಕೆ ವಲಯವಾರು ಅದಾಲತ್ ಇಂದು ಮುಕ್ತಾಯಗೊಂಡಿದ್ದು, ಅನಗತ್ಯವಾಗಿ ಬಾಕಿ ಉಳಿದಿದ್ದ ಸಾರ್ವಜನಿಕರ 150ಕ್ಕೂ ಹೆಚ್ಚು ಅರ್ಜಿಗಳು ಇತ್ಯರ್ಥಗೊಂಡಿವೆ.

ಅಂತಿಮ ದಿನವಾದ ಇಂದು ಉದಯಗಿರಿಯಲ್ಲಿರುವ ಪಾಲಿಕೆ ವಲಯ ಕಚೇರಿ–8 ಮತ್ತು ಗಾಯತ್ರಿಪುರಂನ ಪಾಲಿಕೆ ವಲಯ ಕಚೇರಿ–9ರಲ್ಲಿ ನಡೆದ ಅದಾಲತ್‌ನಲ್ಲಿ ತಲಾ 15 ಮಂದಿ ಅರ್ಜಿದಾರರು ಭಾಗವಹಿಸಿ ಖಾತಾ ನೋಂದಣಿ, ವರ್ಗಾವಣೆ, ಕಂದಾಯ ನಿಗದಿ, ನೀರಿನ ಬಿಲ್, ಒಳಚರಂಡಿ, ಸೆಟ್ ಬ್ಯಾಕ್, ಸಿಆರ್., ಪ್ಲಾನ್, ಟ್ರೇಡ್ ಲೈಸೆನ್ಸ್ ಮುಂತಾದ ಸೇವೆಗಳಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಪಂದಿಸುತ್ತಿಲ್ಲ ಎಂದು ದೂರು ನೀಡಿದರು.

ಸಂಬಂಧಪಟ್ಟ ಕಡತ ತರಿಸಿದ ಮೇಯರ್ ಶಿವಕುಮಾರ್ ಹಾಗೂ ಉಪ ಮೇಯರ್ ಡಾ.ಜಿ.ರೂಪಾ, ದಾಖಲೆಗಳನ್ನು ಪರಿಶೀಲಿಸಿ, ಕೆಲವು ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಿದರೆ, ಉಳಿದವುಗಳಿಗೆ ಸೂಕ್ತ ಹಿಂಬರಹ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜ.20 ರಿಂದ ಆರಂಭವಾಗಿದ್ದ ವಲಯವಾರು ಪಾಲಿಕೆ ಅದಾಲತ್‌ನಲ್ಲಿ ಎಲ್ಲಾ 9 ವಲಯ ಕಚೇರಿಗಳಿಂದ 150ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದ್ದು, ಸಾರ್ವಜನಿಕರು ಕೇಳಿರುವ ಸೇವೆಯನ್ನು ಒದಗಿಸಲಾಗಿದೆ ಎಂದು ಮೇಯರ್ ತಿಳಿಸಿದ್ದಾರೆ.

ಅದಾಲತ್‌ನಲ್ಲಿ ಇತ್ಯರ್ಥವಾಗದ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ದಾಖಲೆ ತರಿಸಿಕೊಂಡು ನಿಯಮಾನುಸಾರ ತ್ವರಿತ ಗತಿಯಲ್ಲಿ ಸೇವೆ ಒದಗಿಸಬೇಕು. ವಿಳಂಬ ಮಾಡಿದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಸಿವೇಜ್ ಫಾರಂನಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ಇಂಟರ್‌ಲಾಕ್

ಮೇಯರ್ ಶಿವಕುಮಾರ್ ಪರಿಶೀಲನೆ



ಮೈಸೂರು, ಫೆ,7(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂನಲ್ಲಿರುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಇಂಟರ್‌ಲಾಕ್ ತಯಾರಿಸುವ ಘಟಕಕ್ಕೆ ಮೇಯರ್ ಶಿವಕುಮಾರ್ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

ಸಿವೇಜ್ ಫಾರಂನಲ್ಲಿ ಜಾಗೃತ್ ಟೆಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಪ್ಲಾಸ್ಟಿಕ್ ತ್ಯಾಜ್ಯದಿಂದ ಪಾದಚಾರಿ ಮಾರ್ಗಕ್ಕೆ ಬಳಸುವ ಇಂಟರ್ಲಾಕ್ ಸೇರಿದಂತೆ ಇನ್ನಿತರ ವಸ್ತುಗಳನ್ನು ತಯಾರಿಸುವ ಘಟಕ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ವಿವಿಧ ಅಲಂಕಾರಿಕ ವಸ್ತುಗಳ ತಯಾರಿಸುವುದನ್ನು ವೀಕ್ಷಿಸಿದರು. ಈ ವೇಳೆ ಸಂಸ್ಥೆಗೆ ಆಗಮಿಸಿದ ಮೇಯರ್ ಶಿವಕುಮಾರ್ ಅವರಿಗೆ ಜಾಗೃತ್ ಟೆಕ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ದಿನೇಶ್ ಬೋಪಣ್ಣ ಮಾಹಿತಿ ಪಡೆದರು.

ಈ ಕಾರ್ಖಾನೆಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯತೆ ಹೊಂದಿದ್ದು, ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕರು ಹಾಗೂ ಬ್ರಾಂಡ್ ಓನರ್ಸ್‌ಗಳು ಈ ಕಾರ್ಖಾನೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಇಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಬಳಸಿ ತಯಾರಿಸುವ ಉತ್ಪನ್ನಗಳನ್ನು ವಿವಿಧೆಡೆ ಮರುಬಳಕೆ ಮಾಡಲಾಗುತ್ತಿದೆ. ಪ್ರಸ್ತುತ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಮರುಬಳಕೆಗೆ ಯೋಗ್ಯವಲ್ಲದ ಪ್ಲಾಸ್ಟಿಕ್ ತ್ಯಾಜ್ಯದಿಂದ ಪಾದಚಾರಿ ಮಾರ್ಗಕ್ಕೆ ಇಂಟರ್ಲಾಕ್, ಟೈಲ್ ತಯಾರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು ಹಾಗೂ ವಲಯ ಸಹಾಯಕ ಆಯುಕ್ತರು ಹಾಜರಿದ್ದರು.

ಇಂದಿನಿಂದ ಜೆಡಿಎಸ್‌ನ 3ನೇ ಹಂತದ ಪಂಚರತ್ನ ಯಾತ್ರೆ ಶುರು



ಬೆಂಗಳೂರು, ಫೆ.7(ಕೆಎಂಶಿ)– ಸ್ವಂತ ಶಕ್ತಿಯ ಮೇಲೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು ಎಂಬ ಗುರಿ ಹೊಂದಿರುವ ಜೆಡಿಎಸ್‌ನ ಮೂರನೇ ಹಂತದ ಪಂಚರತ್ನ ರಥಯಾತ್ರೆ ನಾಳೆಯಿಂದ ಪ್ರಾರಂಭವಾಗಲಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುವ ಈ ಯಾತ್ರೆಯು ಉತ್ತರ ಕನ್ನಡ ಜಿಲ್ಲೆಯಿಂದ ಪ್ರಾರಂಭವಾಗಿ ತಿಂಗಳ ಅಂತ್ಯದವರೆಗೂ ಒಟ್ಟು 17 ದಿನಗಳ ಕಾಲ ಜರುಗಲಿದೆ. ಮೂರನೇ ಹಂತದಲ್ಲಿ 9 ಜಿಲ್ಲೆಯ 19 ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಮಲೆನಾಡು ಹಾಗೂ ಕಿತ್ತೂರು ಕರ್ನಾಟಕ ಭಾಗದ ಜೆಡಿಎಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಮಾತ್ರ ಯಾತ್ರೆ ಕೈಗೊಳ್ಳಲು ನಿರ್ಧರಿಸಲಾಗಿದೆ. ಈಗಾಗಲೇ ಎರಡು ಹಂತದ ಯಾತ್ರೆಯಲ್ಲಿ 60ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಪೂರ್ಣಗೊಳಿಸಲಾಗಿದೆ. ಈ ಹಂತದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಹೊಳೆನರಸೀಪುರ ಕ್ಷೇತ್ರಗಳಲ್ಲಿ ಫೆ.12ರಂದು ಪಂಚರತ್ನ ರಥಯಾತ್ರೆ ಕೈಗೊಳ್ಳಲಾಗುತ್ತದೆ. ಕುಮಟಾ ವಿಧಾನಸಭಾ ಕ್ಷೇತ್ರದಿಂದ ಪ್ರಾರಂಭವಾಗುವ ಈ ಯಾತ್ರೆಯು ಭಟ್ಕಳ, ಬೆಳಗಾವಿ ಜಿಲ್ಲೆಯ ಖಾನಾಪುರ, ರಾಯಭಾಗ, ಕುಡಚಿ ಮತ್ತು ಬೈಲಹೊಂಗಲ ಕ್ಷೇತ್ರಗಳಲ್ಲಿ ಜರುಗಲಿದೆ.

ಫೆ.14ರಂದು ಧಾರವಾಡ ಜಿಲ್ಲೆಯ ನವಲಗುಂದ, ಗದಗ ಜಿಲ್ಲೆಯ ಶಿರಹಟ್ಟಿ, ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಕ್ಷೇತ್ರಗಳಲ್ಲಿ ಯಾತ್ರೆ ನಡೆಸಲು ಉದ್ದೇಶಿಸಲಾಗಿದೆ. ಫೆ.17ರಿಂದ 20ರವರೆಗೆ ಬಿಡುವು ಕೊಡಲಿದ್ದು, ಮತ್ತೆ ಫೆ.21ರಿಂದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಕ್ಷೇತ್ರದಿಂದ ಯಾತ್ರೆ ಪ್ರಾರಂಭವಾಗುವುದು. ಬಳಿಕ ಶಿವಮೊಗ್ಗ ಗ್ರಾಮಾಂತರ, ಸೊರಬ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ, ಚಿಕ್ಕಮಗಳೂರು ಕ್ಷೇತ್ರಗಳಲ್ಲಿ ನಡೆಸಲು ವೇಳಾಪಟ್ಟಿ ಪ್ರಕಟಿಸಲಾಗಿದೆ.

ವೃತ್ತಿ ಶಿಕ್ಷಣ ಸುಧಾರಣೆ ಸಂಬಂಧ: ಫೆ.10, 11ರಂದು ಮೈಸೂರು ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಸಮಾವೇಶ

ಐಟಿ ಶಿಕ್ಷಣ ಮಾನದಂಡಗಳ ಮಂಡಳಿ ಮುಖ್ಯಸ್ಥ ಪ್ರೊ. ಶಡಗೋಪನ್ ಮಾಹಿತಿ





ಬೆಂಗಳೂರು,ಫೆ.7(ಕೆಎಂಶಿ)–ರಾಜ್ಯದಲ್ಲಿ ವೃತ್ತಿಪರ ಶಿಕ್ಷಣದ ಗುಣಮಟ್ಟ ಸುಧಾರಣೆ ಮತ್ತು ಐಟಿ ಉದ್ದಿಮೆಗೆ ಅಗತ್ಯವಾದ ಮಾನವ ಸಂಪನ್ಮೂಲದ ಬೆಳವಣಿಗೆಯ ಗುರಿ ಹೊಂದಿರುವ ಐಟಿ ಶಿಕ್ಷಣ ಮಾನದಂಡಗಳ ಮಂಡಳಿಯು ಫೆ.10 ಮತ್ತು 11ರಂದು ಮೈಸೂರಿನ ಇನ್ಫೋಸಿಸ್ ಲರ್ನಿಂಗ್ ಕ್ಯಾಂಪಸ್‌ನಲ್ಲಿ ತನ್ನ 4ನೇ ಸಮಾವೇಶವನ್ನು ಹಮ್ಮಿಕೊಂಡಿದೆ ಎಂದು ಸಂಘಟನೆಯ ಮುಖ್ಯಸ್ಥ ಪ್ರೊ.ಶಡಗೋಪನ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೈಗಾರಿಕಾ ಕ್ರಾಂತಿ 4.0 ಅವಕಾಶಗಳು ಮತ್ತು ಸವಾಲುಗಳು ವಿಚಾರ ಕುರಿತು ನಡೆಯಲಿರುವ ಸಮಾವೇಶದಲ್ಲಿ ಉನ್ನತ ಶಿಕ್ಷಣ ಹಾಗೂ ಐಟಿ–ಬಿಟಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಅವರು ಮುಂದಿನ 3 ವರ್ಷಗಳಲ್ಲಿ ಸಾಧಿಸಬೇಕಾದ ಹಲವು ಮಹತ್ವದ ಗುರಿಗಳನ್ನು ಇಟ್ಟುಕೊಂಡಿರುವ ಬೈಟ್ಸ್ ಉನ್ನತಿ ಕಾರ್ಯಕ್ರಮಕ್ಕೂ ಚಾಲನೆ ನೀಡಲಿದ್ದಾರೆ ಎಂದಿದ್ದಾರೆ. ಬೈಟ್ಸ್ ಉನ್ನತಿಯಡಿಯಲ್ಲಿ ರಾಜ್ಯದ ಗ್ರಾಮೀಣ ಭಾಗಗಳ 10 ಸಾವಿರ ವಿದ್ಯಾರ್ಥಿಗಳಿಗೆ ಉದ್ಯಮಕ್ಕೆ ಅಗತ್ಯವಾದ ತರಬೇತಿ ನೀಡಲಾಗುವುದು. ಸುಮಾರು ಒಂದು ಸಾವಿರ ಕಂಪನಿಗಳು ಕೃತಕ ಬುದ್ಧಿಮತ್ತೆಯ ವ್ಯವಸ್ಥೆ ಮೂಲಕ ಈ ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ಆಯ್ಕೆ ಮಾಡಿಕೊಳ್ಳಲಿವೆ. ಇದರೊಂದಿಗೆ ಸಾವಿರ ವಿದ್ಯಾರ್ಥಿನಿಯರಿಗೆ ಕಾರ್ಪೊರೇಟ್ ಸ್ಕಾಲರ್‌ಶಿಪ್ ಕೊಡಲಾಗುವುದು. ಭವಿಷ್ಯದ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಒಂದು ಸಾವಿರ ಬೋಧಕರಿಗೆ ಪ್ರಮಾಣ ಪತ್ರ ಸಹಿತ ತರಬೇತಿಗೆ ವ್ಯವಸ್ಥೆ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ಸಮಾವೇಶದಲ್ಲಿ ಉದ್ಯಮಗಳ ಪರಿಣತರು ವಿವಿಧ ಗೋಷ್ಠಿಗಳಲ್ಲಿ ಮಾತನಾಡಲಿದ್ದು, ಒಟ್ಟು 10 ಸಾವಿರ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಬೈಟ್ಸ್ ಉನ್ನತಿ ಉಪಕ್ರಮದಿಂದ 16 ಸರಕಾರಿ ಎಂಜಿನಿಯರಿಂಗ್ ಕಾಲೇಜುಗಳ ಸಹಿತ ಒಟ್ಟು 100 ಎಂಜಿನಿಯರಿಂಗ್ ಕಾಲೇಜುಗಳಿಗೆ ಲಾಭವಾಗಲಿದೆ. ಇದಕ್ಕೆ ಟಿಸಿಎಸ್, ಇನ್ಫೋಸಿಸ್, ವಿಪ್ರೋ, ಪರ್ಸಿಸ್ಟೆಂಟ್, ನೌಕರಿ ಮುಂತಾದ ಉದ್ದಿಮೆಗಳು ಕೈಜೋಡಿಸಿವೆ ಎಂದು ಪ್ರೊ. ಶಡಗೋಪನ್ ವಿವರಿಸಿದ್ದಾರೆ.

ಜೆಇಇ ಮುಖ್ಯ ಪರೀಕ್ಷೆ ಫಲಿತಾಂಶ: 20 ಅಭ್ಯರ್ಥಿಗಳಿಗೆ ನೂರಕ್ಕೆ 100 ಅಂಕ

ನವದೆಹಲಿ: ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಯಾದ ಜೆಇಇ–ಮೇನ್‌ನ ಜನವರಿ ಆವೃತ್ತಿಯಲ್ಲಿ 20 ಅಭ್ಯರ್ಥಿಗಳು ಪರಿಪೂರ್ಣ 100 ಅಂಕಗಳನ್ನು ಗಳಿಸಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ. 100ಕ್ಕೆ ನೂರು ಅಂಕಗಳನ್ನು ಪಡೆದಿರುವವರು ಪುರುಷ ಅಭ್ಯರ್ಥಿಗಳಾಗಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ. ಪರಿಶೀಲನೆಯಲ್ಲಿರುವುದರಿಂದ 50 ಅಭ್ಯರ್ಥಿಗಳ ಎನ್‌ಟಿಎ ಅಂಕಗಳನ್ನು ಸದ್ಯ ತಡೆಹಿಡಿಯಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ನಿರ್ಣಾಯಕ ಪರೀಕ್ಷೆಯ 2ನೇ ಆವೃತ್ತಿಯು ಏಪ್ರಿಲ್‌ನಲ್ಲಿ ನಡೆಯಲಿದೆ.

ಖಾಲಿಯಿರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಚುನಾವಣೆ ಅಧಿಸೂಚನೆ ಪ್ರಕಟ

ಮೈಸೂರು,ಫೆ.7–ಮೈಸೂರು ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ಖಾಲಿ ಇರುವ, ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆಯನ್ನು ನಡೆಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ರಾಜ್ಯ ಚುನಾವಣಾ ಆಯೋಗದ ಆದೇಶದ ಅನ್ವಯ ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸಿದ್ದಾರೆ.

ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮ ಪಂಚಾಯಿತಿ (ಗ್ರಾಪಂ ಸಂಖ್ಯೆ 22) ತೆರವಾಗಿರುವ ಕ್ಷೇತ್ರ ಹುಣಸನಾಳುವಿನಲ್ಲಿ 1 ಸ್ಥಾನ ಖಾಲಿ ಇದ್ದು, ಫೆ.8 ಬುಧವಾರದಂದು ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆ ಹೊರಡಿಸಲಿರುವರು. ನಾಮಪತ್ರಗಳನ್ನು ಸಲ್ಲಿಸಲು ಫೆ.14 ಮಂಗಳವಾರ ಕೊನೆಯ ದಿನವಾಗಿರುತ್ತದೆ. ಫೆ.15 ಬುಧವಾರದಂದು ನಾಮಪತ್ರಗಳನ್ನು ಪರಿಶೀಲಿಸಲಾಗುತ್ತದೆ. ಫೆ.17 ಶುಕ್ರವಾರ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿರುತ್ತದೆ. ಫೆ.25ರಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ. ಮರು ಮತದಾನದ ಅವಶ್ಯಕತೆ ಇದ್ದರೆ ಫೆ.27ರಂದು ಬೆಳಗ್ಗೆ 7ರಿಂದ ಸಂಜೆ 5ರವರೆಗೆ ಮರು ಮತದಾನ ನಡೆಯಲಿದೆ. ಫೆ.28 ಮಂಗಳವಾರದಂದು ಕೇಂದ್ರ ಸ್ಥಳದಲ್ಲಿ ಮತ ಎಣಿಕೆ ಮಾಡಲಾಗುತ್ತದೆ. ಚುನಾವಣೆಯನ್ನು ಫೆ.28 ಮಂಗಳವಾರದ ಮುಂಚೆಯೇ ಮುಕ್ತಾಯಗೊಳಿಸಲಾಗುವುದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಸಿರಂತೆ ಚುನಾವಣಾ ನೀತಿಸಂಹಿತೆಯು ಫೆ.8ರಿಂದ ಫೆ.28ರವರೆಗೆ ಜಾರಿಯಲ್ಲಿರುತ್ತದೆ. ಚುನಾವಣಾ ನೀತಿಸಂಹಿತೆಯು ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಕ್ಕೆ ಮಾತ್ರ ಅನ್ವಯವಾಗುತ್ತದೆ. ನೀತಿ ಸಂಹಿತೆಯು ಜಾರಿಯಲ್ಲಿರುವ ಪ್ರದೇಶಗಳಲ್ಲಿ 'ಮತದಾನವು ಮುಕ್ತಾಯಗೊಳ್ಳುವ ನಲವತ್ತೆಂಟು ಗಂಟೆಗಳ ಮೊದಲಿನ ಅವಧಿಯವರೆಗೆ' ಎಲ್ಲಾ ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಅದರ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರ ವ್ಯವಸ್ಥಾಪಕರು ಮುಚ್ಚತಕ್ಕದ್ದು ಹಾಗೂ ಮೊಹರು ಮಾಡಿ ಅದರ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸತಕ್ಕದ್ದು.

ರಾಜ್ಯ ಚುನಾವಣಾ ಆಯೋಗದ ಆದೇಶದಂತೆ NOTA (None of the above) (ಮೇಲಿನ ಯಾರೊಬ್ಬರಿಗೂ ಇಲ್ಲ) ಎಂದು ಮತ ಚಲಾಯಿಸಲು ಅವಕಾಶ ಇರುವುದಿಲ್ಲ. ಯಾವುದೇ ಮಾಹಿತಿಗಳು ಹಾಗೂ ದೂರುಗಳ ನಿರ್ವಹಣೆಗಾಗಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ, ಕಂಟ್ರೋಲ್ ರೂಂ ನಂಬರ್ 1077, ಉಪವಿಭಾಗ ಅಧಿಕಾರಿಗಳು, ಮೈಸೂರು ಉಪವಿಭಾಗ 0821–2422100 ಹಾಗೂ ನಂಜನಗೂಡು ತಾಲೂಕು ಕಚೇರಿ 08221–223108 ಅನ್ನು ಸಂಪರ್ಕಿಸಬಹುದಾಗಿದೆ.










ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ವೀರಶೈವ ಮುಖಂಡರು ಅಭಿನಂದಿಸಿದರು. ಈ ವೇಳೆ ವರುಣಾ ಮಹೇಶ್, ರವಿಶಂಕರ್, ಶಿವಕುಮಾರ್, ಮೂರ್ತಿ, ಪರಮೇಶ್ ಮತ್ತಿತರರಿದ್ದರು. ಬಲಚಿತ್ರದಲ್ಲಿ ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶುಭ ಕೋರಲಾಯಿತು. ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಪತ್ರಿಕಾ ಕಾರ್ಯದರ್ಶಿ ಶ್ರೀಕಾಂತ, ನಿರ್ದೇಶಕರಾದ ಗೋವಿಂದಶೆಟ್ಟಿ, ಮಾಜಿ ಕಾರ್ಪೊರೇಟರ್ ಸುನಿಲ್ ಉಪಸ್ಥಿತರಿದ್ದರು. ಮೈಸೂರು ನಗರದ ಕಾಂಗ್ರೆಸ್ ಮುಖಂಡರು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರಿಗೆ ಆತ್ಮೀಯವಾಗಿ ಭಾರೀ ಗಾತ್ರದ ಹೂವಿನ ಹಾರ ಹಾಕಿ, ಜನ್ಮದಿನ ಶುಭಾಶಯ ಕೋರಿದರು. ಮೈಸೂರಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ಅಮ್ಮನವರ ದರ್ಶನ ಪಡೆದು, ಗನ್‌ಹೌಸ್ ಬಳಿಯ ಭಕ್ತಿ ಭಂಡಾರಿ ಬಸವೇಶ್ವರ ಪುತ್ಥಳಿ, ರಾಷ್ಟ್ರಕವಿ ಕುವೆಂಪು ಪುತ್ಥಳಿ, ಕುರುಬಾರಹಳ್ಳಿಯ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪುತ್ಥಳಿ, ಅಶೋಕಪುರಂ ಉದ್ಯಾನವನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.



ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರನ್ನು ನಾಗರಿಕ ವೇದಿಕೆ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಉಪಾಧ್ಯಕ್ಷ ಪಿ.ರಮೇಶ್, ಕಾರ್ಯದರ್ಶಿ ಕುಳ್ಳೇಗೌಡ, ಶಾಲಾ ಸಮಿತಿ ಅಧ್ಯಕ್ಷ ಜಿ.ಲೋಕೇಶ್, ದೇವಸ್ಥಾನ ಸಮಿತಿ ಅಧ್ಯಕ್ಷ ಶ್ರೀರಂಗಯ್ಯ, ಕಟ್ಟಡ ಸಮಿತಿ ಅಧ್ಯಕ್ಷ ಶೈಲೇಂದ್ರ, ಸದಸ್ಯರಾದ ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಆರ್.ಶೇಷಾದ್ರಯ್ಯ



ಮೈಸೂರು,ಫೆ.7–ಮೈಸೂರಿನ ನಿವಾಸಿ ಆರ್.ಶೇಷಾದ್ರಯ್ಯ (90) ಸೋಮವಾರ ಬೆಂಗಳೂರಿನ ಜಯನಗರದ ತಮ್ಮ ಮಗಳ ಮನೆಯಲ್ಲಿ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾದ ನಂತರ ವಕೀಲ ವೃತ್ತಿಯನ್ನು ಮಾಡುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ (ಫೆ.7) ಬೆಂಗಳೂರಿನ ಚಾಮರಾಜಪೇಟೆ ಚಿತಾಗಾರದಲ್ಲಿ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.2.2023 ಬುಧವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ರಾಷ್ಟ್ರೀಯ ಏಕೀಕರಣ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, 9.30ಕ್ಕೆ ಶ್ರಮದಾನ, ಸಂಜೆ 4 ರಿಂದ ಪ್ರೊ. ಕೆ.ಎಂ. ವೀರಯ್ಯ ಅವರಿಂದ ರಾಷ್ಟ್ರೀಯ ಏಕೀಕರಣದ ಮಹತ್ವ ಕುರಿತು ಉಪನ್ಯಾಸ, ಸಂಜೆ 5.30ಕ್ಕೆ ಕ್ರೀಡೆ, ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಎನ್‌ಎಸ್‌ಎಸ್ ಭವನ, ಸರಸ್ವತಿಪುರಂ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** ವ್ಯವಹಾರಿಕ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಸಮಸ್ಯೆಗಳು ಮತ್ತು ಸವಾಲುಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಸ್ತಾವಿಕ ನುಡಿ : ಕೊಲಂಬೋ ಯುನಿವರ್ಸಿಟಿಯ ಡಾ. ಟಿಸ್ಸಾ ರವೀಂದ್ರ ಪೆರೆರಾ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಗೌರವ ಅತಿಥಿಗಳು : ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಕೆ. ಕೆಂಪೇಗೌಡ ಕ್ರೀಡಾ ಸಮುಚ್ಚಯ, ಕಾಲೇಜು ಆವರಣ, ಬೆಳಗ್ಗೆ 9 ರಿಂದ.

■ **ಸಮರ್ಥನಂ ಅಂಗವಿಕಲರ ಸಂಸ್ಥೆ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು :** ಬೃಹತ್ ಉದ್ಯೋಗ ಮೇಳ, ಸ್ಥಳ: ಕಾಲೇಜು ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು, ಸೊಂಟ, ಭುಜ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಫಿಜಿಯೋಥೆರಪಿ ಕಾಲೇಜು :** ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರ, ಬೆಳಗ್ಗೆ 10 ರಿಂದ ಉಚಿತ ಫಿಜಿಯೋಥೆರಪಿ ತಪಾಸಣೆ ಮತ್ತು ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ:ಶ್ರೀ ಮಹಾಂತೇಶ್ವರ ಮಠ, ಬರಡನಪುರ.

■ **ಡಿ. ಬನುಮಯ್ಯ ಸ್ವತಂತ್ರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಅಧ್ಯಕ್ಷತೆ : ಡಿ. ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ವಿ.ಬಿ. ಜಯದೇವ, ಉಪಸ್ಥಿತರು : ಡಾ. ಎನ್. ತಿಮ್ಮಯ್ಯ, ಶ್ರೀಮತಿ ವಿ.ಸಿ. ಕೋಮಲ, ಪ್ರಾಂಶುಪಾಲ ಎಂ. ಚಂದ್ರಶೇಖರ್, ಸ್ಥಳ: ಡಿ. ಬನುಮಯ್ಯ ಕಲಾಭವನ, ಬೆಳಗ್ಗೆ 10ಕ್ಕೆ

■ **ಜೆಡಿಎಸ್, ಚಾಮರಾಜ ಕ್ಷೇತ್ರ :** ಚಾಮರಾಜ ಕ್ಷೇತ್ರದ ವಿಧಾನಸಭಾ ವಾರ್ಡ್‌ಗಳ ಪೂರ್ವಭಾವಿ ಜನಸಂಪರ್ಕ ಮತ್ತು ಕಾರ್ಯಕರ್ತರ ಯೋಜನಾ ಸಭೆ, ಸ್ಥಳ: ವಿಜಯನಗರ ರೈಲ್ವೆ ಇಂದಿರಾ ನರ್ಸಿಂಗ್ ಹೋಂ ಎದುರಿನ ರಂಗಮಂಟಪ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ–ಸದಾಶಿವ ಪಾಟೀಲ್, ಜಿ. ಪುಷ್ಪಲತಾ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 9.00 ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆಯೋಜಿಸುತ್ತಿರುವ ಕಾರ್ಯಕ್ರಮದ ಪೂರ್ವಾ ಲೋಕನ–ಪ್ರಾಯೋಜಿತ ಕಾರ್ಯಕ್ರಮ, 10.00 ಹಿಂದೂಸ್ಥಾನಿ ಸಂಗೀತ– ನರಸಿಂಹಲು ವಡವಟ್ಟಿ–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ, 1.20 ಭಾವಗೀತೆ–ಸಿ.ಶಶಿಕಲಾ ಚಂದ್ರಶೇಖರ್, 3.00 ಲಯ ಸಂಭ್ರಮ–ಮೃದಂಗ ತರಂಗದಲ್ಲಿ ಲಯ ವಿನ್ಯಾಸ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, 6.50 ಕೃಷಿರಂಗ–ಕಿಸಾನ್ ವಾಣಿ–ಸಮಗ್ರ ಕೃಷಿಯ ಅನುಭವ ಕುರಿತು ಸುದರ್ಶನ ರಾವ್ ಶಿಂಧೆ ಅವರೊಂದಿಗೆ ಸಂದರ್ಶನ, 7.45 ಕ್ಷೇಮ ಕೇಂದ್ರಗಳು–ನೇರ ಫೋನ್ ಇನ್ ಕಾರ್ಯಕ್ರಮ, 9.30 ಮುಸ್ತಫಾ ಆಲಿ ಖಾನ್– ಹಾಡುಗಾರಿಕೆ

■ **ಸಂಸ್ಕೃತಿ, ಮೈಸೂರು :** ಶಿವೋಹಂ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ : ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕೃತರಾದ ಡಾ. ವಸುಂಧರಾ ದೊರೆಸ್ವಾಮಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ರಂಗಭೂಮಿ ಕಲಾವಿದ ಮೈಮ್ ರಮೇಶ್, ಸ್ಥಳ: ರಮಾ ಗೋವಿಂದ ಸಭಾಂಗಣ, ಗಾನಭಾರತಿ, ಕುವೆಂಪುನಗರ, ಸಂಜೆ 6 ರಿಂದ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ರಾಮಕೃಷ್ಣನಗರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಪ್ರತಿದಿನ ಸಂಜೆ 6.30 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 7 ರಿಂದ ಬಿ.ಕೆ. ಸಂಧ್ಯಾ ಅವರಿಂದ 'ಸೃಷ್ಟಿಯ ಆದಿ–ಮಧ್ಯ–ಅಂತ್ಯದ ರಹಸ್ಯ' ಕುರಿತು ಉಪನ್ಯಾಸ, ಸ್ಥಳ: ಖಾಲಿ ನಿವೇಶನ, ಸುಮಿತ್ರ ಸ್ಟೀಲ್ ಎದುರು, ಚದುರಂಗ ರಸ್ತೆ, ರಾಮಕೃಷ್ಣನಗರ, ಐ ಬ್ಲಾಕ್.

■ **ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ :** ಶ್ರೀ ಚಿಕ್ಕಲಿಂಗಣ್ಣ ಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಬೆಳಗ್ಗೆ 10 ಗಂಟೆಗೆ ಶ್ರೀ ದೇವಿ ಪೂಜೆ, ಸಂಜೆ 6.30 ರಿಂದ ವಿದುಷಿ ವಿ.ಎಸ್. ಶ್ರೀನಿವಾಸನ್ ಅವರಿಂದ ದೇವಿದರ್ಶನ ಪ್ರವಚನ, ಸ್ಥಳ: ದೇವಸ್ಥಾನ ಆವರಣ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯ ಬ್ರಹ್ಮೋತ್ಸವ, ರಾತ್ರಿ 7ಕ್ಕೆ ಶಯನೋತ್ಸವ, ಸ್ಥಳ: ಶ್ರೀ ತ್ರಿಣೇಶ್ವರ ಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಸಂಜೆ 6 ರಿಂದ ವಿದುಷಿ ಎನ್. ಭಾರತಿ ಅವರಿಂದ ವೀಣಾವಾದನ, ರಾತ್ರಿ 7.15 ರಿಂದ ವಿದುಷಿ ಎಂ.ಎಸ್. ಕೀರ್ತನಾ ಅವರಿಂದ ಗಾಯನ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು, ವಿದ್ವಾನ್ ಎಂ.ಎಸ್. ಜಯರಾಮ್–ಮೃದಂಗ, ಸ್ಥಳ: ಶ್ರೀ ವಿನಾಯಕ ದೇವಸ್ಥಾನ, ಕೃಷ್ಣದೇವರಾಯ ವೃತ್ತದ ಬಳಿ, 2ನೇ ಹಂತ ವಿಜಯನಗರ.

■ **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕಾರ್ಕಳ ಯಕ್ಷ ರಂಗಾಯಣದ ಸಂಚಾರಿ ರಂಗ ಕಲಾವಿದರಿಂದ ಪರಶುರಾಮ ನಾಟಕ ಪ್ರದರ್ಶನ, ರಚನೆ : ಶಶಿರಾಜ್ ಕಾವೂರು, ನಿರ್ದೇಶನ: ಡಾ. ಜೀವನ್ ರಾಂ ಸುಳ್ಯ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಸಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸ್ಥಳ: ಕಲಾಮಂದಿರ, ಸಂಜೆ 7ಕ್ಕೆ

■ **ಭಾಗವತೀಯ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ :** ಉಚಿತ ಆರೋಗ್ಯ ತಪಾಸಣೆ ಹಾಗೂ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಬಾಲಕೃಷ್ಣಾನಂದ ಮಠದ ಆವರಣ, ಗಜಾರಣ್ಯ ಕ್ಷೇತ್ರ, ತಲಕಾಡು, ಬೆಳಗ್ಗೆ 9 ರಿಂದ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನವೇ 200 ಯೂನಿಟ್ ವಿದ್ಯುತ್, ಯಜಮಾನಿಗೆ ಪ್ರತಿ ತಿಂಗಳು 2,000 ರೂ. ಜಾರಿ

ಕಲಬುರಗಿ, ಫೆ.7– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು, ಅಧಿಕಾರಕ್ಕೆ ಬಂದ ದಿನವೇ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್, ಪ್ರತಿ ಮನೆಯ ಯಜಮಾನಿಗೆ ತಿಂಗಳಿಗೆ 2,000 ರೂ. ಹಣ ನೀಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಶ್ವಾಸನೆ ನೀಡಿದರು.



ಜಿಲ್ಲೆಯ ಆಳಂದ ತಾಲೂಕಿನಲ್ಲಿ ಪ್ರಜಾಧ್ವನಿ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಾಣ ಹೋದರೂ ಈ 2 ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸಕ್ಕೆ ಮೊದಲ ಆದ್ಯತೆ ನೀಡಲಾಗುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ನಾ ಖಾವುಂಗಾ, ಖಾನೆ ದುಂಗಾ ಎಂಬ ಹೇಳಿಕೆಗೆ ವ್ಯಂಗ್ಯವಾಡಿದ ಅವರು, ರಾಜ್ಯದಲ್ಲಿ ಎಲ್ಲೆಡೆ 40 ಪರ್ಸೆಂಟ್ ದಂಧೆ ನಡೆದಿದೆ. ಶಾಸಕರಿಗೆ 40 ಪರ್ಸೆಂಟ್, ಸಂಸದರಿಗೆ 40 ಪರ್ಸೆಂಟ್, ಉಳಿದವರಿಗೆ 20 ಪರ್ಸೆಂಟ್ ಮಾತ್ರ. ಇದರಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆಯಾ ಎಂದು ಪ್ರಶ್ನಿಸಿದರು.

ಕಮಿಷನ್ ಸರ್ಕಾರದಲ್ಲಿ ಅಲಿ ಬಾಬಾ ಚಾಲಿಸ್ ಚೋರ್ ಇದ್ದಾರೆ. ಇಂತಹ ಲೂಟಿ ಹೊಡೆಯುವ ಸರ್ಕಾರವನ್ನು ನಾವು ಅಧಿಕಾರದಿಂದ ದೂರವಿಡಬೇಕಾಗಿದೆ. ಇವರ ಆಡಳಿತದಲ್ಲಿ ಅಚ್ಛೆ ದಿನ್ ಬಂದಿಲ್ಲ. ಬದಲಾಗಿ ಪ್ರತಿಯೊಂದರ ಬೆಲೆಗಳು ಗಗನಕ್ಕೆ ಏರಿವೆ. ಹಾಲು, ಮೊಸರು, ಮಜ್ಜಿಗೆ, ತುಪ್ಪಕ್ಕೆ ಶೂನ್ಯ ತೆರಿಗೆ ಇತ್ತು. ಆದರೆ ಇದೀಗ ಎಲ್ಲದಕ್ಕೂ ತೆರಿಗೆ ಹಾಕಿ ಬಡವರ ರಕ್ತ ಹೀರುವ ಮೂಲಕ ಹಾಗೂ ರೈತರ ಮನೆ ಹಾಳು ಮಾಡಿದ್ದಾರೆ ಎಂದು ಗುಡುಗಿದರು.

ಕೋಮುವಾದಿ ಸರ್ಕಾರ ದೂರವಿಡುವುದಕ್ಕೆ ನಾವು ಈ ಹಿಂದೆ ಜೆಡಿಎಸ್ ಜೊತೆಗೆ ಕೈ ಜೋಡಿಸಿದ್ದೆವು. 2018ರಲ್ಲಿ ಬಿಜೆಪಿ ರಾಜ್ಯದಲ್ಲಿ ಅತಿ ಹೆಚ್ಚು ಸ್ಥಾನ ಪಡೆದಿತ್ತು. ರಾಜ್ಯಪಾಲರು ಸರ್ಕಾರ ರಚನೆ ಮಾಡಲು ಯಡಿಯೂರಪ್ಪ ಅವರನ್ನು ಕರೆದರು. ಯಡಿಯೂರಪ್ಪ ಬಹುಮತ ಸಾಬೀತು ಮಾಡುವುದಕ್ಕೆ ಆಗದೆ, 3 ದಿನಕ್ಕೆ ಅಧಿಕಾರ ಕಳೆದುಕೊಂಡರು. ಕೇವಲ 37 ಸೀಟು ಹೊಂದಿದ್ದ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದೆವು. ಆದರೆ ಕುಮಾರಸ್ವಾಮಿ 1 ವರ್ಷ 2 ತಿಂಗಳಿಗೆ ಸರ್ಕಾರ ಕಳೆದುಕೊಂಡರು.

ಕುಮಾರಸ್ವಾಮಿ ಶಾಸಕ, ಮಂತ್ರಿಗಳಿಗೆ ಭೇಟಿ ಮಾಡಿದ್ದರೆ, ಸರ್ಕಾರ ಕಳೆದುಕೊಳ್ಳುತ್ತಿರಲಿಲ್ಲ. ಬದಲಾಗಿ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಕುಳಿತು ಬಿಟ್ಟರು. ಕೊಟ್ಟ ಕುದುರೆಯನ್ನು ಏರದವನು ವೀರನು ಅಲ್ಲ, ಶೂರನು ಅಲ್ಲ. ಹೀಗಾಗಿ ಕುಮಾರಸ್ವಾಮಿ ಅಧಿಕಾರ ಕಳೆದುಕೊಂಡು, ಬಿಜೆಪಿ ಅಧಿಕಾರಕ್ಕೆ ಬರುವ ಹಾಗೇ ಮಾಡಿದರು ಎಂದು ದೂರಿದರು.

ಮುಕ್ತ ಗಂಗೋತ್ರಿಯಲ್ಲಿ 'ಯುವ ಜನರಿಗಾಗಿ ಗಾಂಧಿ' ಕಾರ್ಯಕ್ರಮ

ಗಾಂಧಿ ಮಾರ್ಗದ ಕಡೆಗೆ ತುರ್ತಾಗಿ ಹೊರಳದಿದ್ದರೆ ಭಾರೀ ಆಪತ್ತು ಕಾದಿದೆ

ನಾಟಕಕಾರ, ರಂಗಕರ್ಮಿ ಪ್ರಸನ್ನ ಆತಂಕ

ಮೈಸೂರು, ಫೆ.7(ಆರ್‌ಕೆಬಿ)– ಪ್ರಸ್ತುತ ಸಂದರ್ಭದಲ್ಲಿ ನಾವು ತುರ್ತಾಗಿ ಗಾಂಧಿ ಮಾರ್ಗದ ಕಡೆಗೆ ಹೊರಳದಿದ್ದರೆ ಮುಂದೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ನಾಟಕಕಾರ, ರಂಗಕರ್ಮಿ ಪ್ರಸನ್ನ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಮಹಾತ್ಮಾ ಗಾಂಧಿ ಪೀಠದ ವತಿಯಿಂದ ಮುಕ್ತ ಗಂಗೋತ್ರಿ ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಯುವಜನರಿಗಾಗಿ ಗಾಂಧಿ' ಕುರಿತ ವಿಶೇಷ ಉಪನ್ಯಾಸ, ಪುಸ್ತಕ ಬಿಡುಗಡೆ, ಛಾಯಾಚಿತ್ರ ಪ್ರದರ್ಶನ ಹಾಗೂ ಖಾದಿ ವಸ್ತುಗಳ ಮಾರಾಟ ಕಾರ್ಯಕ್ರಮದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಸ್ಥಾವರಗಳ ನಿರ್ಮಾಣಗಳಿಂದ ಮುಂದಿನ 100 ವರ್ಷದಲ್ಲಿ ಮನುಕುಲ ನಾಶವಾಗಲಿದೆ ಎಂದು ವಿಜ್ಞಾನಿ ಸ್ಟೀಫನ್ ಹಾಕಿಂಗ್ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, ಇಂತಹ ತುರ್ತಿನ ಸಮಯದಲ್ಲಿ ಗಾಂಧಿ ಮಾರ್ಗದ ಕಡೆ ಹೊರಳಬೇಕಾಗಿದೆ. ಜೀವನಶೈಲಿಯನ್ನು ಬದಲಿಸಿಕೊಳ್ಳಬೇಕಿದೆ. ಎರಡು ಮೊಬೈಲ್ ಬದಲು ಒಂದು ಬಳಸಿದರೆ ಸಾಕು. ನಾವು ಗಾಂಧಿ ಕಡೆಗೆ ಇಡುವ ಒಂದು ಹೆಜ್ಜೆಯಾಗಿದೆ ಎಂದು ತಿಳಿಸಿದರು.

ಇಂದು ಒಳ್ಳೆಯ ವಿಚಾರಗಳನ್ನು ಸಂಕೇತಗಳನ್ನಾಗಿ ಮಾಡಿದ್ದಲ್ಲದೇ ಚೌಕಟ್ಟಿನಲ್ಲಿ ಬಂಧಿಸಿಡಲಾಗಿದೆ. ನಗರಗಳು ಬೆಳೆಯುತ್ತಿದ್ದಂತೆ, ಕಾಡುಗಳು ಅಳಿಯುತ್ತಿವೆ. ಎಲ್ಲವೂ ಮಾರಾಟದ ಸರಕಾಗಿವೆ. ಧರ್ಮಗಳು ಕಟ್ಟಾಟದ ವೇದಿಕೆಗಳಾಗಿವೆ. ಸತ್ಯ ವಿಚಾರಗಳನ್ನು ಹೇಳದೆ ಮಠ, ಮಂದಿರ, ಮಸೀದಿ, ಚರ್ಚ್‌ಗಳು ಕೇವಲ ಕಟ್ಟಡಗಳಾದರೆ, ಯುವ ಮನಸ್ಸುಗಳು ಅವುಗಳನ್ನು ತಿರಸ್ಕರಿಸಬೇಕು. ನಾವು ಸಂಕೇತಗಳ ಭ್ರಮಾಲೋಕದಿಂದ ಹೊರ ಬರಬೇಕು. ಸರಳ ಜೀವನ ಶೈಲಿ ಅಳವಡಿಸಿಕೊಂಡು, ಗಾಂಧಿ, ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಅದರಲ್ಲಿ ಕಾಣಬೇಕು. ಸತ್ಯ ಎನಿಸುವುದನ್ನು ಧೈರ್ಯವಾಗಿ ಹೇಳುವಂತಾಗಬೇಕು ಎಂದು ಹೇಳಿದರು.

ಗಾಂಧೀಜಿ ಯಂತ್ರವನ್ನು ವಿರೋಧಿಸುತ್ತಿರಲಿಲ್ಲ. ಆದರೆ ಇಂದು ಕಂಪ್ಯೂಟರ್‌ನಿಂದ ಕೃತಕ ಬುದ್ಧಿಮತ್ತೆ ಕಾಲಕ್ಕೆ ಬಂದಿದ್ದೇವೆ. ಎಲ್ಲವನ್ನೂ ಆ್ಯಪ್ ಮಾಡುವುದಾದರೆ ನಮಗೇನು ಕೆಲಸವಿದೆ ಎಂದು ಪ್ರಶ್ನಿಸಿದರು. ಜಂಗಮ ಕ್ರಿಯಾತ್ಮಕ, ಸ್ಥಾವರವೆಂದರೆ ಕಟ್ಟಡ. ಇವೆರಡನ್ನು ಗಾಂಧೀಜಿ ದೈವಿ ಸಂಬಂಧವಾಗಿ ನೋಡಿದರು. ಈ ಎರಡರಲ್ಲೂ ಒಂದು ದೊಡ್ಡದಾದರೆ ಅನಾಹುತ ನಡೆಯುತ್ತದೆ ಎಂದು ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ.ಕೃಷ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಡಾ.ಎನ್.ಆನಂದಗೌಡ, ಹಣಕಾಸು ಅಧಿಕಾರಿ ಖಾದರ್ ಪಾಷಾ, ಶೈಕ್ಷಣಿಕ ಡೀನ್ ಕಾಂಬ್ಳೆ ಅಶೋಕ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಅಧ್ಯಯನ ಕೇಂದ್ರದ ಡೀನ್ ಡಾ.ರಾಮನಾಥಂ ನಾಯ್ಡು, ಮಹಾತ್ಮ ಗಾಂಧಿ ಅಧ್ಯಯನ ಪೀಠ ನಿರ್ದೇಶಕರಾದ ಡಾ.ಆರ್.ಎಚ್.ಪವಿತ್ರಾ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಎನ್.ಆರ್.ಚಂದ್ರೇಗೌಡ, ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿದ್ದರು.



'ಯುವ ಜನರಿಗಾಗಿ ಗಾಂಧಿ' ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಗಾಂಧಿ ಕುರಿತ ಚಿತ್ರ ಪ್ರದರ್ಶನವನ್ನು ನಾಟಕಕಾರ, ರಂಗಕರ್ಮಿ ಪ್ರಸನ್ನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ಊಡೆ ಪಿ.ಕೃಷ್ಣ, ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ.ಜಿ.ಬಿ.ಶಿವರಾಜು ಇನ್ನಿತರರು ವೀಕ್ಷಿಸಿದರು.

ಗಮನ ಸೆಳೆದ 'ಗಾಂಧಿ ಲೋಕ'

'ಯುವಜನರಿಗಾಗಿ ಗಾಂಧಿ' ಕಾರ್ಯಕ್ರಮದಲ್ಲಿ ವಿಶೇಷವಾಗಿ ಗಮನ ಸೆಳೆದದ್ದು 'ಗಾಂಧಿ ಲೋಕ'. ಇಲ್ಲಿ ಖಾದಿ ಬಟ್ಟೆ, ಕರಕುಶಲ ವಸ್ತುಗಳು, ಸಿರಿಧಾನ್ಯದ ತಿನಿಸುಗಳು, ನೂಲುವ ಚರಕ, ನೈಸರ್ಗಿಕ ಒಡವೆಗಳು ಯುವಜನರನ್ನು ಆಕರ್ಷಿಸಿದವು. ಇಲ್ಲಿಗೆ ಭೇಟಿ ನೀಡಿದ ವಿವಿಧ ಕಾಲೇಜು ವಿದ್ಯಾರ್ಥಿಗಳು ತಮಗಿಷ್ಟವಾದ ಖಾದಿ ಬಟ್ಟೆ ಖರೀದಿಸಿದರು. ಸಿರಿಧಾನ್ಯದ ತಿನಿಸುಗಳನ್ನು ಸವಿದರು. ಛಾಯಾಚಿತ್ರ ಪ್ರದರ್ಶನದಲ್ಲಿ ಗಾಂಧೀಜಿಯವರ ಅಪರೂಪದ ಚಿತ್ರಗಳು ಕಂಡು ಸಂತಸಪಟ್ಟರು.

ಫೆ.13ರಂದು ಹಾವೇರಿ ಮೋಟೆಬೆನ್ನೂರಲ್ಲಿ ರೈತರ ಬೃಹತ್ ಸಮಾವೇಶ



ಮೈಸೂರು,ಫೆ.7(ಪಿಎಂ)– ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹಾವೇರಿ ಜಿಲ್ಲೆ ವತಿಯಿಂದ ಫೆ.13 ರಂದು ಹಾವೇರಿಯ ಮೋಟೆಬೆನ್ನೂರಿನಲ್ಲಿ ರೈತರ ಬೃಹತ್ ಸಮಾವೇಶ, ವಿಜಯೋತ್ಸವ ಹಾಗೂ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 87ನೇ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಮುಖಂಡ ಮಂಜು ಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು, ಅಳಲಗೇರಿ, ಅರಬಗೊಂಡ ಗ್ರಾಮಗಳಲ್ಲಿ 1017.17 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಇಂಡಸ್ಟ್ರಿಯಲ್ ಕಾರಿಡಾರ್ ನಿರ್ಮಾಣ ಸಲುವಾಗಿ ಭೂಸ್ವಾಧೀನಕ್ಕೆ ರಾಜ್ಯ ಸರ್ಕಾರ ಮುಂದಾಗಿತ್ತು. ಆದರೆ ರೈತರ ತೀವ್ರ ಹೋರಾಟದ ಬಳಿಕ ಭೂಸ್ವಾಧೀನ ಆದೇಶ ಹಿಂಪಡೆದಿದೆ. ಇದರ ವಿಜಯೋತ್ಸವದೊಂದಿಗೆ ಸಮಾವೇಶ ಮತ್ತು ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 87ನೇ ಜಯಂತಿ ಆಚರಿಸಲಾಗುತ್ತಿದೆ ಎಂದು ಹೇಳಿದರು. ಅಂದು ಬೆಳಗ್ಗೆ 10.30ಕ್ಕೆ ಬ್ಯಾಡಗಿ ಕ್ಷೇತ್ರದ ಶಾಸಕ ವಿರುಪಾಕ್ಷಪ್ಪ ರು.ಬಳ್ಳಾರಿ ಉದ್ಘಾಟನೆ ನೆರವೇರಿಸಲಿದ್ದು, ಇದೇ ವೇಳೆ 'ಭೂಸ್ವಾಧೀನದ ಒಳಸುಳಿಗಳು' ಪುಸ್ತಕ ಬಿಡುಗಡೆ ಮಾಡಲಾಗುವುದು ಎಂದರು.

ಸಂಘದ ಮುಖಂಡ ವಿದ್ಯಾಸಾಗರ್ ರಾಮೇಗೌಡ ಮಾತನಾಡಿ, ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಯೊಂದರ ಆರಂಭಕ್ಕೆ 2008ರಲ್ಲಿ ರೈತರ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. 2011ರಲ್ಲಿ ಕೈಗಾರಿಕೆ ಆರಂಭಗೊಂಡರೂ ಈವರೆಗೆ ಭೂಮಿ ನೀಡಿದ ರೈತರ ಮಕ್ಕಳಿಗೆ ಸದರಿ ಕೈಗಾರಿಕೆಯಲ್ಲಿ ಉದ್ಯೋಗ ನೀಡಿಲ್ಲ. ಇದನ್ನು ಖಂಡಿಸಿ ಶೀಘ್ರದಲ್ಲಿ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು. ಸಂಘದ ಮುಖಂಡರಾದ ಕೃಷ್ಣೇಗೌಡ, ಶಂಕರನಾಯಕ, ಮೋಹನ್, ನಾಗರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ಶಿವರಾತ್ರಿ ಸಮೀಪಿಸುತ್ತಿರುವಂತೆ ರುದ್ರಾಕ್ಷಿ, ಶಿವದಾರ, ವಿಭೂತಿಗೆ ಬಹುಬೇಡಿಕೆ

ಆಂಧ್ರಪ್ರದೇಶದಿಂದ ಸರಬರಾಜಾಗುತ್ತಿದೆ ವಿಶೇಷ ವಿಭೂತಿ ಪುಡಿ

ಮೈಸೂರು, ಫೆ.7(ಎಸ್‌ಪಿಎನ್)– ಶಿವರಾತ್ರಿ ಸಮೀಪಿಸುತ್ತಿರುವ ಬೆನ್ನಲ್ಲೇ ರುದ್ರಾಕ್ಷಿ ಶಿವದಾರದ ಜೊತೆಗೆ ಮಾರುಕಟ್ಟೆಯಲ್ಲಿ ಹೊಸ ವಿಭೂತಿಗೂ ಜನಸಾಮಾನ್ಯರಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ.

ಅದರಲ್ಲೂ ವಿಭೂತಿ ಗಟ್ಟಿಗಳಿಗೆ ಶಿವರಾತ್ರಿ ವೇಳೆ ಹೆಚ್ಚಿನ ಬೇಡಿಕೆ ಬರುವುದು ಸಾಮಾನ್ಯ. ಪ್ರತಿವರ್ಷ ಈ ಸಮಯದಲ್ಲಿ ಮಠ–ಮಾನ್ಯಗಳಿಂದ, ಪನ್ಸಾರಿ ಅಂಗಡಿಗಳಿಂದ ಹಾಗೂ ಇತರೆ ವ್ಯಾಪಾರಿಗಳಿಂದ ಹೆಚ್ಚಿನ ಬೇಡಿಕೆ ಬರುತ್ತಿದ್ದು, ಇದನ್ನು ಪೂರೈಸುವುದು ನಮಗೆ ಸಮಯ ಸಾಕಾಗುತ್ತಿಲ್ಲ ಎನ್ನುತ್ತಾರೆ ಗೌರಿಶಂಕರ ನಗರದ ನಿವಾಸಿ ಹಾಗೂ ವಿಭೂತಿ ತಯಾರಿಕ ರಾಜೇಶ್.

ನಾವು ಪ್ರತಿದಿನ ಬೆಳಗ್ಗೆ 5 ಗಂಟೆಗೆ ಎದ್ದು, ಆನ್‌ಲೈನ್‌ನಲ್ಲಿ ಬುಕ್ ಮಾಡಿ, ಆಂಧ್ರ ಪ್ರದೇಶದಿಂದ ವಿಭೂತಿ ಪುಡಿ ಮೂಟೆಯನ್ನು ತರಿಸುತ್ತೇವೆ. ಅದನ್ನು ನೀರಿನಲ್ಲಿ ಉನ್ಯಾಕಿ(ಚೆನ್ನಾಗಿ ನೆನಸಿ), ಇದರ ಜೊತೆಗೆ ಬೆಣ್ಣೆ ಪುಡಿ ಬೆರೆಸಿ ಚೆನ್ನಾಗಿ ಹದಾ ಮಾಡಿಕೊಂಡು ದಿನನಿತ್ಯ ಬೆಳಗ್ಗೆ 6ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಾನು, ನನ್ನ ಪತ್ನಿ ಸೇರಿ 250ರಿಂದ 350 ರವರೆಗೆ ಮೂರು ಹಂತದ ವಿಭೂತಿ(10, 15, 20 ರೂಗಳ)ಯನ್ನು ನಮ್ಮಲ್ಲಿ ಕಟ್ಟುತ್ತೇವೆ.



ಇದನ್ನು ಬಿಸಿಲಿನಲ್ಲಿ ಒಂದು ವಾರ ಚೆನ್ನಾಗಿ ಒಣಗಿಸಿ, ಪ್ಯಾಕ್ ಮಾಡಿ ಆರ್ಡರ್ ಕೊಟ್ಟವರಿಗೆ ಕಳುಹಿಸಿ ಕೊಡುತ್ತೇವೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಾತಾ–ಮುತ್ತಾತನ ಕಾಲದಿಂದ: ಈ ಕುಲ ಕಸುಬನ್ನು ತಾತಾ– ಮುತಾತನ ಕಾಲದಿಂದ ಉಳಿಸಿಕೊಂಡು ಬಂದಿದ್ದೇವೆ. ಈ ಕಸುಬನ್ನು ನಮ್ಮ ತಾಯಿ ಕಲಿತುಕೊಂಡಿದ್ದರು. ನನ್ನ ತಂದೆ ಊರು ಸಾಲಿ ಗ್ರಾಮದ ಬಳಿ ಹಾಗೂ ನನ್ನ ತಾಯಿ ವಿಜಯಪುರ ಜಿಲ್ಲೆಯವರು. ಸುಮಾರು ವರ್ಷಗಳಿಂದ ಕಸುಬು ಮಾಡಿಕೊಂಡಿದ್ದರು. ಅವರ ಜೊತೆಗೆ ನಾನು, ನನ್ನ ಪತ್ನಿ ನಾಗರತ್ನ ಹಾಗೂ ನಮ್ಮ ಇಬ್ಬರು ಹೆಣ್ಣು ಮಕ್ಕಳ ಸೇರಿಕೊಂಡು ಈ ಕುಲಕಸುಬು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ ಎಂದು ತಿಳಿಸಿದರು.

ವಿಭೂತಿ ತಯಾರಿಕೆಯನ್ನು ನಂಬಿಕೊಂಡು ಜೀವನ ನಡೆಸುವುದು ಕಷ್ಟ, ಹಾಗಾಗಿ ಈ ಕೆಲಸದ ಜೊತೆಗೆ ಬೇರೆ ಕೆಲಸವನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಆದರೂ ನಮ್ಮ ತಂದೆ – ತಾಯಿಯಿಂದ ಬಳುವಳಿಯಾಗಿ ಬಂದಿರುವ ವಿಭೂತಿ ತಯಾರಿಕೆ ಕುಲಕಸುಬನ್ನು ಉಳಿಸಿಕೊಳ್ಳುವುದು ನಮ್ಮ ಮುಂದಿರುವ ಸವಾಲಿನ ವಿಷಯ ಎಂದು.

ದೇವರು ಮೆಚ್ಚುವ ಕೆಲಸ: ವಿಭೂತಿ ತಯಾರಿಕೆಯಲ್ಲಿ ಯಾವುದೇ ಲಾಭಾಂಶವಿಲ್ಲದಿದ್ದರೂ ದೇವರ ಸೇವೆಗೆ ದೊರೆತ ಒಂದು ಸದಾವಕಾಶ ಎಂದು ತಿಳಿದು, ಈ ಕೆಲಸ ಮಾಡುತ್ತಿದ್ದೇವೆ. ನಾವು ಮಾಡುವ ವಿಭೂತಿಯನ್ನು ಸಾವಿರಾರು ಜನರು ಭಕ್ತಿ–ಭಾವದಿಂದ ಶಿವನ ಮುಂದಿಟ್ಟು, ದೇವರನ್ನು ನೆನೆಯುತ್ತಾರೆ. ನಂತರ ಹಣೆಗೆ ಹಚ್ಚಿಕೊಂಡು ಆ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಈ ಮೂಲಕವಾದರೂ ನಮಗೆ ಶಿವನ ಕೃಪೆ ದೊರಕುತ್ತದೆ ಎಂಬುದು ನಮ್ಮ ನಂಬಿಕೆ ಎಂದು ವಿಭೂತಿ ತಯಾರಿಕೆಯ ಹಿಂದಿನ ಆಧ್ಯಾತ್ಮ ಮೂಲವನ್ನು ತಿಳಿಸಿದರು.

ಸರ್ಕಾರದಿಂದ ಯಾವುದೇ ನೆರವಿಲ್ಲ: ವಿಭೂತಿ ಕುಲಕಸುಬು ನಡೆಸುವವರಿಗೆ ಸರ್ಕಾರದಿಂದ ನೆರವು ನೀಡುತ್ತೇವೆ ಎಂದು ಅಧಿಕಾರಿಗಳು ಬರೀ ಮಾತಿಗೆ ಮಾತ್ರ ಹೇಳುತ್ತಾರೆ. ಆದರೆ, ಇಲ್ಲಿಯವರೆಗೂ ಸರ್ಕಾರದಿಂದ ಯಾವುದೇ ನೆರವು ಸಿಗುತ್ತಿಲ್ಲ. ನಮಗೂ ಸ್ವಲ್ಪ ಆರ್ಥಿಕ ನೆರವು ಸಿಕ್ಕರೆ, ಈ ಕಸುಬು ಮುಂದುವರೆಸಲು ತುಂಬಾ ನೆರವಾಗುತ್ತದೆ. ಹಾಗಾಗಿ ಸರ್ಕಾರ ಈ ಕೆಲಸ ಮಾಡುವವರಿಗೆ ಅಧ್ಯಯನ ನಡೆಸಿ, ಶಾಶ್ವತ ನೆರವು ನೀಡಲಿ ಎಂದು ಒತ್ತಾಯಿಸಿದರು.

> ಶಿವರಾತ್ರಿ ಹಿನ್ನೆಲೆಯಲ್ಲಿ ಇಷ್ಟಲಿಂಗ ವಸ್ತ್ರ ರುದ್ರಾಕ್ಷಿ, ವಿಭೂತಿ, ಶಿವದಾರ, ರುದ್ರಾಭಿಷೇಕ ಸಾಮಗ್ರಿ, ಸೇರಿದಂತೆ ಇತರೆ ಪರಿಕರಗಳಿಗೆ ಹೆಚ್ಚಿನ ಬೇಡಿಕೆಯಿದೆ. ಸಾಮಾನ್ಯ ದಿನಗಳಲ್ಲೂ 5 ರೂ.ಗಳಿಂದ ಸಾವಿರ ರೂಗಳವರೆಗೆ ವಿಭೂತಿ ಹುಂಡಿಗಳಿಗೆ ಬೇಡಿಕೆಯಿದೆ.
> -ವ್ಯಾಪಾರಿ ವೆಂಕಟೇಶ್,
> ಎಲ್.ಲೋಕೇಶ್ ಪನ್ಸಾರಿ, ಅಂಗಡಿ, ದೇವರಾಜ ಮಾರುಕಟ್ಟೆ

ಟರ್ಕಿ, ಸಿರಿಯಾದಲ್ಲಿ ಭೂಕಂಪ: ಕನ್ನಡಿಗರ ಮಾಹಿತಿಗಾಗಿ ಶೀಘ್ರ ವಿಶೇಷ ಸಹಾಯವಾಣಿ

ಬೆಂಗಳೂರು, ಫೆ.7– ಟರ್ಕಿ ಹಾಗೂ ಸಿರಿಯಾದಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪದಲ್ಲಿ 6 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದು, ಅಲ್ಲಿರುವ ಭಾರತೀಯರು ಹಾಗೂ ಕನ್ನಡಿಗರ ಮಾಹಿತಿಗಾಗಿ ವಿಶೇಷ ಸಹಾಯವಾಣಿಯನ್ನು ವಿದೇಶಾಂಗ ಸಚಿವಾಲಯ ಹಾಗೂ ರಾಜ್ಯ ಸರ್ಕಾರ ಶೀಘ್ರದಲ್ಲೇ ಸ್ಥಾಪಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ರಾಜ್ಯ ಸರ್ಕಾರ ವಿದೇಶಾಂಗ ಸಚಿವಾಲಯದ ಜೊತೆ ಸಂಪರ್ಕದಲ್ಲಿದ್ದು, ಅಲ್ಲಿರುವ ಕನ್ನಡಿಗರಿಗೆ ನೆರವಾಗಲು, ಅವರ ಕುರಿತು ಮಾಹಿತಿಯನ್ನು ಸರ್ಕಾರದ ಜೊತೆ ಹಂಚಿಕೊಳ್ಳುವಂತೆ ಅವರ ಸಂಬಂಧಿಕರ ಬಳಿ ಮನವಿ ಮಾಡುತ್ತೇನೆ ಎಂದರು.

ಸೋಮವಾರ ಟರ್ಕಿ ಮತ್ತು ನೆರೆಯ ಸಿರಿಯಾದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಲ್ಲಿ 5,000ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದು, ಸಾವಿರಾರು ಕಟ್ಟಡಗಳು ಧ್ವಂಸಗೊಂಡಿವೆ. ಇದು ಟರ್ಕಿಯ ಆಗ್ನೇಯ ಪ್ರಾಂತ್ಯದ ಕಹ್ರಮನ್ಮರಸ್‌ನಲ್ಲಿ ಕೇಂದ್ರೀಕೃತವಾಗಿತ್ತು. ಭಾರತದಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ತಂಡ ಮಂಗಳವಾರ ಟರ್ಕಿಗೆ ತೆರಳಿದ್ದು, ಅಲ್ಲಿನ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ನೆರವಾಗಲಿದೆ.

ಹಸಿರು ನಮ್ಮ ಉಸಿರು

ಮೈಸೂರಿಗರಿಗೆ ದ್ವಾದಶ ಜ್ಯೋತಿರ್ಲಿಂಗ ದರ್ಶನಕ್ಕೆ ಫೆ.12ವರೆಗೆ ಅವಕಾಶ

ಮೈಸೂರು, ಫೆ.7(ಎಸ್‌ಪಿಎನ್)– ಮೈಸೂರಿನ ರಾಮಕೃಷ್ಣನಗರ 'ಐ' ಬ್ಲಾಕ್‌ನ ಚದುರಂಗ ರಸ್ತೆಯ ಮುಡಾ ಕಾಂಪ್ಲೆಕ್ಸ್ ಸಮೀಪದ ಖಾಲಿ ನಿವೇಶನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ದೇಶದ ವಿವಿಧ ಭಾಗದಲ್ಲಿರುವ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನಕ್ಕೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಫೆ.12ರವರೆಗೆ ಅನುವು ಮಾಡಿಕೊಟ್ಟಿದೆ.



ಗುಜರಾತ್ ರಾಜ್ಯದ ಸೌರಾಷ್ಟ್ರ ಭಾಗದ ವೇರಾವಳ್ ಪ್ರದೇಶದ ಸೋಮನಾಥೇಶ್ವರ, ಮಧ್ಯಪ್ರದೇಶದ ಉಜ್ಜಯಿನಿಯಲ್ಲಿನ ಮಹಾಕಾಳೇಶ್ವರ, ಉತ್ತರಾಖಂಡ್ ರಾಜ್ಯದ ಹಿಮಾಲಯ ಶ್ರೇಣಿಯ ಗಡ್ವಾಲ್ ಪ್ರದೇಶದ ಮಂದಾಕಿನಿ ಬಳಿಯಿರುವ ಕೇದಾರನಾಥ, ಮಹಾರಾಷ್ಟ್ರದ ಪುಣೆ ಬಳಿಯ ಖೇಡ್ ತಾಲೂಕಿನ ಭೀಮಾನದಿ ತೀರದಲ್ಲಿರುವ ಭೀಮಾಶಂಕರ, ಉತ್ತರ ಪ್ರದೇಶದ ವಾರಾಣಾಸಿಯ ಕಾಶಿವಿಶ್ವನಾಥ ಸ್ವಾಮಿ, ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಗೋದಾವರಿ ನದಿ ತೀರಾದಲ್ಲಿರುವ ತ್ರಯಂಬಕೇಶ್ವರ ದೇವಾಲಯ ಶಿವಲಿಂಗವನ್ನು ವೀಕ್ಷಿಸಬಹುದು.

ಅಲ್ಲದೆ, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೃಷ್ಣಾನದಿ ತೀರದಲ್ಲಿರುವ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ, ಜಾರ್ಖಂಡ್ ರಾಜ್ಯದ ದೇವಗಡ್‌ನಲ್ಲಿರುವ ವೈದ್ಯನಾಥೇಶ್ವರ, ಉತ್ತರಾಖಂಡ್ ರಾಜ್ಯದ ಜಾಗೇಶ್ವರದಲ್ಲಿರುವ ನಾಗೇಶ್ವರ, ತಮಿಳುನಾಡಿನ ರಾಮೇಶ್ವರಂನಲ್ಲಿರುವ ರಾಮೇಶ್ವರ ಸ್ವಾಮಿ, ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯ ನರ್ಮದಾ ನದಿತೀರದಲ್ಲಿರುವ ಓಂಕಾರೇಶ್ವರ, ರಾಜಸ್ಥಾನದ ಜೈಪುರದ ಸಮೀಪವಿರುವ ಶಿವಾರ್‌ದಲ್ಲಿರುವ ಘೃಷ್ಣೇಶ್ವರ ದೇವಾಲಯದಲ್ಲಿನ ವಿವಿಧ ಸ್ವರೂಪದ ಶಿವಲಿಂಗವಿನ ಮಾದರಿ ಸೇರಿದಂತೆ ಒಟ್ಟು 12 ಜ್ಯೋತಿರ್ಲಿಂಗಗಳನ್ನು ಪ್ರತಿಷ್ಠಾಪಿಸಿ, ರಾಮಕೃಷ್ಣನಗರದ ಸುತ್ತಮುತ್ತಲಿನ ಭಕ್ತರಿಗೆ ದರ್ಶನಕ್ಕೆ ಅನುವು ಮಾಡಿಕೊಡಲಾಗಿದೆ.

ಈ ಪ್ರಯುಕ್ತ ಬ್ರಹ್ಮಕುಮಾರಿ ಮಂಜುಳಾ ಅವರು 'ಪರಮಾತ್ಮನ ದರ್ಶನ' ಕುರಿತು ಪ್ರವಚನ ನೀಡಿದರು. ನಾಳೆ(ಫೆ.8) ಬ್ರಹ್ಮಕುಮಾರಿ ಸಂಧ್ಯಾ ಅವರು, 'ಸೃಷ್ಟಿಯ ಆದಿ–ಮಧ್ಯ–ಅಂತ್ಯದ ರಹಸ್ಯ'ದ ಬಗ್ಗೆ, ಫೆ.9ರಂದು ಬ್ರಹ್ಮಕುಮಾರಿ ರಶ್ಮಿ 'ಪುನರ್ಜನ್ಮದ ವೃತ್ತಾಂತ', ಕುರಿತು, ಫೆ10ರಂದು ಬ್ರಹ್ಮಕುಮಾರಿ ಯೋಗೇಶ್ವರಿ ಅವರು, 'ರಾಜಯೋಗಾ ಧ್ಯಾನದ ಮೂಲಕ ಅಷ್ಟ ಶಕ್ತಿಗಳ ಪ್ರಾಪ್ತಿ' ಕುರಿತು, ಫೆ.11ರಂದು ಬ್ರಹ್ಮಕುಮಾರಿ ವಾಣಿ ಅವರು, ಈಶ್ವರೀಯ ವಿವಿಯ ಸಾಧನೆಯ ಹಾದಿ ಕುರಿತು ಪ್ರವಚನ ನೀಡಲಿದ್ದು, ಈ ಭಾಗದ ಭಕ್ತರು ಬೆಳಿಗ್ಗೆ 5ರಿಂದ ಮಧ್ಯಾಹ್ನ 2 ಗಂಟೆ ಹಾಗೂ ಸಂಜೆ 5ರಿಂದ 9 ಗಂಟೆಯವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶಿವನ ಕೃಪೆಗೆ ಪಾತ್ರರಾಗಬೇಕು ಎಂದು ಈಶ್ವರೀಯ ವಿವಿಯ ಸಿಬ್ಬಂದಿಗಳು ಮಾಧ್ಯಮಗಳಿಗೆ ತಿಳಿಸಿದರು.

ಕ್ಲಿಷ್ಟ ಸಮಸ್ಯೆಗೆ ಯಶಸ್ವಿ ಶಸ್ತ್ರಚಿಕಿತ್ಸೆ



ಮೈಸೂರು,ಫೆ.7(ಪಿಎಂ)– ಮಹಿಳೆಯೊಬ್ಬರ ಗರ್ಭಾಶಯದ ಗೋಡೆಯೊಳಗೆ ಕ್ಲಿಷ್ಟಕರ ರೀತಿಯಲ್ಲಿ ಸಿಲುಕಿಕೊಂಡಿದ್ದ ಕಾಪರ್–ಟಿ ಅನ್ನು ಮಂಡಿ ಮೊಹಲ್ಲಾದ ಶ್ರೀ ನರ್ಸಿಂಗ್ ಹೋಮ್‌ನಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದಿದ್ದು, ಸದರಿ ಮಹಿಳೆಯು ಈಗ ಆರೋಗ್ಯದಿಂದ ಇದ್ದಾರೆ ಎಂದು ನರ್ಸಿಂಗ್ ಹೋಮ್‌ನ ನಿರ್ದೇಶಕ ಮತ್ತು ವೈದ್ಯ ಡಾ.ಚಂದ್ರಭಾನ್ ಸಿಂಗ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 31 ವರ್ಷ ವಯೋಮಾನದ ಸದರಿ ಮಹಿಳೆ ಗರ್ಭ ನಿರೋಧಕಕ್ಕಾಗಿ 6 ತಿಂಗಳ ಹಿಂದೆ ಕಾಪರ್–ಟಿ ಅಳವಡಿಕೆಗೆ ಒಳಗಾಗಿದ್ದರು. ಬಳಿಕ ಕಾಪರ್–ಟಿ ತೆಗೆಸಲು ಮುಂದಾದಾಗ ಸಮಸ್ಯೆ ಕಂಡು ಬಂದಿತು. ಎಕ್ಸ್‌ರೇ ಮತ್ತು ಅಲ್ಟ್ರಾಸೌಂಡ್ ಮೂಲಕ ಕಾಪರ್–ಟಿ ಗರ್ಭಾಶಯದ ಗೋಡೆಯಲ್ಲಿ ಸಿಲುಕಿರುವುದು ಗೋಚರಿಸಿತು. ಹಿಸ್ಟರೊಸ್ಕೋಪಿಕಲ್‌ನಲ್ಲಿ ಕಾಪರ್–ಟಿ ಅನ್ನು ಹೆಚ್ಚಿನ ಕೌಶಲ್ಯದಿಂದ ಹೊರ ತೆಗೆಯಲಾಯಿತು ಎಂದರು. ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ.ದೀಪಕ್, ಡಾ.ಚಂದ್ರಭಾನ್‌ಸಿಂಗ್ ಪತ್ನಿ ಸೋನಲ್, ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆಯ ಪತಿ ಗೋಷ್ಠಿಯಲ್ಲಿದ್ದರು.

ರಂಗಭೂಮಿಯಲ್ಲಿ ಪರಿಪೂರ್ಣ ಅಭಿನಯದಿಂದಷ್ಟೇ ಜನಮನ್ನಣೆ

'ನಟರಲ್ಲಿ ನಟನೆ' ಸಂವಾದದಲ್ಲಿ ವಿಚಾರ ಮಂಥನ

ಮೈಸೂರು, ಫೆ.7(ಎಂಕೆ)– ಸಮಾನತೆ, ಸಬಲೀಕರಣಕ್ಕೆ ಅವಕಾಶ ನೀಡುವ ರಂಗಭೂಮಿಯಲ್ಲಿ ಪರಿಪೂರ್ಣವಾಗಿ ತೊಡಗಿಸಿಕೊಂಡರಷ್ಟೇ ಜನಮಾನಸ ಗೊಳ್ಳಲು ಸಾಧ್ಯ. ನಟನೆಯು ರಂಗಕೃತಿ ಹಾಗೂ ನಿರ್ದೇಶಕರ ಆಶಯವನ್ನು ಪ್ರೇಕ್ಷಕರಿಗೆ ಮುಟ್ಟಿಸುವ ಜವಾಬ್ದಾರಿಯುತ ಕಾರ್ಯವಾಗಿದೆ ಎಂಬುದನ್ನು ಯುವ ನಟ–ನಟಿಯರಿಗೆ ಅರ್ಥಮಾಡಿಸಲಾಯಿತು.

ಕಲಾಮಂದಿರದ ಕಿರುರಂಗಮಂದಿರದಲ್ಲಿ ಆ್ಯಕ್ಟಿಂಗ್ ಶಾಸ್ತ್ರ ವತಿಯಿಂದ ಮಂಗಳವಾರ ಆಯೋಜಿಸಿದ್ದ 'ನಟರಲ್ಲಿ ನಟನೆ' ಸಂವಾದದಲ್ಲಿ ನಟನೆಗೂ ಮುನ್ನ ಮಾಡಿಕೊಳ್ಳಬೇಕಾದ ಸಿದ್ಧತೆ, ನಟನೆಯ ಜವಾಬ್ದಾರಿ ಸೇರಿದಂತೆ ಅಭಿನಯ ಕುರಿತು ಹಲವು ವಿಚಾರಗಳನ್ನು ಚರ್ಚಿಸಲಾಯಿತು.

ರಂಗಕರ್ಮಿ ಎಂ.ವಿ.ಪ್ರತಿಭಾ ಮಾತನಾಡಿ, ನಟನೆ ಎಂದರೆ ಜವಾಬ್ದಾರಿ. ಕಲಾವಿದರು ಹಲವು ಸವಾಲು ಗಳನ್ನು ಎದುರಿಸಿ ರಂಗಕೃತಿ ಹಾಗೂ ನಿರ್ದೇಶಕರ ಆಶಯವನ್ನು ಪ್ರೇಕ್ಷಕರಿಗೆ ಮುಟ್ಟಿಸುವುದಾಗಿದೆ. ಕೃತಿ ತಲುಪಿಸುವಾಗ ವಾಚಿಕ ಹಾಗೂ ಆಂಗಿಕದ ಎಳೆ ತಪ್ಪಿದರೆ ಮೂಡುವ ಅರ್ಥವೇ ಬೇರೆಯಾಗುತ್ತದೆ. ಹೀಗಾಗಿ ನಟನೆ ಎಂದರೆ ಎಚ್ಚರಿಕೆ ಇರಬೇಕು ಎಂದರು.



ನಾಟಕ ಪ್ರದರ್ಶನಕ್ಕಾಗಿ ದೂರದ ಊರುಗಳಿಗೆ ತೆರಳಬೇಕಾದಾಗಲೇ ಮುಟ್ಟಿನ ಸಮಸ್ಯೆ ಕಾಡಿದೆ. ಸುಸ್ತು–ಸಂಕಷ್ಟದ ನೋವು ನುಂಗಿಕೊಂಡು ಕೃತಿಯನ್ನು ಪ್ರೇಕ್ಷಕರತ್ತ ದಾಟಿಸುವುದೇ ನಟರ ಜವಾಬ್ದಾರಿಯಾಗಿದೆ. ಅದೊಂದು ಬದ್ಧತೆಯಾಗಿದೆ ಎಂದರಲ್ಲದೆ ನನ್ನ ಮೊದಲ ನಾಟಕ 'ವಸಂತ ಸೇನಾ'ದಲ್ಲಿ ವೇಶ್ಯೆಯ ಪಾತ್ರ ಮಾಡಿದಾಗ, 'ಕೆರೆಗೆ ಹಾರ' ನಾಟಕದಲ್ಲಿ ಭಾಗೀರಥಿ ಪಾತ್ರದಲ್ಲಿ ಸತ್ತು ಹೋದಾಗ ನನ್ನ ಅಮ್ಮ ಸಂಕಟ ಪಟ್ಟಿದ್ದರು. ನಾಟಕಗಳಲ್ಲಿ ಮಹಿಳೆಯರಿಗೆ ಒಳ್ಳೆಯ ಪಾತ್ರಗಳು ಸಿಗುವುದೇ ಕಷ್ಟವಿತ್ತು. ಕಾಗೆ ಗುಬ್ಬಿಯಂಥಹ ಸಣ್ಣ ಸಣ್ಣ ಪಾತ್ರಗಳು ಸಿಗುತ್ತಿದ್ದವು. ಹೋರಾಟ ಮಾಡಿ ಪಾತ್ರಗಳನ್ನು ಪಡೆದುಕೊಳ್ಳಬೇಕಿತ್ತು ಎಂದು ತಮ್ಮ ರಂಗಭೂಮಿಯ ನಡೆಯನ್ನು ಸ್ಮರಿಸಿದರು.

ಸಂಘಟನೆ ಕಷ್ಟ: ಹವ್ಯಾಸಿ ಕಲಾವಿದರೇ ರಂಗ ಸಂಘಟಕರಾಗಿರುತ್ತಾರೆ. ನಟನೆ ಹಾಗೂ ಸಂಘಟನೆ ಎರಡನ್ನೂ ನಿಭಾಯಿಸುವುದು ದೊಡ್ಡ ಸವಾಲು. ಪಾತ್ರದಲ್ಲಿ ತಲ್ಲೀನರಾಗುವುದು ಕಷ್ಟವಾಗುತ್ತದೆ. ಸಂಘಟನೆಯಲ್ಲಿ ಕೊರತೆಗಳು ಉಂಟಾಗದಂತೆ ನೋಡಿಕೊಂಡು ಅಭಿನಯದ ಕಡೆಗೂ ಗಮನಹರಿಸುವುದು, ಎಲ್ಲವನ್ನು ನಿರ್ವಹಿಸುವುದು ಬಹಳ ದೊಡ್ಡ ಜವಾಬ್ದಾರಿಯಾಗಿದೆ ಎಂದರು.

ರಂಗಕರ್ಮಿ ವಾಣಿ ಪೆರಿಯೋಡಿ ಮಾತನಾಡಿ, ಸಾಂಪ್ರದಾಯಿಕ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ದೇಹವೆಂದರೆ ಮಲಿನ. ತಗ್ಗಬೇಕು, ಬಾಗಬೇಕು. ಕಾಲ ಮೇಲೆ ಕಾಲುಹಾಕಿ ಕೂರುವಂತಿಲ್ಲ. ಮುಟ್ಟಾದಾಗ ಹೊರಗೆ ಕೂರಬೇಕು. ದೇಹವೆಂದರೆ ನಾಚಿಕೆ ಎನಿಸುವಂತಹ ಕಠಿಣ ಪರಿಸ್ಥಿತಿ ಇರಲಿದೆ. ಇದೆಲ್ಲವನ್ನೂ ಮೀರಿ, ದೇಹ ಮತ್ತು ಮನಸ್ಸನ್ನು ಕೇಂದ್ರೀಕರಿಸಿದರಷ್ಟೇ ಅಭಿನಯ ಸಾಧ್ಯವಾಗುವುದು ಎಂದರು. ಹಿರಿಯ ರಂಗಕರ್ಮಿ ಪ್ರೊ.ರಾಮೇಶ್ವರಿ ವರ್ಮಾ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿಗಳಾದ ಮಲ್ಲಿಕಾ ಪ್ರಸಾದ್ ಸಿನ್ಹಾ, ಬಿಂದು ರಕ್ಷಿದಿ, ಪತ್ರಕರ್ತೆ ಪ್ರೀತಿ ನಾಗರಾಜ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ವಾರಕ್ಕೆ ಎಷ್ಟು ದಿನ...?
ತಿಮ್ಮ : ಏಳು ದಿನ....
ಟೀಚರ್ : ಅವು ಯಾವುವು ಹೇಳು, ನೋಡೋಣ...?
ತಿಮ್ಮ : ನಿನ್ನೆ, ಮೊನ್ನೆ, ಆಚೆ ಮೊನ್ನೆ, ನಾಳೆ, ನಾಡಿದ್ದು, ಆಚೆ ನಾಡಿದ್ದು...
ಟೀಚರ್ : ಆರು ದಿನಗಳಾಯ್ತು, ಇನ್ನೊಂದು ಎಲ್ಲಿ.
ತಿಮ್ಮ : ಅದು ಇವತ್ತು !

ಮೈಸೂರು ಮಿತ್ರ

ಬುಧವಾರ, 8 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಯಾವನೊಬ್ಬನನ್ನಾಗಲೀ ಯಶದ ಹಾದಿಗೆ ಒಯ್ಯುವ ಮೂರು ಮುಖ್ಯ ಅಂಶಗಳೆಂದರೆ ಆತ್ಮವಿಶ್ವಾಸ, ನಿಶ್ಚಿತಗುರಿ ಮತ್ತು ಸಂಯಮ –ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಂಡರೆ ಸೇರದವನಿಗೆ ಉಂಡರೆ ಸೇರೀತೆ?

ನಿಮ್ಮ ಪತ್ರಗಳು

ಹಿರಿಯ ನಾಗರಿಕರಿಗೆ ರೈಲು ಪ್ರಯಾಣ ದರದಲ್ಲಿ ರಿಯಾಯಿತಿ ನೀಡಲಿ

ಮಾನ್ಯರೆ,

ರೈಲ್ವೆ ಇಲಾಖೆ ಈ ಹಿಂದೆ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರೈಲು ಪ್ರಯಾಣ ದರ ರಿಯಾಯಿತಿಯನ್ನು ಕೊರೊನಾ ಹಿನ್ನೆಲೆಯಲ್ಲಿ ನಿಲುಗಡೆ ಮಾಡಿತ್ತು. ಕೊರೊನಾ ಕಡಿಮೆ ಆಗಿ ಜನಜೀವನ ಎಂದಿನಂತೆ ಸಾಗುತ್ತಿದ್ದರೂ ರೈಲ್ವೆ ಇಲಾಖೆ ಹಿರಿಯ ನಾಗರಿಕರ ಪ್ರಯಾಣ ದರದಲ್ಲಿ ರಿಯಾಯಿತಿ ಇನ್ನೂ ನೀಡುತ್ತಿಲ್ಲ. ಹಿರಿಯ ನಾಗರಿಕರಿಗೆ ಬರುವ ಕಡಿಮೆ ಪಿಂಚಣಿಯಲ್ಲಿ ತಮ್ಮ ಕುಟುಂಬ ಮತ್ತು ಸದಸ್ಯರ ಖರ್ಚು ಈಗಿನ ದುಬಾರಿ ದರದಲ್ಲಿ ನಿರ್ವಹಿಸಬೇಕಾಗಿರುವುದು ಕಷ್ಟಸಾಧ್ಯ. ರೈಲ್ವೆ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳು ಇದರ ಬಗ್ಗೆ ಗಮನಿಸಿ ತುರ್ತಾಗಿ ಹಿರಿಯ ನಾಗರಿಕರಿಗೆ ರೈಲು ಪ್ರಯಾಣ ದರದಲ್ಲಿ ಶಾಶ್ವತವಾಗಿ ರಿಯಾಯಿತಿ ನೀಡುವಂತೆ ಆದೇಶ ನೀಡಲಿ.

– ನೊಂದ ಅಸಂಖ್ಯಾತ ಹಿರಿಯ ನಾಗರಿಕರು, ಮೈಸೂರು.

ಸಮರ್ಪಕವಾಗಿ ನೀರು ಪೂರೈಕೆಯಾಗಲಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ವಿ.ವಿ. ಮೊಹಲ್ಲಾ ಭಾಗದಲ್ಲಿ ನಿರಂತರವಾಗಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಲೇ ಇರುತ್ತದೆ. ಸಂಬಂಧಪಟ್ಟ ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೇಳಿದರೆ ದುರಸ್ತಿ ಕಾರ್ಯ ನಡೆಯುತ್ತಿದೆ ಎಂದು ಕಾರಣ ಕೊಡುತ್ತಾರೆ. ನಾನು ಈ ಬಗ್ಗೆ ಮೇಟಗಳ್ಳಿ ನಿವಾಸಿಗಳನ್ನು ಕೇಳಿದಾಗ ನಮ್ಮ ಭಾಗದಲ್ಲಿ 24x7 ನೀರು ಬರುತ್ತದೆ ಎಂದು ತಿಳಿಸಿದರು. ಅತಿಯಾಗಿ ನೀರಿನ ಶುಲ್ಕ ವಿಧಿಸುವ ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಅಧಿಕಾರಿಗಳು ನೀರು ಸರಬರಾಜು ಬಗ್ಗೆ ಗಮನ ಹರಿಸಲು ಮನವಿ.

–ಜಿ.ಪಿ. ರಾಜೇಶ, ವಿ.ವಿ. ಮೊಹಲ್ಲಾ, ಮೈಸೂರು.

ಸುದ್ದಿ ಬಿತ್ತರಿಸುವ ಭರದಲ್ಲಿ ಆತುರ ಬೇಡ

ಮಾನ್ಯರೇ,

ರಾಷ್ಟ್ರಪ್ರಶಸ್ತಿ ವಿಜೇತೆ ಪದ್ಮಭೂಷಣ ಶ್ರೀಮತಿ ವಾಣಿ ಜಯರಾಮ್ ಅವರು ಫೆ. 4 ರ ಶನಿವಾರದಂದು ನಿಧನರಾದರು. ಇನಿದನಿಯ ಮೋಹಕ ಕಂಠದ ಗಾಯಕಿ ತಮ್ಮ ಸುಮಧುರ ಗಾಯನದಿಂದ ರಸಿಕರನ್ನು ಮಂತ್ರಮುಗ್ಧರನ್ನಾಗಿಸಿದ್ದರು. ಅಷ್ಟೇ ಅಲ್ಲ ಆ ಗಾನ ಶಾರದೆಯ ಸಂಗೀತ ಸುಧೆಯಿಂದ ಅನೇಕ ಸಂಗೀತ ಅಭಿಮಾನಿಗಳು ಅವರನ್ನು ಆರಾಧಿಸುತ್ತಿದ್ದರು. ವಾಣಿ ಜಯರಾಮ್ ಅವರ ಸಾಧನೆ ವಿಶ್ವ ಮಟ್ಟದ್ದು. ಅವರ ಸಂಗೀತದ ಆರಾಧಕರು ಇಡೀ ವಿಶ್ವದಲ್ಲಿ ನೆಲೆಸಿದ್ದಾರೆ.

ಇಂಥಹ ಮಹಾನ್ ಸಾಧಕಿ ಅಪ್ರತಿಮ ಗಾಯಕಿ ಗಾನ ಶಾರದೆ ನಿಧನರಾದಾಗ ಮಾಧ್ಯಮಗಳು ಆ ಸಾವನ್ನು ವೈಭವೀಕರಿಸಿ ನಿಗೂಢ ಸಾವು ಎಂದು ಬಿತ್ತರಿಸುವ ಆತುರ ಏಕೆ? ಕೊಂಚ ತಾಳ್ಮೆಯಿಂದ ಕಾದು ನೈಜ ಸುದ್ದಿ ಪ್ರಸಾರ ಮಾಡಬೇಕು. ಅವರ ಕುಟುಂಬದವರು ಅನುಮಾನ ಪಟ್ಟು ದೂರು ನೀಡಿದ್ದರಾ? ಇಲ್ಲ ಅಲ್ವಾ...

ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಬಿದ್ದು ಪೆಟ್ಟಾದರೆ ರಕ್ತ ಸಿಕ್ತವಾಗುವುದು ಸಹಜ. ಅಷ್ಟಕ್ಕೇ. ಕೊಲೆ, ನಿಗೂಢ ಸಾವು ಎಂದೆಲ್ಲಾ ಪ್ರಚಾರ ಮಾಡಿದರೆ ನಾವು ಆ ಮಹಾನ್ ಕಲಾವಿದೆಗೆ ಅಪಮಾನ ಮಾಡಿದಂತೆ ಅಲ್ಲವೇ?

ಈ ರೀತಿ ಸುದ್ದಿಗಳ ಪ್ರಸಾರ ನಿಜಕ್ಕೂ ವಿಷಾದನೀಯ ಹಾಗೂ ಖಂಡನೀಯ. ಗಾನ ಶಾರದೆ ವಾಣಿ ಜಯರಾಮ್ ಅವರಿಗೆ ಭಾವಪೂರ್ಣ ನಮನ ಸಲ್ಲಿಸುತ್ತಾ, ಇನ್ನಾದರೂ ಮಾಧ್ಯಮಗಳು ಸುದ್ದಿ ಪ್ರಸಾರ ಮಾಡುವಾಗ ಸ್ವಲ್ಪ ತಾಳ್ಮೆ ಹಾಗೂ ಮಾನವೀಯತೆ ತೋರಲಿ ಎಂದು ಮನವಿ.

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು.

ಎಸ್‌ಎಸ್‌ಎಲ್‌ಸಿ: ಎಲ್ಲಾ ವಿದ್ಯಾರ್ಥಿಗಳಿಗೂ ಅನುತ್ತೀರ್ಣತೆ ಶಿಫಾರಸ್ಸುಗಳು ಅನ್ವಯಿಸಲಿ

ಮಾನ್ಯರೆ,

ಎಸ್ಸಿ, ಎಸ್ಟಿ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳುವುದೂ ಸೇರಿದಂತೆ ಹಲವು ಮಹತ್ವದ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಸರ್ಕಾರಕ್ಕೆ ಸಲ್ಲಿಸಿದೆ. ಎಸ್ಸಿ, ಎಸ್ಟಿ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಲು 35 ಅಂಕಗಳನ್ನು ಪಡೆಯಬೇಕಾಗಿದೆ. ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 28 ಅಂಕಗಳನ್ನು ಗಳಿಸಬೇಕಾಗಿದ್ದು, ಇದನ್ನು 20 ಅಂಕಗಳಿಗೆ ಇಳಿಸಬಹುದು ಎಂದು ಆಯೋಗದ ಅಧ್ಯಕ್ಷ ಟಿ.ಎಂ.ವಿಜಯಭಾಸ್ಕರ್ ಅವರು 4 ಮತ್ತು 5ನೇ ವರದಿಗಳಲ್ಲಿ ಶಿಫಾರಸು ಮಾಡಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ, ಸಚಿವ ಗೋವಿಂದ ಕಾರಜೋಳ ಅವರನ್ನು ಭೇಟಿಯಾದ ಎರಡನೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಟಿ.ಎಂ.ವಿಜಯಭಾಸ್ಕರ್ ಮಾಧ್ಯಮ ಪ್ರಮಾಣಪತ್ರಗಳ ಸಿಂಧುತ್ವವನ್ನು ಅವರು 4 ಮತ್ತು 5ನೇ ವರದಿಗಳನ್ನು ಸಲ್ಲಿಸಿದರು. ಇದರಿಂದ ಉಳಿದ ಬೇರೆ ಜಾತಿಯ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಈ ಶಿಫಾರಸ್ಸನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಮಾಡಬೇಕೆಂದು ಮನವಿ. –ವಿನಯ್ ಎ, ಮಹಾರಾಜ ಕಾಲೇಜು, ಮೈಸೂರು

ಡಾಂಬರೀಕರಣ ಮಾಡಿ, ಮಾರ್ಗಸೂಚಿ ಫಲಕ ಸರಿಪಡಿಸಿ





ಮಾನ್ಯರೆ,

ನಾನು ಒಬ್ಬ ಹಿರಿಯ ನಾಗರೀಕನಾಗಿದ್ದು, ಮೈಸೂರಿನ ಜೆ.ಪಿ.ನಗರದ ಮನೆ ಸಂಖ್ಯೆ 44,7ನೇ ತಿರುವು, 17ನೇ ಮುಖ್ಯರಸ್ತೆ, ಇ ಬ್ಲಾಕ್, ಸಿ ವಲಯ, 3ನೇ ಹಂತ, ಸಾಯಿಬಾಬಾ ದೇವಸ್ಥಾನದ ಹಿಂಭಾಗದ ರಸ್ತೆ ಇಲ್ಲಿ ವಾಸವಾಗಿರುತ್ತೇನೆ. ನಮ್ಮ ಮತ್ತು ನಮ್ಮ ಪಕ್ಕದ ರಸ್ತೆಯನ್ನು ಡಾಂಬರೀಕರಣಗೊಳಿಸಿರುವುದಿಲ್ಲ. ಅಲ್ಲದೆ 17ನೇ ಮುಖ್ಯರಸ್ತೆಯಲ್ಲಿರುವ ನಾಮಫಲಕ ಮತ್ತು ನಮ್ಮ ಮನೆಯ ಎಡಭಾಗದಲ್ಲಿರುವ ಮಾರ್ಗಸೂಚಿ ಫಲಕಕ್ಕೆ ಕಾಯಕಲ್ಪ ನೀಡಬೇಕಾಗಿದೆ. ಸಂಬಂಧಪಟ್ಟವರು ದಯಮಾಡಿ ಇತ್ತ ಗಮನಹರಿಸಿ ಚುನಾವಣಾ ನೀತಿಸಂಹಿತೆ ಜಾರಿಯಾಗುವ ಮುನ್ನ ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮಕೈಗೊಳ್ಳಬೇಕೆಂದು ಮನವಿ.

–ಕೆ. ಎನ್.ಅಶ್ವತ್ಥನಾರಾಯಣ್, ಜೆ.ಪಿ.ನಗರ, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಪಂಕ್ತಿ ಪಾವನರು

ಶತಾವಧಾನಿ ಡಾ.ಆರ್. ಗಣೇಶ್ ನಮ್ಮ ಕಾಲದ ವಿದ್ವತ್ ಪ್ರಪಂಚದ ವಿಸ್ಮಯ. ಅವರು ವಿಜ್ಞಾನ–ತಂತ್ರಜ್ಞಾನಗಳ ಪದವೀಧರರಾಗಿದ್ದು, ಸಾಹಿತ್ಯ ಲೋಕದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಬಹುಭಾಷಾವಿದರಾದ ಅವರು ಅನೇಕ ಭಾಷೆಗಳಲ್ಲಿ ಅಷ್ಟಾವಧಾನವನ್ನು ಮಾಡಿದುದನ್ನು ಕಂಡು ವಿಸ್ಮಿತರಾಗಿದ್ದೇವೆ. ಸಂಸ್ಕೃತ ಸಾಹಿತ್ಯಕ್ಕೂ ಕನ್ನಡ ವಾಙ್ಮಯಕ್ಕೂ ಅವರು ನೀಡಿರುವ ಕಾಣಿಕೆ ಬಹು ದೊಡ್ಡದು. ಪ್ರಸನ್ನ ಗಂಭೀರವಾದ ವಿಮರ್ಶೆಯನ್ನು ಅವರು ಮಾಡುವ ಶೈಲಿ ಅನುಕರಣೀಯ. ಅವರ ಕವಿತೆ ರಮಣೀಯ. ಅವರ ಜೀವನಾನುಭವ ಸ್ಮರಣೀಯ. ಸಾಹಿತ್ಯದ ಯಾವುದೇ ಪ್ರಕಾರವನ್ನು ತೆಗೆದುಕೊಂಡರೂ ಅದರಲ್ಲಿ ತಮ್ಮ ವೈಶಿಷ್ಟ್ಯವನ್ನು ತೋರಿಸಬಲ್ಲ ಪ್ರತಿಭಾಶಾಲಿಗಳಾದ ಅವರು ಈಚೆಗೆ ಪ್ರಕಟಿಸಿರುವ ಕೃತಿ ಪಂಕ್ತಿ ಪಾವನರು. ಇದರಲ್ಲಿ ತಾವು ಕಂಡ ಅಪೂರ್ವ ವ್ಯಕ್ತಿಗಳ ವ್ಯಕ್ತಿತ್ವದ ಪರಿಚಯವನ್ನು ಡಾ.ಆರ್.ಗಣೇಶ್ ಹೃದ್ಯವಾಗಿ ಮಾಡಿಕೊಟ್ಟಿದ್ದಾರೆ. ಈ ಪುಸ್ತಕವು ಡಿವಿಜಿ ಅವರ ಜ್ಞಾಪಕ ಚಿತ್ರಶಾಲೆಯ ನೆನಪನ್ನು ತರುತ್ತದೆ. ಇದರಲ್ಲಿ ಒಂಬತ್ತು ಲೇಖನಗಳಿದ್ದು ವೇದಮೂರ್ತಿ ಶೇಷಣ್ಣ ಶ್ರೌತಿ, ಲಂಕಾಕೃಷ್ಣಮೂರ್ತಿ, ಟಿ.ಎನ್.ಪದ್ಮನಾಭನ್, ಡಾ.ಎಸ್.ಎಲ್. ಭೈರಪ್ಪ, ಎಸ್.ಆರ್.ರಾಮಸ್ವಾಮಿ, ಎಲ್.ವಿ.ಶಾಂತಕುಮಾರಿ, ಪದ್ಮಾ ಸುಬ್ರಹ್ಮಣ್ಯಂ, ಬಿ.ಕೆಎಸ್.ವರ್ಮಾ, ಮಂಟಪ ಪ್ರಭಾಕರ ಉಪಾಧ್ಯ ಎಂಬವರ ವ್ಯಕ್ತಿತ್ವಗಳು ಚಿತ್ರಿತವಾಗಿವೆ. ಗ್ರಂಥವನ್ನು ಸಾಹಿತ್ಯ ಸಂಸ್ಕೃತಿಗಳ ನಿಸ್ವಾರ್ಥ ಸೇವಕರಾದ ಶ್ರೀ ಎಂ.ವಿ.ವೆಂಕಟೇಶಮೂರ್ತಿ ಮತ್ತು ಡಾ.ಪಾದೇಕಲ್ಲು ವಿಷ್ಣು ಭಟ್ಟರಿಗೆ ಡಾ.ಗಣೇಶ್ ಅರ್ಪಿಸಿದ್ದಾರೆ. ಅರ್ಪಣೆಯಲ್ಲಿ ಬರೆದಿರುವ ಮುತ್ತಿನಂತಹ ಪದ್ಯಗಳಲ್ಲಿ ಒಂದನ್ನಿಲ್ಲಿ ಉದಾಹರಿಸಬೇಕು.

ಪಂಕ್ತಿಪಾವನರರನ್ನು
ಕಂಡು ಕಾಣಿಸಿಕೊಟ್ಟು
ಪಂಕ್ತಿಪಾವನರಾಗುತ್ತಿರುವ ನಿಮ್ಮ ।
ಪಂಕ್ತಿ ಭೋಜನಕರೆದೆನಾಪೋ
ಶನವನಿದೋ
ಪಂಕ್ತಿಪಾವನವೆಂಬ ತೀರ್ಥದಿಂದ॥

ಪಂಕ್ತಿ ಪಾವನರೆಂದರೆ ಯಾರು?

ತ್ರಿಸುಪರ್ಣ ಮಂತ್ರವನ್ನು ಪಠಿಸುವ ದ್ವಿಜರು ಊಟದ ಪಂಕ್ತಿಯಲ್ಲಿ ಕುಳಿತಿದ್ದರೆ ಆ ಪಂಕ್ತಿಯಲ್ಲಿರುವ ಸಾವಿರ ಜನರನ್ನು ಪಾವನಗೊಳಿಸುತ್ತಾರೆ ಎಂಬ ಮಾತು ಶ್ರುತಿಯಲ್ಲಿದೆ. ಆ ಸಹಸ್ರಾತ್ ಪಂಕ್ತಿಂ ಪುನಂತಿ. ಡಾ. ಗಣೇಶರು ಮನವಿ ಮಾತಿನಲ್ಲಿ

ಅಗ್ರ್ಯಾಃ ಸರ್ವೇಷು ವೇದೇಷು
ಸರ್ವಪ್ರವಚನೇಷು ಚ।
ಶ್ರೋತ್ರಿಯಾನ್ವಯಜಾಶ್ಚೈವ
ವಿಜ್ಞೇಯಾಃ ಪಂಕ್ತಿಪಾವನಾಃ ॥

ಎಂಬ ಮನು ವಾಕ್ಯವನ್ನೂ ಉದಾಹರಿಸಿದ್ದಾರೆ.

ಕಲಿಯುಗದಲ್ಲಿ, ಕಲುಷಿತ ವಾತಾವರಣವೇ ತುಂಬಿರುವ ನಮ್ಮ ಸಮಾಜದಲ್ಲಿ ಇಂದೂ ಇಂತಹ ನಿರ್ಮಲ ಮನಸ್ಸಿನ ವ್ಯಕ್ತಿಗಳು ಹಲವರಿದ್ದಾರೆ ಎಂಬುದೇ ಸಂಸ್ಕೃತಿ ಪ್ರಿಯರಿಗೆ ಆನಂದವನ್ನು ತರುವ ಅಂಶ. ಅವರಲ್ಲಿ ಒಬ್ಬರಾಗಿದ್ದ ಕೀರ್ತಿಶೇಷ ಶೇಷಣ್ಣ ಶ್ರೌತಿಗಳ ಶ್ರದ್ಧೆ–ಸಿದ್ಧಿಗಳನ್ನು ಶತಾವಧಾನಿಗಳು ಎಷ್ಟು ಚೆನ್ನಾಗಿ ಮೂಡಿಸಿದ್ದಾರೆ. ಅವರ ಪರಿಚಯವನ್ನು ಎಷ್ಟು ಚೆನ್ನಾಗಿ ಮಾಡಿಸಿದ್ದಾರೆ ಎಂದರೆ ಲೇಖನದ ಒಂದು ಪದವನ್ನೂ ಬಿಡದೆ ಮತ್ತೆ ಮತ್ತೆ ಓದಲು ಅವರು ನಮ್ಮನ್ನು ಪ್ರೇರಿಸುತ್ತಾರೆ. ಸಾಮವೇದದಲ್ಲಿ ಶ್ರೌತಿಗಳಿಗೆ ಇದ್ದ ಪಾಂಡಿತ್ಯ, ಪ್ರೀತಿ, ಅದಕ್ಕೆ ಅನುಗುಣವಾಗಿ ಅವರು ಅಳವಡಿಸಿಕೊಂಡಿದ್ದ ಜೀವನ ಶೈಲಿ ಎಲ್ಲವೂ ಅವರ ಪಂಕ್ತಿ ಪಾವನತ್ವವನ್ನು ಎತ್ತಿ ಹಿಡಿಯುತ್ತವೆ. ಡಾ. ಗಣೇಶ್ ಅವರ ಬಗೆಗೆ ಹೇಳಿರುವ ಈ ಮಾತುಗಳು ಗಮನಾರ್ಹ "ಶೇಷಣ್ಣನವರು ಸುಮಾರು ಹನ್ನೆರಡು ವಿದ್ಯಾರ್ಥಿಗಳಿಗೆ ಋಕ್–ಪದ–ಗಾನ–ಭಾಷ್ಯಗಳ ಸಮೇತ ಸಂಪೂರ್ಣ ಸಂಹಿತೆಯ ಪಾಠ ಹೇಳಿದ್ದಾರೆ. ಮೂವತ್ತಾರು ಮಂದಿಗೆ ಸಂಕ್ಷಿಪ್ತವಾದ ಅಧ್ಯಯನ ಮಾಡಿಸಿದ್ದಾರೆ. ಆದರೆ ವೇದಾರ್ಥವನ್ನು ತಿಳಿಸದೆ, ಸದಾಚಾರವನ್ನು ಬೋಧಿಸದೆ ಯಾರಿಗೂ ಪಾಠ ಹೇಳಿದವರಲ್ಲ. ಇದು ಅವರ ವೇದಾಧ್ಯಾಪನದ ವೈಶಿಷ್ಟ್ಯವೂ ಹೌದು". (ಪು. 8)

ಅವಧಾನ ಕಲೆಯ ಕಣ್ವ ಲಂಕಾ ಕೃಷ್ಣ ಮೂರ್ತಿ ಎಂಬ ಲೇಖನದಲ್ಲಿ ಡಾ. ಗಣೇಶ್ ಅವರ ಅವಧಾನಕಲೆ ಅಂಕುರಿಸಿ ಮುಕುಲಿತವಾಗಿ, ಪುಷ್ಪಿತವಾಗಿ ಫಲಿತವಾಗಿ, ಕನ್ನಡ ನಾಡಿನ ಏಕೈಕ ಶತಾವಧಾನಿಯಾಗಿ ಅವರು ಬೆಳಗುವುದಕ್ಕೆ ಲಂಕಾಕೃಷ್ಣಮೂರ್ತಿಯವರ ಸಹಯೋಗ ಹೇಗೆ ಉಪಕಾರಕವಾಯಿತು ಎಂಬುದನ್ನು ವಿವರಿಸಲಾಗಿದೆ. ಅವರಿಗೆ ಸಂಸ್ಕೃತ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿದ್ದ ಕವಿತಾ ಪ್ರೌಢಿಮೆಯು ಇಲ್ಲಿ ಓದುಗರನ್ನು ಬೆರಗುಗೊಳಿಸುತ್ತದೆ. ವಕೀಲಿ ವೃತ್ತಿಯಲ್ಲಿ ಕೃಷ್ಣಮೂರ್ತಿಗಳು ಬೇಕಾದಷ್ಟು ಹಣವನ್ನು ಗಳಿಸಬಹುದಾಗಿತ್ತು. ಆದರೆ ಆ ವೃತ್ತಿಯಲ್ಲಿ ಪ್ರಸಂಗವಶಾತ್ ಸುಳ್ಳು ಹೇಳಬೇಕಾಗಿ ಬರುತ್ತದೆ ಎಂದು ಅದನ್ನು ಬಿಟ್ಟರಂತೆ. ಅವರೊಮ್ಮೆ ಡಾಕ್ಟರ್ ಗಣೇಶರಿಗೆ ಹೇಳಿದ ಮಾತೂ ಈ ಲೇಖನದಲ್ಲಿ ಉಲ್ಲೇಖಿತವಾಗಿದೆ. "ನಮ್ಮ ವಿಚಾರಗಳಲ್ಲಿ ಬೆಳಕಿರಬೇಕೇ ಹೊರತು ಕಾವಿರಬಾರದು. ವಿದ್ಯಾವಿಷಯದಲ್ಲಿ ಇದು ಇನ್ನೂ ಮುಖ್ಯ" (ಪು. 57). ಇಂತಹ ಸ್ಥಿತಪ್ರಜ್ಞರನ್ನು ಕಂಡವರೇ ಧನ್ಯರಲ್ಲವೆ?

ಶುಚಿರುಚಿಗಳ ಸಹೃದಯ ಟಿ.ಎನ್. ಪದ್ಮನಾಭನ್ ನಿಜವಾದ ಸಹೃದಯರೇ. ವಸ್ತ್ರಾಡಂಬರಗಳ ಪ್ರದರ್ಶನವೇ ಪಾಂಡಿತ್ಯದ ಪ್ರಮಾಣ ಪತ್ರವಾಗಿರುವ ಈ ಕಾಲದಲ್ಲಿ ಪದ್ಮನಾಭನ್ ಅವರಂತಹ ನಿರಾಡಂಬರ ವಿದ್ವಾಂಸರೂ ಇದ್ದರು. ಅವರು ಕಾರ್ಯಕ್ರಮಗಳಲ್ಲಿ ಮುಖ್ಯ ಭಾಷಣ ಮಾಡಬೇಕಾಗಿರಲಿಲ್ಲ. ಕೇವಲ ಸಂಕ್ಷಿಪ್ತ ವಂದನಾರ್ಪಣೆ ಮಾಡಿದರೂ ಸಾಕು. ಅದನ್ನು ಕೇಳುವುದಕ್ಕಾಗಿ ಜನರು ಕಾದು ಕುಳಿತಿರುತ್ತಿದ್ದರು ಎಂಬುದನ್ನು ಡಾ.ಗಣೇಶ್ ಎತ್ತಿ ತೋರಿಸಿದ್ದಾರೆ. ಅದಕ್ಕೆ ಕಾರಣ ಪದ್ಮನಾಭನ್ ಅವರ ಆಳವಾದ ಸಾಹಿತ್ಯಾಧ್ಯಯನ. ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳ ಶ್ರೇಷ್ಠ ಕವಿಗಳ ಪದ್ಯಗಳು. ಅವರಿಗೆ ಕಂಠಸ್ಥವಾಗಿದ್ದುವಂತೆ. ಡಿವಿಜಿ ಅವರ ಎರಡೂ ಕಗ್ಗಗಳು, ಎರಡೂ ಪರೀಕ್ಷಣಗಳು ಅವರ ಮನಸೆಳೆದಿದ್ದುವು ಎಂಬುದನ್ನೂ ಶತಾವಧಾನಿಗಳು ಹೇಳಿದ್ದಾರೆ.

ಎಸ್.ಎಲ್.ಭೈರಪ್ಪನವರ ಸತ್ತ್ವೋನ್ನತಿ ಎಂಬ ಲೇಖನ ಉತ್ಕೃಷ್ಟವಾಗಿದೆ. ಇದರಲ್ಲಿ ಭೈರಪ್ಪನವರ ಕಾದಂಬರಿಗಳ ಅಥವಾ ಸಾಹಿತ್ಯದ ವಿಮರ್ಶೆ ಮುಖ್ಯವಾಗಿಲ್ಲ. ಆದರೆ ಅವರ ಮಾನವೀಯತೆಯ ಮತ್ತು ಸರಳ ಸ್ವಭಾವದ ನಿರಾಡಂಬರ ನಿರೂಪಣೆಯಿದೆ. ಭೈರಪ್ಪನವರ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದ ಶತಾವಧಾನಿಗಳು ಮಾತ್ರ ಇಂತಹ ಆತ್ಮೀಯ ಲೇಖನವನ್ನು ಬರೆಯಲು ಸಾಧ್ಯ. "ತೊಂಬತ್ತೆರಡರ ಹರೆಯದ ಆ ಹಿರಿಯರು ಮೂವತ್ತು ಮೆಟ್ಟಿಲುಗಳನ್ನೇರಿ ಬಂದದ್ದಲ್ಲದೆ ನಾನು ಮಾಡಿ ಬಡಿಸಿದ ಸಾಧಾರಣವಾದ ಅಡುಗೆಯನ್ನೂ ಮೆಚ್ಚಿ ಸವಿದರು". (ಪು. 114) ಎಂಬ ವಾಕ್ಯ ಭೈರಪ್ಪನವರ ಮತ್ತು ಶತಾವಧಾನಿಗಳ ಉನ್ನತ ಸತ್ತ್ವವನ್ನು ಪ್ರತಿಬಿಂಬಿಸುತ್ತದೆ. ಶತಾವಧಾನಿಗಳು ಭೈರಪ್ಪನವರ ಸಾಹಿತ್ಯವನ್ನು ಎಷ್ಟು ತೀವ್ರತೆಯಿಂದ ಮತ್ತು ಉತ್ಕಟತೆಯಿಂದ ಓದುತ್ತಾರೆ ಎಂಬುದಕ್ಕೆ ಕೆಳಗಿನ ಒಂದು ಪುಟ್ಟ ಪರಿಚ್ಛೇದ ಸಾಕ್ಷಿಯಾಗಿದೆ–

"ಎರಡು ವರ್ಷಗಳ ಹಿಂದೆ – ಕೊರೊನಾ ಕಾಲದಲ್ಲಿ–ಅವರ ಆತ್ಮಕಥೆ 'ಭಿತ್ತಿ'ಯನ್ನು ನಾನು ಮತ್ತೆ ಓದಿಕೊಳ್ಳುತ್ತಿದ್ದೆ. ಅಲ್ಲಿ ಬರುವ ಅವರ ತಮ್ಮನ ಸಾವು ಮತ್ತು ಆತನಿಗೆ ಇವರು ಮಾಡಿದ ಅಂತ್ಯಕ್ರಿಯೆಯ ಪ್ರಕರಣವನ್ನು ಓದುತ್ತಿರುವಂತೆಯೇ ತಡೆಯಲಾರದ ಸಂಕಟವಾಗಿ ಅವರಿಗೆ ಆ ಕೂಡಲೇ ದೂರವಾಣಿ ಮಾಡಿ ಸುಮ್ಮನೆ ಅಳುತ್ತ ನಿಂತು ಬಿಟ್ಟೆ. ಆ ಬಳಿಕ ಸಾವರಿಸಿಕೊಂಡು 'ಇದನ್ನು ಎಷ್ಟೋ ಬಾರಿ ಓದಿದ ಮೇಲೂ ನಮಗೆ ಈ ನೋವಿನ ತೀವ್ರತೆ ತಗ್ಗಿಲ್ಲ. ಅನುಭವಿಸಿದ ನಿಮಗೆ ಹೇಗೆ ಅನ್ನಿಸಿರಬಹುದು!' ಎಂದು ಬೆರಗಾದೆ" (ಪು. 108)– ಭೈರಪ್ಪ ನವರ ಅಭಿಮಾನಿಗಳೆಲ್ಲರೂ ಈ ಲೇಖನವನ್ನು ಓದಬೇಕು.

ಬಿರುಕಿಲ್ಲದ ಬದುಕು–ಬರಹಗಳ ಎಸ್.ಆರ್.ರಾಮಸ್ವಾಮಿ ಎಂಬ ಲೇಖನದಲ್ಲಿ ನಮ್ಮ ಮಧ್ಯೆ ಇರುವ ಹಿರಿಯ ಚೇತನವಾದ ಶ್ರೀ ರಾಮಸ್ವಾಮಿಗಳ ಜೀವನಗಾಥೆಯನ್ನು ಶತಾವಧಾನಿಗಳು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಡಿವಿಜಿ ಅವರ ಅಮೂಲ್ಯ ಸಾಹಿತ್ಯ ನಮಗಿಂದು ದೊರಕಿರುವುದಕ್ಕೆ ಮುಖ್ಯ ಕಾರಣ ಶ್ರೀರಾಮಸ್ವಾಮಿಯವರ ಪರಿಶ್ರಮ. ಅವರ ಹಾಸ್ಯಪ್ರಜ್ಞೆಯನ್ನು ಕುರಿತು ಹಲವು ಉದಾಹರಣೆಗಳನ್ನು ಶತಾವಧಾನಿಗಳು ದಾಖಲಿಸಿದ್ದಾರೆ. ರಾಮಸ್ವಾಮಿಗಳು ನಾನಾ ವಿಧವಾದ ಜನರನ್ನು ನೋಡಿ ಅವರ ವಿದ್ವತ್ತೆಯನ್ನು ಅಳೆಯಬಲ್ಲವರು. ಅವರ ಮಾತು ಚಿಂತನೆಯ ತರಂಗಗಳನ್ನು ಉಂಟು ಮಾಡುತ್ತದೆ. ವಿದೇಶದಲ್ಲಿದ್ದುಕೊಂಡು ಸನಾತನ ಧರ್ಮದ ಸ್ವಘೋಷಿತ ಯೋಧಾಗ್ರಣಿಯಾಗಿ ಕೋಲಾಹಲ ಮಾಡುತ್ತಿರುವ ಲೇಖಕರೊಬ್ಬರ ಅಟಾಟೋಪವನ್ನು ಕುರಿತು ``we need rich street fighters also" ಎಂದು ಮಾರ್ಮಿಕವಾಗಿ ರಾಮಸ್ವಾಮಿಗಳು ಪ್ರತಿಕ್ರಿಯಿಸಿದ್ದನ್ನು ಶತಾವಧಾನಿಗಳು ಉದಾಹರಿಸಿದ್ದಾರೆ. "ರಾಮಸ್ವಾಮಿ ಅವರ ವಿದ್ವತ್ ಬರಿಯ ಚಿಂತನ–ಅಧ್ಯಯನಗಳ ಫಲವಲ್ಲ, ಅದೊಂದು ತಪಸ್ಸಿನ ಮಟ್ಟದ್ದು, ಕಾಣ್ಕೆಯ ಮಟ್ಟದ್ದು" ಎಂದು ಶತಾವಧಾನಿಗಳು ಹೇಳಿರುವುದರಲ್ಲಿ ಅತಿಶಯೋಕ್ತಿ ಇಲ್ಲ. ಸಾಹಿತ್ಯದಂತೆ ಸಂಗೀತದಲ್ಲೂ ಉನ್ನತ ಅಭಿರುಚಿಯನ್ನು ಹೊಂದಿರುವ ಶ್ರೀ ಎಸ್.ಆರ್. ರಾಮಸ್ವಾಮಿ ಅವರನ್ನು ಕಂಡವರು ಧನ್ಯರು.

ಪಂಕ್ತಿ ಪಾವನರೆಂದು ಪರಿಗಣಿತರಾಗುವರು ಪುರುಷರು ಮಾತ್ರವಲ್ಲ. ಸ್ತ್ರೀಯರೂ ಸದ್ಗುಣ ಸಂಪನ್ನರಾಗಿದ್ದರೆ ಆ ಅಭಿಧಾನಕ್ಕೆ ಅರ್ಹರು ಎಂದು ಪ್ರಶಾಂತ ಸಾಹಿತಿ ಎಲ್.ವಿ.ಶಾಂತಕುಮಾರಿ ಎಂಬ ಲೇಖನವನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಇಂಗ್ಲಿಷ್ ಪ್ರಾಧ್ಯಾಪಕರೂ ಶ್ರೇಷ್ಠ ವಿಮರ್ಶಕರೂ ಆಗಿರುವ ಶಾಂತಕುಮಾರಿಯವರ ಯುಗ ಸಾಕ್ಷಿ ಎಂಬ ಗ್ರಂಥ ಎಸ್.ಎಲ್. ಭೈರಪ್ಪನವರ ಕೃತಿಗಳ ಅತ್ಯುತ್ತಮ ವಿಮರ್ಶೆ. ಕನ್ನಡ–ಇಂಗ್ಲಿಷ್–ಹಿಂದೀ ಭಾಷೆಗಳಲ್ಲಿ ಅವರ ಪರಿಣತಿ–ಅವರನ್ನು ಕುರಿತು ಶತಾವಧಾನಿಗಳು ಬರೆದಿರುವ ಒಂದು ವಾಕ್ಯದ ತುಣುಕು ಹೀಗಿದೆ "ಬರೆದದ್ದನ್ನೆಲ್ಲ ಅಚ್ಚಿಸಬೇಕು ಹಾಗೂ ಅಚ್ಚಾದುದೆಲ್ಲ ಜನಮನವನ್ನು ಮೆಚ್ಚಿಸಬೇಕು ಎಂಬ ಹಪಹಪಿಕೆಯಿಲ್ಲದೆ ಶಾಂತಕುಮಾರಿಯವರು ಪ್ರಶಾಂತಸಾಧಕರಾಗಿ ಓದು, ಬರಹ ಮತ್ತು ಅಂತರ್ಮಥನಗಳೆಂಬ ತ್ರೇತಾಗ್ನಿಗಳನ್ನು ನಿಡುಗಾಲದಿಂದ ಜತನವಾಗಿ ಕಾಪಾಡಿಕೊಂಡು ಬಂದಿದ್ದಾರೆ" (ಪು. 156). ಈ ಲೇಖಿಕೆಯವರು ಎಷ್ಟು ವಿಪುಲ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ !

ಅಭಿನವ ಭರತಾವತಾರ ಪದ್ಮಾ ಸುಬ್ರಹ್ಮಣ್ಯಂ ಎಂಬ ಲೇಖನ ಎಲ್ಲ ನೃತ್ಯಪಟುಗಳಿಗೂ ನೃತ್ಯ ರಸಿಕರಿಗೂ ಒಂದು ಪಾಠ್ಯವಾಗಲು ಯೋಗ್ಯವಾಗಿದೆ. ಪದ್ಮಾ ಸುಬ್ರಹ್ಮಣ್ಯಂ ಅವರಂತಹ ನಾಟ್ಯ ಶಾಸ್ತ್ರಾಭಿಜ್ಞರು ಎಷ್ಟು ಜನರಿದ್ದಾರು? ಅಂತೆಯೇ ನರ್ತನದ ಸೂಕ್ಷ್ಮತಮ ಸೌಂದರ್ಯವನ್ನು ಅರಿಯಬಲ್ಲ ಶತಾವಧಾನಿ ಗಣೇಶರಂತಹ ಶ್ರೇಷ್ಠ ಪ್ರೇಕ್ಷಕರೂ ಎಲ್ಲಿ ದೊರಕುತ್ತಾರೆ? ಸುವರ್ಣ ರತ್ನ ಸಂಯೋಗದಂತೆ ಕಲಾವಿದ –ರಸಿಕರ ಸಂಬಂಧ. ಈ ಲೇಖನದಲ್ಲಿ ಪದ್ಮಾ ಅವರ ಸುಸ್ವಭಾವದ ಪರಿಚಯ ವಾಗುವುದಲ್ಲದೆ ಸಂಗೀತ ನೃತ್ಯಗಳ ಅಂತರ್ನೋಟಗಳೂ ಲಭ್ಯ. ಶತಾವಧಾನಿಗಳು ಹೇಳುವ ಒಂದು ಮಾತು "ಪ್ರಾಚೀನವೂ ಅಭಿಜಾತವೂ ಆದ ಎಷ್ಟೋ ಬಗೆಯ ನರ್ತನಾಂಶಗಳನ್ನು ಪುನರಾಚಿಸಿ ಮರುಕಳಿಸಿ ಕೊಡುವುದರ ಜೊತೆಗೆ ಅಪೂರ್ವವೂ ಅನನ್ಯವೂ ಆದ ಎಷ್ಟೋ ಬಗೆಯ ಹೊಸ ಹೊಸ ಅಂಶಗಳನ್ನೂ ರಸವುಕ್ಕುವಂತೆ ರೂಪಿಸುವುದು ಪದ್ಮಾ ಅವರ ಹೆಗ್ಗಳಿಕೆಗಳಲ್ಲಿ ಒಂದು" (ಪು. 180). ಪದ್ಮಾ ಅವರ ಅನೇಕ ನೃತ್ಯ ಪ್ರದರ್ಶನಗಳ ವೈಭವವನ್ನು ಶತಾವಧಾನಿ ಗಣೇಶ್ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಶಾಸ್ತ್ರ ಸಂಸ್ಕಾರವನ್ನು ಹೊಂದಿದವರಿಗೆ ಇದು ನಿಜವಾದ ರಸದೌತಣ.

ಕುಂಚವಿರಿಂಚಿ ಬಿ.ಕೆ.ಎಸ್. ವರ್ಮ ಎಲ್ಲ ಚಿತ್ರ ಕಲಾರಸಿಕರಿಗೆ ಪರಿಚಿತರೇ– ಕಲೆಯಲ್ಲಿಲ್ಲದೆ ಬದುಕಿನ ಬೆಲೆಯಲ್ಲಿಯೂ ಅವರು ಬಲ್ಲಿದರು ಎಂದು ಶತಾವಧಾನಿಗಳು ಹೇಳಿ ದ್ದಾರೆ. ಬಹುಶಃ ನಮ್ಮ ನಾಡಿನಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಆಶು ಚಿತ್ರಕ್ಕೆ ವರ್ಮರೇ ಆದಿಮಾಚಾರ್ಯರು – ಎಂದೂ ತಿಳಿಸಿದ್ದಾರೆ. ಕಾವ್ಯಚಿತ್ರ ಎಂಬ ಅಪೂರ್ವ ಕಾರ್ಯಕ್ರಮ ರೂಪುಗೊಳ್ಳಲು ಇವರು ಒಟ್ಟಾಗಿ ಸೇರಿದ್ದು ಕಾರಣವಾಯಿತು. ಇದು ಕನ್ನಡ ನಾಡಿನ ವೈಶಿಷ್ಟ್ಯವಾಗಿ ಶೋಭಿಸಿತು.

ಬಿ.ಕೆ.ಎಸ್. ವರ್ಮಾ ಅವರಿಗೆ ಶತಾವಧಾನಿಗಳು ವಂದನೆಯನ್ನಿಂತು ಸಲ್ಲಿಸಿದ್ದಾರೆ –

ವರ್ಣಗಳಿಗೆ ಚೈತನ್ಯ ಬಂದಿತೋ
ಕುಂಚ ಕುಸಿರು ಬಂತೋ
ಊಹೆಗಳಿಗೆ ಬಣ್ಣಗಳು
ಬಂದುವೋ ಕವಿತೆಗೊಡಲು
ಬಂತೋ ವೇಗಕಿಲ್ಲಿ ರಸರಾಗ
ಬಂದುದೋ ಎಂದು
ಬರೆಯುತಿರಲು
ಶ್ರೀನಿವಾಸ ನಿಮಗಿದುವೆ ನಮನ,
ಮತ್ಕವನ ಕರಗುತಿರಲು ॥

ರಸಾಭಿಯನದ ಮಲ್ಲಿಗೆಯ ಮಂಟಪ ಎಂಬ ಲೇಖನಕ್ಕೆ ವಿಷಯ ಆಗಿರುವವರು ಯಕ್ಷಗಾನ ಕಲಾವಿದ ಶ್ರೀ ಮಂಟಪ ಪ್ರಭಾಕರ ಉಪಾಧ್ಯರು. ವಿರಳಾತಿ ವಿರಳರಾದ ಸರಳ ಸ್ವಭಾವದ ಉಪಾಧ್ಯ ಅವರಲ್ಲಿ ಶತಾವಧಾನಿಗಳ ಆತ್ಮೀಯತೆ ಈ ಲೇಖನದಲ್ಲಿ ಹಾಸು ಹೊಕ್ಕಾಗಿದೆ. "ಮಂಟಪರು ಕಲೆಯ ಮಟ್ಟಿಗಲ್ಲದೆ ಕಲೆಯೂ ತನ್ನ ಆದರ್ಶವೆಂದು ಭಾವಿಸಿ ಕೊಂಡಿರುವ ಜೀವನ ಕಲೆಯ ಮಟ್ಟಿಗೂ ಉನ್ನತರಾದ ಸಾಧಕರು" ಎಂದು ಅವರು ಬರೆದಿದ್ದಾರೆ. (ಪು. 256). ಮಂಟಪರು ಸ್ತ್ರೀ ಪಾತ್ರದ ನಿರ್ವಹಣೆಯಲ್ಲಿ ತೋರಿದ ಕೌಶಲವನ್ನು ಶತಾವಧಾನಿಗಳು ಬಣ್ಣಿಸಿದ್ದಾರೆ. ಪ್ರಭಾಕರ ಉಪಾಧ್ಯರಿಗೆ ಮಂಟಪ ಎಂಬ ಹೆಸರು ಹೇಗೆ ಬಂತು? "ಇವರ ಪೂರ್ವಿಕರು ಊರಿನ ಉತ್ಸವಗಳಿಗೆ, ಮದುವೆ ಮುಂಜಿಗಳಿಗೆ ಬಗೆಬಗೆಯ ಮಂಟಪಗಳನ್ನು ಹಳ್ಳಿಯ ಪರಿಸರದಲ್ಲಿ ಸಿಗುತ್ತಿದ್ದ ಸಾಮಾನ್ಯ ಸಾಮಗ್ರಿಗಳಿಂದಲೇ ಸೊಗಸಾಗಿ ನಿರ್ಮಿಸುತ್ತಿದ್ದರಂತೆ. ಹೀಗಾಗಿಯೇ ಅವರ ಮನೆತನದ ಹೆಸರೂ ಇದೇ ಆಯಿತು (ಪು. 262). ಈ ಲೇಖನವನ್ನು ಓದುತ್ತಿದ್ದರೆ ಒಬ್ಬ ಕಲಾತಪಸ್ವಿಯ ಸಮಗ್ರ ಜೀವನ ಚರಿತ್ರೆ ಯನ್ನೇ ಓದಿದಂತೆ ಭಾಸವಾಗುತ್ತದೆ. ಏಕವ್ಯಕ್ತಿ ಯಕ್ಷಗಾನವನ್ನು ಮಾಡುವ ಕಲಾವಿದ ತಪಸ್ವಿಯಲ್ಲದೆ ಮತ್ತೇನು?

'ಪಂಕ್ತಿ ಪಾವನರು' ಎಂಬ ಈ ಪುಸ್ತಕದ ಬಗೆಗೆ ಬರೆಯುತ್ತ ಹೋದರೆ ಅದೇ ಒಂದು ಪುಸ್ತಕವಾದೀತು. ಶತಾವಧಾನಿ ಡಾ. ಆರ್. ಗಣೇಶರ ಜೀವನಾನುಭವ ಎಷ್ಟು ದೊಡ್ಡದು, ದೊಡ್ಡವರನ್ನು ಗುರುತಿಸುವುದರಲ್ಲಿ, ಹೊಗಳ ಬೇಕಾದವರನ್ನು ಹೊಗಳುವುದರಲ್ಲಿ ಗುಣವನ್ನು ಪ್ರಶಂಸಿಸುವುದರಲ್ಲಿ ಅವರ ಹೃದಯ ವೈಶಾಲ್ಯ ಹೇಗಿದೆ ಎಂದು ವಾಚಕರಿಗೆ ಈ ಪುಸ್ತಕದ ಒಂದೊಂದು ಪುಟವೂ ತಿಳಿಸುತ್ತದೆ. ಇದರಲ್ಲಿ ವರ್ಣಿತರಾದ ಒಂಬತ್ತು ವ್ಯಕ್ತಿಗಳು ಪಂಕ್ತಿ ಪಾವನರು ನಾವು ಕಂಡಿದ್ದೇವೆ ಎಂಬುದೇ ತೃಪ್ತಿಯ ವಿಷಯ. ಮೇರು, ಹಿಮಾಲಯ, ವಿಂಧ್ಯ ಮುಂತಾದ ಪರ್ವತಗಳನ್ನು ಬೆರಗಿನಿಂದ, ಭಯಮಿಶ್ರ ಭಕ್ತಿಯಿಂದ ನೋಡುವಂತೆ ಅವರನ್ನು ನೋಡಿದ್ದೇವೆ. ಶತಾವಧಾನಿಗಳು ಅಂತಹವರ ಅಂತ ರಂಗವನ್ನು ಹೊಕ್ಕು ವ್ಯಕ್ತಿತ್ವವನ್ನು ಪರಿಚಯಿಸಿರುವುದು ನಮ್ಮ ಭಾಗ್ಯ. ಅವರಿಗೆ ನನ್ನ ಪ್ರಶ್ರಯಭರಿತ ನಮನ.



ಮೈಸೂರು ತಾಲೂಕಿನ ಇಲವಾಲದಲ್ಲಿ ನಡೆದ ಜಿಲ್ಲಾ ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಂಗಳವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಿಡಿಪಿಐ ರಾಮಚಂದ್ರರಾಜೇ ಅರಸು, ಬಿಇಓ ಮಲ್ಲೇಶ್ವರಿ, ಉದಯ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಫೆ.7–2022–23ನೇ ಸಾಲಿಗೆ ಜಿಲ್ಲೆಯ ಬುದ್ಧಿಮಾಂದ್ಯ, ಸೆರೆಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಆರೋಗ್ಯ ವಿಮಾ ಯೋಜನೆಯ ಅಡಿಯಲ್ಲಿ ವಿವಿಧ ಸೌಲಭ್ಯಗಳನ್ನು ನೀಡಲಾಗುವುದು. ಸೌಲಭ್ಯವನ್ನು ಪಡೆಯಲು ಬಿಪಿಎಲ್ ಕಾರ್ಡ್ ಫಲಾನುಭವಿಯಾಗಿರುವ ಅಥವಾ ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು. ಫೆ.25ರ ಒಳಗಾಗಿ ತಾಪಂ ಕಾರ್ಯಾಲಯ ಹೆಚ್.ಡಿ.ಕೋಟೆ, ಸರಗೂರು, ಹುಣಸೂರು, ಕೆ.ಆರ್.ನಗರ, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ ಹಾಗೂ ತಿ.ನರಸಿಪುರ ಕಚೇರಿಗಳಲ್ಲಿ ಎಂ.ಆರ್. ಡಬ್ಲ್ಯೂ ಅವರಿಂದ ಅರ್ಜಿ ಪಡೆದು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯ ವಿಕಲಚೇತನರ ಕೇಂದ್ರದ ದೂ.ಸಂ:0821–2490333 ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಬಿಸಿ ಕೆನೆಪದರದ ಆದಾಯ ಮಿತಿ ಪರಿಷ್ಕರಣೆ ಇಲ್ಲ: ಕೇಂದ್ರ



ನವದೆಹಲಿ: ಇತರ ಹಿಂದುಳಿದ ವರ್ಗಗಳ (ಒಬಿಸಿ) ಕೆನೆಪದರದ ವಾರ್ಷಿಕ ಆದಾಯ ಮಿತಿ ರೂ. 8 ಲಕ್ಷ ಇದ್ದು, ಅದನ್ನು ಪರಿಷ್ಕರಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಸರ್ಕಾರ ಮಂಗಳವಾರ ಲೋಕಸಭೆಗೆ ತಿಳಿಸಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಒಬಿಸಿ ಕೆನೆಪದರ ವಾರ್ಷಿಕ ಆದಾಯದ ಮಿತಿ ಸಮರ್ಪಕವಾಗಿದೆ. ಈ ಮಿತಿಯನ್ನು ಇಲ್ಲಿಯವರೆಗೆ ನಾಲ್ಕು ಬಾರಿ ಪರಿಷ್ಕರಿಸಲಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆಯ ಸಚಿವ ವಿರೇಂದ್ರ ಕುಮಾರ್ ಲೋಕಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷದೊಳಗೆ ಈ ಕುರಿತ ವಾರ್ಷಿಕ ಆದಾಯದ ಮಿತಿಯನ್ನು ರೂ. 8 ಲಕ್ಷದಿಂದ ರೂ. 12 ಲಕ್ಷಕ್ಕೆ ಏರಿಸುವ ಪ್ರಸ್ತಾವ ಇದೆಯೇ ಎಂದು ಕಾಂಗ್ರೆಸ್ ಸದಸ್ಯ ಡೀನ್ ಕುರಿಯಾಕೋಸ್ ಪ್ರಶ್ನೆ ಕೇಳಿದ್ದರು. ಒಬಿಸಿ ಕೆನೆಪದರದ ಆದಾಯ ಮಿತಿಯ ಪರಿಷ್ಕರಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದಿಂದ ಯಾವುದೇ ಅಧಿಕೃತ ಶಿಫಾರಸು ಬಂದಿಲ್ಲ ಸಚಿವರು ಸ್ಪಷ್ಟಪಡಿಸಿದ್ದಾರೆ. 1993ರ ಸೆ.8ರಿಂದ ಒಬಿಸಿ ಮೀಸಲು ನೀತಿ ಜಾರಿಗೆ ಬಂದಾಗ ಒಬಿಸಿ ಕೆನೆಪದರ ವಾರ್ಷಿಕ ಆದಾಯ ಮಿತಿಯನ್ನು ರೂ. 1 ಲಕ್ಷಕ್ಕೆ ಸೀಮಿತಗೊಳಿಸಲಾಗಿತ್ತು. ಆ ಬಳಿಕ 4 ಬಾರಿ ಇದನ್ನು ಪರಿಷ್ಕರಿಸಲಾಗಿದೆ. ಕೇಂದ್ರ ಸರ್ಕಾರ 2017ರ ಸೆಪ್ಟೆಂಬರ್‌ನಲ್ಲಿ ಈ ಮಿತಿಯನ್ನು ರೂ. 6 ಲಕ್ಷದಿಂದ ರೂ. 8 ಲಕ್ಷಕ್ಕೆ ಪರಿಷ್ಕರಿಸಿತ್ತು ಎಂದು ಅವರು ಹೇಳಿದ್ದಾರೆ.

540 ವಸತಿ ಶಾಲೆಗಳಲ್ಲಿ ಕಾಲೇಜು ಶಿಕ್ಷಣ

ಯಾದಗಿರಿ/ಕೆಂಭಾವಿ: ಪ್ರಸ್ತುತ 10ನೇ ತರಗತಿವರೆಗೆ ವಸತಿ ಸೌಲಭ್ಯವಿದ್ದು, ರಾಜ್ಯದಲ್ಲಿ ಈ ಬಾರಿ 540 ವಸತಿ ಶಾಲೆಗಳಲ್ಲಿ ಕಾಲೇಜು ಶಿಕ್ಷಣವನ್ನು ಪ್ರಾರಂಭಿಸಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಹುಣಸಗಿ ತಾಲೂಕಿನ ಮುದನೂರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಸುಮಾರು 24 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಮೊಟ್ಟಮೊದಲ ಬಾರಿಗೆ ವಸತಿ ಶಾಲೆಗಳಲ್ಲಿ ಸ್ಥಳೀಯ ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗುವುದು ಮತ್ತು ಸುರಪುರ ಕ್ಷೇತ್ರಕ್ಕೆ ಎರಡು ವಸತಿ ಶಾಲೆಗಳನ್ನು ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಒಟ್ಟು 830 ವಸತಿ ಶಾಲೆಗಳಿದ್ದು, ಇಲ್ಲಿ ಕಲಿಯುವ ಮಕ್ಕಳು ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಮಕ್ಕಳಾಗಿದ್ದಾರೆ. ಈ ಬಾರಿ ಹತ್ತನೇ ತರಗತಿಯಲ್ಲಿ ಶೇ 99 ರಷ್ಟು ಸಾಧನೆ ಮಾಡಿರುವ ಸರ್ಕಾರದ ಇಂಥ ವಸತಿ ಶಾಲೆಗಳು ಖಾಸಗಿ ಶಾಲೆಗಳಿಗೆ ಏನೂ ಕಮ್ಮಿ ಇಲ್ಲವೆಂಬುದನ್ನು ಸಾಬೀತುಪಡಿಸಿದೆ. ಹೆಣ್ಣುಮಕ್ಕಳ ಸ್ವಯಂ ರಕ್ಷಣೆಗೆ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಕರಾಟೆ ಕಲಿಸುವ ಹೊಸ ಯೋಜನೆಯನ್ನು ರೂಪಿಸಿದ್ದು, ಅದಕ್ಕೆ ವರ್ಷಕ್ಕೆ ರೂ. 18 ಕೋಟಿ ಮೀಸಲಿಡಲಾಗಿದೆ ಎಂದು ಹೇಳಿದರು.

ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ಕಷ್ಟ ಪಟ್ಟು ಶಿಕ್ಷಣ ಕಲಿತ ಡಾ. ಅಂಬೇಡ್ಕರ್ ಅವರು ಇಡೀ ವಿಶ್ವವೇ ಮೆಚ್ಚುವಂಥ ಸಂವಿಧಾನವನ್ನು ನಮ್ಮ ಭಾರತ ದೇಶಕ್ಕೆ ನೀಡಿದ್ದಾರೆ. ಅವರ ಕೆಲಸದಲ್ಲಿ ಇದ್ದ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಯನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು. ಅಂಬೇಡ್ಕರ್ ಅವರ ಕನಸು ನನಸಾಗಬೇಕಾದರೆ ಸಮಾಜದ ಪ್ರತಿಯೊಬ್ಬರೂ ಶಿಕ್ಷಣವಂತರಾಗಬೇಕು. ಶಿಕ್ಷಣ ಅಭಿವೃದ್ಧಿಯ ಶಕ್ತಿ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ರಾಜೂಗೌಡ, ರಾಜ್ಯದ ಪ್ರತಿಯೊಂದು ಗ್ರಾಪಂಗಳಲ್ಲಿ ವಸತಿ ಶಾಲೆಗಳನ್ನು ನಿರ್ಮಾಣ ಮಾಡುವಂತೆ ಮನವಿ ಮಾಡಿದರು.

ಪತ್ನಿಯ ಶೀಲ ಶಂಕಿಸಿ ಹತ್ಯೆ: ಪತಿಗೆ ಜೀವಾವಧಿ ಶಿಕ್ಷೆ

ಮೈಸೂರು,ಫೆ.7(ಎಸ್‌ಬಿಡಿ)–ಪತ್ನಿಯ ಶೀಲ ಶಂಕಿಸಿ ಹತ್ಯೆ ಮಾಡಿದ್ದ ಪತಿಗೆ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಮಟಗೇರಿ ಗ್ರಾಮದ ಸಿದ್ದರಾಜುಗೆ ಶಿಕ್ಷೆ ವಿಧಿಸಲಾಗಿದೆ.

ಕಾಟೂರು ಗ್ರಾಮದ ಜಯಮ್ಮ ಅವರ ಪುತ್ರಿ ಸಹನಾ ಅಲಿಯಾಸ್ ಪುಟ್ಟತೇಜಮ್ಮಳನ್ನು 2012ರ ಮೇ 29ರಂದು ವಿವಾಹವಾಗಿದ್ದ. ನಾಲ್ಕೈದು ತಿಂಗಳು ಪತ್ನಿಯೊಂದಿಗೆ ಅನ್ಯೋನ್ಯವಾಗಿದ್ದ ಸಿದ್ದರಾಜು ನಂತರದಲ್ಲಿ ಕ್ಷುಲ್ಲಕ ಕಾರಣಕ್ಕೂ ಜಗಳವಾಡುತ್ತಿದ್ದ. ಕೆಲ ವರ್ಷಗಳ ಬಳಿಕ ಮದ್ಯಪಾನ ಮಾಡಿಕೊಂಡು ಬಂದು ಪತ್ನಿಗೆ ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ. ಸಹನಾ ತಾಯಿ ಹಲವು ಬಾರಿ ಬುದ್ದಿವಾದ ಹೇಳಿದರೂ ಕೇಳದ ಕಾರಣ ಮಗಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು.

ಮದ್ಯಪಾನ ಮಾಡಿಕೊಂಡು ಅಲ್ಲಿಗೂ ಹೋಗಿ ಜಗಳವಾಡುತ್ತಿದ್ದ ಸಿದ್ದರಾಜು, ಪತ್ನಿ ಸಹನಾಗೆ ಹಿಂಸೆ ನೀಡುತ್ತಿದ್ದ. 2018ರ ಆಗಸ್ಟ್ 5ರಂದು ರಾತ್ರಿ ಗಲಾಟೆ ಮಾಡುತ್ತಿದ್ದಾಗ ಮನೆಯವರು ಸಮಾಧಾನಪಡಿಸಿದ್ದರು. ಆದರೆ ಮುಂಜಾನೆ(ಆ.6) 4.30ರ ವೇಳೆಯಲ್ಲಿ ಮತ್ತೆ ಜಗಳ ತೆಗೆದಿದ್ದ. ನೀನು ಬೇರೆ ವ್ಯಕ್ತಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದೀಯಾ ಎಂದು ಹೇಳಿ ಮಾನಸಿಕ ಹಿಂಸೆ ನೀಡಿದ್ದಲ್ಲದೆ ಮರದ ವಸ್ತುವಿನಿಂದ ತಲೆ, ಮೈಕೈಗೆ ಹೊಡೆದಿದ್ದ. ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಸಹನಾಳನ್ನು ಹೆಚ್.ಡಿ.ಕೋಟೆ ಆಸ್ಪತ್ರೆಗೆ ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಆ.10ರಂದು ಚಿಕಿತ್ಸೆ ಫಲಕಾರಿಯಾಗದೆ ಸಹನಾ ಮೃತಪಟ್ಟಳು.

ಈ ಸಂಬಂಧ ಸಿದ್ದರಾಜು ಹಾಗೂ ಕುಮ್ಮಕ್ಕು ನೀಡಿದ ಆರೋಪದಡಿ ಆತನ ಅಣ್ಣ ಹಾಗೂ ಅತ್ತಿಗೆ ವಿರುದ್ಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ವೃತ್ತ ನಿರೀಕ್ಷಕ ಎಂ.ಎಲ್.ಶೇಖರ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು. 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಅವರು, ಸಿದ್ದರಾಜು ವಿರುದ್ಧದ ಆರೋಪ ಸಾಕ್ಷ್ಯಾಧಾರಗಳಿಂದ ಸಾಭೀತಾದ ಹಿನ್ನೆಲೆಯಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 17 ಸಾವಿರ ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಆದರೆ ಉಳಿದಿಬ್ಬರು ಆರೋಪಿಗಳ ವಿರುದ್ಧ ಸಾಕ್ಷ್ಯಾಧಾರ ಗಳಿಲ್ಲದ ಕಾರಣ ಅವರನ್ನು ಬಿಡುಗಡೆಗೊಳಿಸಲು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ನಾಗಪ್ಪ ಸಿ.ನಾಕ್‌ಮನ್ ವಾದ ಮಂಡಿಸಿದ್ದರು.

ನವೋದಯ ಪ್ರವೇಶ ಪರೀಕ್ಷೆ ದಿನಾಂಕ ಪ್ರಕಟ

ಮೈಸೂರು,ಫೆ.7–ಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯಕ್ಕೆ 2023–24ನೇ ಸಾಲಿನಲ್ಲಿ 9ನೇ ತರಗತಿಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು ಫೆ.11ರ ಶನಿವಾರದಂದು ಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯ ಕೇಂದ್ರದಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು www. navo daya.gov.in ವೆಬ್‌ಸೈಟ್‌ನಿಂದ ತಮ್ಮ ರಿಜಿಸ್ಟರ್ ಸಂಖ್ಯೆ ಮತ್ತು ಜನ್ಮ ದಿನಾಂಕ ಬಳಸಿ ಡೌನ್‌ಲೋಡ್ ಮಾಡಿಕೊಂಡು, ಪ್ರವೇಶ ಪತ್ರದೊಂದಿಗೆ ತಮ್ಮ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಲು ತಿಳಿಸಿದೆ. ಮಾಹಿತಿ ಬೇಕಾದಲ್ಲಿ 0821–2970040 ಸಂಪರ್ಕಿಸಬಹುದು.

ರಾಜ್ಯ ಸಮ್ಮೇಳನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಪ್ರಶಸ್ತಿ ಪ್ರದಾನ





ಕರ್ನಾಟಕ ವೃತ್ತಿ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆಎ) ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಮಾಜಿ ಸಚಿವ ಎಂ.ಬಿ.ಪಾಟೀಲ್ ಅವರು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ಪ್ರಜಾವಾಣಿ ಹುಣಸೂರು ವರದಿಗಾರ ಎಚ್.ಎಸ್.ಸಚ್ಚಿತ್ ಮತ್ತು ಕನ್ನಡ ಪ್ರಭ ಉಪ ಸಂಪಾದಕ ಎಲ್.ಎಸ್.ಶ್ರೀಕಾಂತ್ ಅವರಿಗೆ ಪ್ರಶಸ್ತಿ ವಿತರಿಸಿದರು. ಈ ವೇಳೆ ಕೆಯುಡಬ್ಲ್ಯೂಜೆಎ ಅಧ್ಯಕ್ಷ ಶಿವಾನಂದ ತಗಡೂರ್ ಹಾಜರಿದ್ದಾರೆ. ಬಲಚಿತ್ರದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಅತ್ಯುತ್ತಮ ಪತ್ರಕರ್ತರ ಸಂಘದ ಪ್ರಶಸ್ತಿಯನ್ನು ಸಂಘದ ಅಧ್ಯಕ್ಷ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮುಖ್ಯ ವರದಿಗಾರರೂ ಆದ ಎಸ್.ಟಿ.ರವಿಕುಮಾರ್ ಸ್ವೀಕರಿಸಿದರು. ಚಿತ್ರದಲ್ಲಿ ಸಂಘದ ಗ್ರಾಮಾಂತರ ಅಧ್ಯಕ್ಷ ಧರ್ಮಾಪುರ ನಾರಾಯಣ, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಅವರನ್ನು ಕಾಣಬಹುದು.


ಮೈಸೂರು, ಫೆ.7(ಆರ್‌ಕೆ)–ವಿಜಯಪುರದಲ್ಲಿ ಫೆ.5ರಂದು (ಭಾನುವಾರ) ನಡೆದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 37ನೇ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಾಂಘಿಕ ಚಟುವಟಿಕೆಗಳ ಮೂಲಕ ಸಕ್ರಿಯವಾಗಿ ಕೆಲಸ ಮಾಡುವ ಸಂಘಕ್ಕೆ ನೀಡುವ ಪ್ರೋತ್ಸಾಹ ಪ್ರಶಸ್ತಿಯನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಪ್ರದಾನ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ ಹಾಗೂ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಬಿ.ರಾಘವೇಂದ್ರ ಪ್ರಶಸ್ತಿ ಸ್ವೀಕರಿಸಿದರು. ಅಲ್ಲದೇ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಪ್ರತೀ ವರ್ಷ ನೀಡುವ ವಾರ್ಷಿಕ ಪ್ರಶಸ್ತಿಗಳನ್ನು ಮೈಸೂರು ಜಿಲ್ಲೆಯ ಹಲವು ಪತ್ರಕರ್ತರಿಗೆ ಇದೇ ಸಂದರ್ಭ ಪ್ರದಾನ ಮಾಡಲಾಯಿತು.

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಛಾಯಾಗ್ರಾಹಕ ಎಂ.ಎನ್.ಲಕ್ಷ್ಮಿನಾರಾಯಣ ಯಾದವ್‌ಗೆ ಅತ್ಯುತ್ತಮ ಸುದ್ದಿ ಚಿತ್ರಕ್ಕಾಗಿ ಪ್ರಶಸ್ತಿ ನೀಡಲಾಯಿತು. ಉಳಿದಂತೆ ಉದಯವಾಣಿಯ ಹಿರಿಯ ವರದಿಗಾರ ಕೂಡ್ಲಿ ಗುರುರಾಜ್ ಅವರಿಗೆ ಅತ್ಯುತ್ತಮ ರಾಜಕೀಯ ವಿಶ್ಲೇಷಣೆಗಾಗಿ ಖಾದ್ರಿ ಶಾಮಣ್ಣ ಪ್ರಶಸ್ತಿ, ಅತ್ಯುತ್ತಮ ಸ್ಕೂಪ್ ವರದಿಗಾಗಿ ಕನ್ನಡ ಪ್ರಭದ ಎಸ್.ಎಲ್.ಶ್ರೀಕಾಂತ್‌ಗೆ ಬಿ.ಎಸ್. ವೆಂಕಟರಾಂ ಪ್ರಶಸ್ತಿ, ಕ್ರೀಡಾ ವರದಿಗಾಗಿ ವಿಜಯವಾಣಿಯ ಅವಿನಾಶ್ ಜೈನಹಳ್ಳಿಗೆ ನೆಟ್ಟಕಲ್ಲಪ್ಪ ಪ್ರಶಸ್ತಿ, ಅರಣ್ಯ ಕುರಿತ ಸುದ್ದಿಗಾಗಿ ಪ್ರಜಾವಾಣಿಯ ಹುಣಸೂರು ವರದಿಗಾರ ಎಸ್.ಎಸ್.ಸಚಿತ್‌ಗೆ ಆರ್.ಎಲ್. ವಾಸುದೇವ ರಾವ್ ಪ್ರಶಸ್ತಿ ಹಾಗೂ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ವಿಶೇಷ ಸೇವೆಗಾಗಿ ನೀಡುವ ಪ್ರಶಸ್ತಿಯನ್ನು ರಾಜ್ಯ ಧರ್ಮ ಪತ್ರಿಕೆ ಸಂಪಾದಕ ಮಹಿ ಮಹೇಶ್ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮಾಜಿ ಸಚಿವ ಎಂ.ಬಿ.ಪಾಟೀಲ್, ಶಾಸಕ ಶಿವಾನಂದ ಎಸ್.ಪಾಟೀಲ್, ವಿಜಯಪುರ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಂಗಮೇಶ್ ಚೂರಿ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಲಕರ್ಣಿ ಸೇರಿದಂತೆ ಹಲವು ಗಣ್ಯರು ಸಮರಂಭದಲ್ಲಿ ಉಪಸ್ಥಿತರಿದ್ದರು.

ಬಜೆಟ್ ಜನರ ಬಳಿ ಕೊಂಡೊಯ್ಯಿರಿ



ನವದೆಹಲಿ, ಫೆ.7– ದೆಹಲಿಯಲ್ಲಿ ಬಿಜೆಪಿ ಸಂಸದೀಯ ಪಕ್ಷ ಸಭೆ ನಡೆಯಿತು. ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರ ಸಚಿವರು, ನಾಯಕರು, ಸಂಸದರು ಭಾಗವಹಿಸಿದ್ದರು.

ಸಭೆ ಆರಂಭಕ್ಕೆ ಮುನ್ನ ರಾಷ್ಟ್ರಾಧ್ಯಕ್ಷ ಜೆ ಪಿ ನಡ್ಡಾ ಪ್ರಧಾನಿ ನರೇಂದ್ರ ಮೋದಿಯವರಿಗೆ ಹಾರ ಹಾಕಿ ಸನ್ಮಾನಿಸಿದರು. ಇತ್ತೀಚೆಗಷ್ಟೆ ಕೇಂದ್ರ ಬಜೆಟ್ 2023 ಮಂಡನೆಯಾಗಿದ್ದು, ಈ ಬಗ್ಗೆ ಚರ್ಚಿಸಲು ಮತ್ತು ಸಂಸತ್ತಿನಲ್ಲಿ ನಡೆಯುತ್ತಿರುವ ಬಜೆಟ್ ಅಧಿವೇಶನ ಹಿನ್ನೆಲೆಯಲ್ಲಿ ಬಿಜೆಪಿ ಸಂಸದೀಯ ಸಭೆ ಕರೆಯಲಾಗಿದೆ. ಈ ಸಂದರ್ಭದಲ್ಲಿ ಸಚಿವರು, ಸಂಸದರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕೆಲಸದ ವಿಚಾರ, ಸಮಾಜಸೇವೆಯಲ್ಲಿ ಆತ್ಮತೃಪ್ತಿ ಪಟ್ಟುಕೊಳ್ಳದೆ ತಳಮಟ್ಟದಲ್ಲಿ ಜನರಿಗೆ ತಲುಪಬೇಕು ಎಂದು ಬಿಜೆಪಿ ಸಂಸದರಿಗೆ ಪ್ರಧಾನಿ ನರೇಂದ್ರ ಮೋದಿ ಕಿವಿಮಾತು ಹೇಳಿದ್ದಾರೆ. ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ತಮ್ಮ ಸರ್ಕಾರ ಉತ್ತಮ ಬಜೆಟ್ ನೀಡಲು ಪ್ರಯತ್ನಿಸಿತು. ಇದಕ್ಕೆ ಎಲ್ಲರು ಸಹಕಾರ ನೀಡಿದ್ದಾರೆ ಎಂದು ಶ್ಲಾಘಿಸಿದರು. ಬಜೆಟ್ ಎಂದರೆ ಸಮಾಜದ ಪ್ರತಿಯೊಂದು ಶ್ರೇಣಿಯನ್ನು ತಲುಪಬೇಕು. ಈ ಬಾರಿ ಮಂಡಿಸಿರುವ ಬಜೆಟ್ ಅನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವಂತೆ ಇದೇ ಸಂದರ್ಭದಲ್ಲಿ ಸಂಸದರಿಗೆ ಪ್ರಧಾನಿ ಸೂಚಿಸಿದರು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಜೆಟ್ ಬಗ್ಗೆ ಮಾತನಾಡುವುದು, ಜನರಿಗೆ ತಲುಪಿಸುವುದು ಸಂಸದರ ಜವಾಬ್ದಾರಿಯಾಗಿದೆ. ಜನರಿಗೆ ಬಜೆಟ್‌ನಲ್ಲಿ ಏನಿದೆ, ಜಗತ್ತು ಆರ್ಥಿಕ ಅನಿಶ್ಚಿತತೆ ಎದುರಿಸುವಾಗ ಬಜೆಟ್‌ನಲ್ಲಿ ಜನರಿಗೆ ಏನು ಕೊಡಲಾಗಿದೆ ಎಂಬುದನ್ನು ತೋರಿಸಬೇಕು ಎಂದರು.

ಯುವಕರನ್ನು ಉತ್ತೇಜಿಸಲು ಅವರು ಹೆಚ್ಚೆಚ್ಚು ಸ್ಪರ್ಧೆಗಳು ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವಂತೆ ಮಾಡಲು ಹಲವು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮತ್ತು ಗಡಿ ಜಿಲ್ಲೆಗಳ ಜನರನ್ನು ತಲುಪುವಂತೆ ಸಂಸದರಿಗೆ ಸಲಹೆ ನೀಡಿದರು. 2014 ಮತ್ತು 2019ರಲ್ಲಿ ಬಿಜೆಪಿಗೆ ಬಹುಮತ ಸಿಕ್ಕಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತಾದರೂ ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬಾರದು, ಇನ್ನಷ್ಟು ಕೆಲಸ ಮಾಡಿ ಜನರಿಗೆ ಹತ್ತಿರವಾಗಬೇಕು ಎಂದರು.

ಜನವರಿ 31ರಂದು ಕೇಂದ್ರ ಬಜೆಟ್ ಅಧಿವೇಶನ ಆರಂಭವಾಗಿದ್ದು ರಾಷ್ಟ್ರಪತಿ ದ್ರೌಪದಿ ಮುರ್ಮು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆಬ್ರವರಿ 1ರಂದು 2023–24ನೇ ಸಾಲಿನ ಬಜೆಟ್ ಮಂಡಿಸಿದರು.

ಬಡವರ ಹಿತಾಸಕ್ತಿಯ ಬಜೆಟ್

ನವದೆಹಲಿ: ಬಡವರ ಹಿತಾಸಕ್ತಿಯನ್ನು ಕೇಂದ್ರೀಕರಿಸಿ ಪ್ರತಿ ಬಜೆಟ್ ಅನ್ನು ಬಿಜೆಪಿ ಸರ್ಕಾರವು ಮಂಡಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬಣ್ಣಿಸಿದ್ದಾರೆ. ಇಲ್ಲಿ ನಡೆದ ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ಲೋಕಸಭಾ ಚುನಾವಣೆಗೂ ಮುನ್ನ ಮಂಡನೆಯಾದ ಪೂರ್ಣ ಪ್ರಮಾಣದ ಬಜೆಟ್ ಈ ಬಾರಿಯದ್ದಾಗಿದ್ದರೂ ಯಾರೂ ಇದನ್ನು 'ಚುನಾವಣಾ ಬಜೆಟ್' ಎಂದು ಕರೆಯುತ್ತಿಲ್ಲ ಎಂದೂ ಹೇಳಿದ್ದಾರೆ. ಸಮಗ್ರ ಅಭಿವೃದ್ಧಿ ಮತ್ತು ಸಮಾಜದ ಎಲ್ಲಾ ವಿಭಾಗಗಳ ಹಿತಾಸಕ್ತಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿತ್ತು ಎಂದು ಪ್ರತಿಪಾದಿಸಿದ್ದಾರೆ.

ಜೋಶಿ ವಿರುದ್ಧದ ಹೇಳಿಕೆ ವಾಪಸ್ ಪಡೆಯದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ಹುಬ್ಬಳ್ಳಿ, ಫೆ.7–ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಪ್ರಹ್ಲಾದ್ ಜೋಶಿ ವಿರುದ್ಧ ನೀಡಿದ ಹೇಳಿಕೆ ಇದೀಗ ಭಾರಿ ವಿರೋಧಕ್ಕೆ ಕಾರಣವಾಗಿದೆ. ಪೇಶ್ವೆಗೆ ಜೋಶಿ ಅವರನ್ನು ಹೋಲಿಕೆ ಮಾಡಿದ್ದು ಖಂಡನೀಯ. ಪ್ರಹ್ಲಾದ್ ಜೋಶಿ ನವಗ್ರಹ ಯಾತ್ರೆ ಮಾಡಿ ಅಂತಾ ಹೇಳಿದ್ದು ಸತ್ಯ. ಆದರೆ ಅದು ಶನಿಗ್ರಹ ಯಾತ್ರೆ ಆಗಬೇಕಿತ್ತು. ಕೇಂದ್ರ ಸಚಿವ ಜೋಶಿ ಸರಿಯಾದ ರೀತಿಯಲ್ಲಿ ಮಾತನಾಡಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ ಆರೋಪ ಮಾಡಿರೋದು ಅಕ್ಷಮ್ಯ ಅಪರಾಧ. ಆ ಹೇಳಿಕೆಯನ್ನು ವಾರದಲ್ಲಿ ವಾಪಸ್ ಪಡೆಯದಿದ್ದರೆ ಹುಬ್ಬಳ್ಳಿಯಲ್ಲಿ ಕುಮಾರಸ್ವಾಮಿ ಅಣಕು ಶವಯಾತ್ರೆ ಮಾಡಲಾಗುವುದು ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಸಂಯೋಜಕ ಶಿವಣ್ಣ ಮುತ್ತಣ್ಣವರ್ ಎಚ್ಚರಿಕೆ ನೀಡಿದ್ದಾರೆ.

ಅಜ್ಮೇರ್ ದರ್ಗಾಕ್ಕೆ ಚಾದರಗಳ ಅರ್ಪಿಸಿ, ಬಿಜೆಪಿ, ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ಓಲೈಕೆ

ಬೆಂಗಳೂರು, ಫೆ.7– ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇರುವಾಗ ಕೆಲ ಮುಖಂಡರು ಅಜ್ಮೇರ್ ದರ್ಗಾಕ್ಕೆ ಚಾದರ ನೀಡುವುದು, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವುದು ಮತ್ತಿತರ ಕೆಲಸಗಳ ಮೂಲಕ ಅಲ್ಪಸಂಖ್ಯಾತ ಸಮುದಾಯದವರನ್ನು ಓಲೈಕೆಯಲ್ಲಿ ತೊಡಗಿದ್ದಾರೆ. ಇತ್ತೀಚೆಗೆ ಬಿಜೆಪಿ ಶಾಸಕ ಉದಯ್ ಗರುಡಾಚಾರ್ 811ನೇ ಉರುಸ್‌ನಲ್ಲಿ ಸೂಫಿ ಸಂತ ಖ್ವಾಜಾ ಮೊಯಿನುದ್ದೀನ್ ಚಿಸ್ತಿ ಅವರ ದರ್ಗಾಕ್ಕೆ ಚಾದರ ಅರ್ಪಿಸಿದರು. ನಗರದ ಚಾಮರಾಜಪೇಟೆಯ ಐತಿಹಾಸಿಕ ಹಜರತ್ ಸಯ್ಯದ್ ಸಫ್ದರ್ ಅಲಿ ಶಾ ಖಾದ್ರಿ ಹಾಗೂ ಹಜರತ್ ಶಂಶೀರ್ ಅಲಿ ಶಾ ಖಾದ್ರಿ ದರ್ಗಾಕ್ಕೆ ಭೇಟಿ ನೀಡಿ ಅಜ್ಮೇರ್ ದರ್ಗಾಕ್ಕೆ ಚಾದರ ಅರ್ಪಿಸಿದರು.

ಜಯನಗರದಿಂದ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಿ.ಕೆ.ರಾಮಮೂರ್ತಿ, ಅಜ್ಮೇರ್ ದರ್ಗಾಕ್ಕೆ ಚಾದರ ಮಾತ್ರ ನೀಡಿಲ್ಲ. ಇದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಸದಸ್ಯರಿಗೆ ಆಟೋರಿಕ್ಷಾಗಳ ವ್ಯವಸ್ಥೆ ಮಾಡಿದೆ ಮತ್ತು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಸಹ ನೀಡಲಾಗಿದೆ ಎಂದರು.

ಬೊಮ್ಮನಹಳ್ಳಿಯ ಮೂರು ಬಾರಿ ಬಿಜೆಪಿ ಶಾಸಕ ಸತೀಶ್ ರೆಡ್ಡಿ, ತಾವು ಕೆಲವು ಮಸೀದಿಗಳಿಗೆ ಸಂಬಂಧಿಸಿದ ಭೂ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಮುಸ್ಲಿಂ ಸಮುದಾಯಕ್ಕೆ ಸಹಾಯ ಮಾಡಿದ್ದೇನೆ. ಇಲ್ಲಿನ 28 ಮಸೀದಿ ಸಮಿತಿಗಳಿಂದ ನನಗೆ ಬೆಂಬಲವಿದೆ. ನನ್ನ ವಿಧಾನಸಭಾ ಕ್ಷೇತ್ರದಿಂದ ಸೈಯದ್ ಸಲಾಂ ಅವರಿಗೆ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಸ್ಥಾನ ಸಿಗುವಂತೆ ಮಾಡಿದ್ದೇನೆ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್ ಶಾಸಕ ಭೈರತಿ ಸುರೇಶ್, ನಾನು ಹೊಲಿಗೆ ಯಂತ್ರ, ಆಟೋರಿಕ್ಷಾ ಮತ್ತು ಸ್ಕಾಲರ್‌ಶಿಪ್‌ಗಳನ್ನು ಮುಸ್ಲಿಮರಿಗೆ ಮಾತ್ರವಲ್ಲದೆ ಎಲ್ಲಾ ಸಮುದಾಯಗಳಿಗೆ ನೀಡಿದ್ದೇನೆ ಎಂದಿದ್ದಾರೆ. ಎರಡು ಬಾರಿ ಶಾಸಕರಾಗಿರುವ ಮತ್ತು ಗೋವಿಂದರಾಜನಗರ ಕ್ಷೇತ್ರದ ಕಾಂಗ್ರೆಸ್ ನಾಯಕ ಪ್ರಿಯಾ ಕೃಷ್ಣ, 'ನಾನು ಅಧಿಕಾರದಲ್ಲಿಲ್ಲದಿದ್ದರೂ, ಮಕ್ಕಳ ಶಾಲಾ ಶುಲ್ಕದಂತಹ ಸಹಾಯಕ್ಕಾಗಿ ಜನರು ನನ್ನ ಬಳಿಗೆ ಬರುತ್ತಾರೆ ಮತ್ತು ನಾನು ಅವರಿಗೆ ಸಹಾಯ ಮಾಡುತ್ತೇನೆ ಎಂದರು.

ಲೋಕಾಯುಕ್ತ ಪೊಲೀಸರ ವೈಫಲ್ಯ ಅಧಿಕಾರಿಯಿಂದ ಕೊಂಡ ಹಣ ನೀಡುವಂತೆ 'ಹೈ' ಸೂಚನೆ

ಬೆಂಗಳೂರು,ಫೆ.7–ಉದ್ಯೋಗ ಮತ್ತು ತರಬೇತಿ ವಿಭಾಗದ ಮಾಜಿ ಜಂಟಿ ನಿರ್ದೇಶಕ ಶಿವಲಿಂಗಮೂರ್ತಿ ಅವರನ್ನು ಭ್ರಷ್ಟಾಚಾರ ಆರೋಪದಿಂದ ಖುಲಾಸೆಗೊಳಿಸಿದ ಕರ್ನಾಟಕ ಹೈಕೋರ್ಟ್, 2003ರಲ್ಲಿ ಅವರ ಮನೆಯಿಂದ ವಶಪಡಿಸಿಕೊಂಡ 12.15 ಲಕ್ಷ ರೂಪಾಯಿ ನಗದು ಬಿಡುಗಡೆ ಮಾಡುವಂತೆ ವಿಶೇಷ ನ್ಯಾಯಾಲಯಕ್ಕೆ ಸೂಚಿಸಿದೆ. ದಾಳಿ ತಂಡದ ನೇತೃತ್ವ ವಹಿಸಿದ್ದ ತನಿಖಾಧಿಕಾರಿ ಮಹೇಶ್, ಪ್ರಾಸಿಕ್ಯೂಶನ್ ಲೋಕಾಯುಕ್ತ ಪೊಲೀಸರು ಪರಿಶೀಲಿಸಲು ವಿಫಲರಾಗಿದ್ದಾರೆ ಎಂದು ಹೈಕೋರ್ಟ್ ಹೇಳಿದೆ.



ಭ್ರಷ್ಟಾಚಾರ ಆರೋಪದಿಂದ ಶಿವಲಿಂಗಮೂರ್ತಿ ಅವರನ್ನು ವಿಶೇಷ ನ್ಯಾಯಾಲಯ ಖುಲಾಸೆಗೊಳಿಸಿದ ವಿರುದ್ಧ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಮೇಲ್ಮನವಿಯನ್ನು ಮಾರ್ಚ್ 9, 2018ರಂದು ವಜಾಗೊಳಿಸಿದ ನ್ಯಾಯಮೂರ್ತಿ ಕೆ.ನಟರಾಜನ್, ಶೋಧದ ವೇಳೆ ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡ ನಗದು ಬಿಡುಗಡೆಗೆ ಸಲ್ಲಿಸಿದ್ದ ಮೇಲ್ಮನವಿಯನ್ನು ಅಂಗೀಕರಿಸಿದರು. ಅವರು ಖುಲಾಸೆಗೊಂಡರೂ ವಿಶೇಷ ನ್ಯಾಯಾಲಯದಿಂದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ಅವರಿಗೆ ಮೊತ್ತವನ್ನು ಬಿಡುಗಡೆ ಮಾಡಲು ಯಾವುದೇ ಆದೇಶವಿಲ್ಲದ ಕಾರಣ ಹೈಕೋರ್ಟ್ ಮೊರೆ ಹೋಗಿದ್ದರು. ತನಿಖಾಧಿಕಾರಿಯು ಆರೋಪಿ ಮನೆಯಿಂದ 12.15 ಲಕ್ಷ ರೂ.ಗಳನ್ನು ವಶಪಡಿಸಿಕೊಂಡಾಗ, ಯಾವುದೇ ತನಿಖೆ ನಡೆಸಲಾಗಿಲ್ಲ ಮತ್ತು ಈ ಮೊತ್ತದ ಮೇಲೆ ಯಾವುದೇ ಆರೋಪಪಟ್ಟಿ ಸಲ್ಲಿಸಲಾಗಿಲ್ಲ. ಆದ್ದರಿಂದ ಆ ಮೊತ್ತವನ್ನು ಆರೋಪಿಗಳಿಗೆ ಬಿಡುಗಡೆ ಮಾಡತಕ್ಕದ್ದು. ತನಿಖಾ ಸಂಸ್ಥೆಯು ಅವರು ತಿಳಿದಿರುವ ಆದಾಯದ ಮೂಲಗಳಿಗಿಂತ ಹೆಚ್ಚಿನ ಸಂಪತ್ತನ್ನು ಸಂಗ್ರಹಿಸಿದ್ದರೆ, ಅವರು ಅವರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದಿತ್ತು.

ನೇಮಕ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ

ವಿಕ್ಟೋರಿಯಾ ಗೌರಿ ಪ್ರಮಾಣ ವಚನ ಸ್ವೀಕಾರ



ನವದೆಹಲಿ,ಫೆ.7–ವಕೀಲೆ ಎಲ್.ವಿಕ್ಟೋರಿಯಾ ಗೌರಿ ಅವರನ್ನು ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಾಧೀಶರನ್ನಾಗಿ ನೇಮಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಮಂಗಳವಾರ ವಜಾಗೊಳಿಸಿದೆ. ಪ್ರಕರಣದ ವಿಚಾರಣೆ ನಡೆಸಿದ ನ್ಯಾ. ಸಂಜೀವ್ ಖನ್ನಾ, ಬಿ.ಆರ್ ಗವಾಯಿ ಅವರ ಪೀಠವು, ಅರ್ಜಿಯಲ್ಲಿ ಪ್ರಸ್ತಾಪಿಸಲಾದ ವಿಷಯವು ಗೌರಿಯ ಅರ್ಹತೆ ಮತ್ತು ಯೋಗ್ಯತೆಗೆ ಸಂಬಂಧಿಸಿದೆ. ಇದು ವ್ಯಕ್ತಿನಿಷ್ಠ ಮೌಲ್ಯಮಾಪನವಾಗಿದೆ. ಆದ್ದರಿಂದ ನ್ಯಾಯಾಲಯವು ಅದನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದೆ.

ನಾವು ಅರ್ಹತೆ ಮತ್ತು ಸೂಕ್ತತೆಯ ನಡುವೆ ಅರ್ಹತೆಯ ಸುತ್ತ ಮಾತ್ರ ಕೆಲಸ ಮಾಡಬಹುದು ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು. ಕೊಲಿಜಿಯಂ ಗೌರಿ ವಿರುದ್ಧದ ಎಲ್ಲಾ ವಿಷಯಗಳನ್ನು ಪರಿಗಣಿಸಲಿದೆ. ಕೊಲಿಜಿಯಂನ ನಿರ್ಧಾರದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ. ಗೌರಿ ಅವರ ನೇಮಕದ ವಿರುದ್ಧ ಮದ್ರಾಸ್ ಹೈಕೋರ್ಟ್‌ನಿಂದ ವಕೀಲರು ಅರ್ಜಿ ಸಲ್ಲಿಸಿದ್ದರು. ಅವರು ಬಿಜೆಪಿ ಸದಸ್ಯರಾಗಿದ್ದಾರೆ, ವಕೀಲೆಯಾಗಿ ಬಿಜೆಪಿಯ ಪರ ಕೆಲಸವೂ ಮಾಡಿದ್ದಾರೆ. ಸಮುದಾಯವೊಂದರ ವಿರುದ್ಧ ಅವರು ನೀಡಿರುವ ಹೇಳಿಕೆಗಳು ಸಾರ್ವಜನಿಕ ವಲಯದಲ್ಲಿರುವ ಹಿನ್ನೆಲೆ ಅವರ ನೇಮಕವನ್ನು ತಡೆ ಹಿಡಿಯಬೇಕು ಎಂದು ಮನವಿ ಮಾಡಲಾಗಿತ್ತು. ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಹೊತ್ತಲ್ಲೆ ವಿಕ್ಟೋರಿಯಾ ಗೌರಿ ಮದ್ರಾಸ್ ಹೈಕೋರ್ಟ್ ಹೆಚ್ಚುವರಿ ನ್ಯಾಯಧೀಶೆಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಹೈಕೋರ್ಟ್ ಮುಖ್ಯ ನ್ಯಾಯಧೀಶರು ಪ್ರಮಾಣ ವಚನ ಬೋಧಿಸಿದರು.

ಅತ್ಯಾಚಾರ ಅಪರಾಧಿಗಳ ಬಿಡುಗಡೆ ಪ್ರಶ್ನಿಸಿ ಬಿಲ್ಕಿಸ್ ಬಾನು ಅರ್ಜಿ: ಶೀಘ್ರವೇ ವಿಚಾರಣೆ, ಸುಪ್ರೀಂ ಭರವಸೆ

ನವದೆಹಲಿ, ಫೆ.7– 2002ರ ಗೋಧ್ರಾ ಗಲಭೆಯಲ್ಲಿ ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ತನ್ನ ಕುಟುಂಬ ಸದಸ್ಯರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಗೆ ಮಂಗಳವಾರ ಸುಪ್ರೀಂಕೋರ್ಟ್ ಭರವಸೆ ನೀಡಿದ್ದು, 11 ಅಪರಾಧಿಗಳ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಆಕೆಯ ಅರ್ಜಿಯನ್ನು ಹೊಸ ಪೀಠದ ರಚನೆಯ ನಂತರ ಶೀಘ್ರದಲ್ಲೇ ವಿಚಾರಣೆ ನಡೆಸಲಾಗುವುದು ಎಂದಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ಮತ್ತು ನ್ಯಾಯಮೂರ್ತಿಗಳಾದ ಪಿಎಸ್ ನರಸಿಂಹ ಮತ್ತು ಜೆಬಿ ಪರ್ದಿವಾಲಾ ಅವರ ಪೀಠವು, ಹೊಸ ಪೀಠವನ್ನು ಶೀಘ್ರದಲ್ಲೇ ರಚಿಸಲಾಗುವುದು ಎಂದು ಬಾನು ಅವರನ್ನು ಪ್ರತಿನಿಧಿಸಿದ್ದ ವಕೀಲೆ ಶೋಭಾ ಗುಪ್ತಾ ಅವರಿಗೆ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆ; ಮಹಾರಾಣಿ ವಾಣಿಜ್ಯ ಕಾಲೇಜಿಗೆ ಡಿಸಿ ಭೇಟಿ: ಪರಿಶೀಲನೆ



ಮೈಸೂರು, ಫೆ.7(ಎಂಕೆ)– ಮುಂಬರುವ ವಿಧಾನ ಸಭಾ ಚುನಾವಣೆ ಹಿನ್ನೆಲೆ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿಗೆ ಮಂಗಳವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸ್ಥಳ ಪರಿಶೀಲನೆ ನಡೆಸಿದರು.

ಮತ ಎಣಿಕೆ ಭದ್ರತಾ ಕೊಠಡಿ ಹಾಗೂ ಮತ ಎಣಿಕೆಗೆ ಪೂರ್ವ ತಯಾರಿ ಮಾಡಿಕೊಳ್ಳುವುದರ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರಲ್ಲದೆ ಕಾಲೇಜಿನ ಸ್ಥಿತಿ–ಗತಿ ಕುರಿತು ಮಾಹಿತಿ ಪಡೆದರು. ಡಿಸಿಪಿ ಮುತ್ತುರಾಜ್, ಉಪವಿಭಾಗಾಧಿಕಾರಿ ಕಮಲಬಾಯಿ, ತಹಶೀಲ್ದಾರ್ ಗಿರೀಶ್, ಚುನಾವಣಾ ತಹಶೀಲ್ದಾರ್ ರಾಮ್‌ಪ್ರಸಾದ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾಮಾಜಿಕ ನ್ಯಾಯ ಪರಿಕಲ್ಪನೆಯೊಂದಿಗೆ ಮಾಜಿ ಶಾಸಕರ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ



ಮೈಸೂರು, ಫೆ.7(ಎಂಕೆ)– ಸಾಮಾಜಿಕ ನ್ಯಾಯ ಪರಿಕಲ್ಪನೆಯಲ್ಲಿ ಸಮಾಜದ ಒಳಗಿರುವ ಸಂಪತ್ತು, ಅವಕಾಶ ಮತ್ತು ಹಕ್ಕುಗಳು ಪ್ರತಿಯೊಬ್ಬರಿಗೂ ಸಮಾನವಾಗಿ ದೊರೆಯಬೇಕು ಎಂದು ಸಾಹಿತಿ ಪ್ರೊ.ಸಿ.ನಾಗಣ್ಣ ಹೇಳಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ನಿತ್ಯಾನಂದ ಕಲ್ಯಾಣ ಮಂಟಪದ ಎದುರು ಆಯೋಜಿಸಿದ್ದ ವಿಷಯ ಮಂಡನೆ ಕಾರ್ಯಕ್ರಮದಲ್ಲಿ 'ಸಾಮಾಜಿಕ ನ್ಯಾಯದ ಪರಿಕಲ್ಪನೆ' ಕುರಿತು ಮಾತನಾಡಿದರು. ವ್ಯಕ್ತಿಗಳು ತಮ್ಮ ಸಾಮಾಜಿಕ ಹೊಣೆಯನ್ನು ನಿರ್ವಹಿಸುತ್ತಾ ತಮಗೆ ದಕ್ಕ ಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳುವುದು ಸಾಮಾಜಿಕ ನ್ಯಾಯವೇ ಆಗಿದೆ. ತತ್ವ, ನೀತಿ, ಪ್ರವೇಶ ಮತ್ತು ಭಾಗವಹಿಸುವಿಕೆ ಎಂಬುದರಲ್ಲಿ ಪ್ರತಿಯೊಬ್ಬರಿಗೂ ರಾಜಕೀಯ, ಸಾಮಾಜಿಕ ಹಕ್ಕು ಮತ್ತು ಅವಕಾಶಗಳು ದೊರೆಯಬೇಕು. ವ್ಯಕ್ತಿಗಳು ಮತ್ತು ಸಮುದಾಯಗಳಿಗೆ ಸುರಕ್ಷತೆ ಮತ್ತು ಭದ್ರತೆ ದೊರೆಯಬೇಕು. ಸಮಾಜದಲ್ಲಿ ಎಲ್ಲಾ ಸಮುದಾಯಗಳ ತಮ್ಮ ಹಿತರಕ್ಷಣೆಗಾಗಿ ಭಾಗವಹಿಸಬೇಕು ಎಂದು ತಿಳಿಸಿದರು.

ಹುಟ್ಟುಹಬ್ಬ ಆಚರಣೆ: ಇದೇ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಹುಟ್ಟುಹಬ್ಬ ಆಚರಿಸಲಾಯಿತು. ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹುಟ್ಟುಹಬ್ಬದ ಶುಭಾಶಯ ಕೋರಿದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಸದಸ್ಯರಾದ ಶೋಭಾ ಸುನೀಲ್, ಜೆ.ಗೋಪಿ, ಉದ್ಯಮಿ ದೀಪಕ್ ಸತ್ಯ ಮತ್ತಿತರರು ಉಪಸ್ಥಿತರಿದ್ದರು.

ಬಿ ಫಾರಂ ಸಿಗುವುದು ದೇವರಿಗೇ ಗೊತ್ತು

ಶಾಸಕ ಎಂ.ಶ್ರೀನಿವಾಸ್ ಮಾರ್ಮಿಕ ನುಡಿ

ಮಂಡ್ಯ, ಫೆ.7– ಮುಂದಿನ ವಿಧಾನ ಸಭಾ ಚುನಾವಣೆಗೆ ಟಿಕೆಟ್ ಘೋಷಣೆಯಾಗಿದೆ. ಆದರೆ ಬಿ ಫಾರಂ ಸಿಗುವುದು ದೇವರಿಗೇ ಗೊತ್ತು ಎಂದು ಶಾಸಕ ಎಂ.ಶ್ರೀನಿವಾಸ್ ಮಾರ್ಮಿಕವಾಗಿ ನುಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ಟಿಕೆಟ್ ಘೋಷಿಸಿದೆ. ಅದರಂತೆ ಬಿ ಫಾರಂ ಸಿಗುವ ವಿಶ್ವಾಸವಿದೆ. ಇನ್ನೂ ನಾನು ಚುನಾವಣೆಗೆ ತಯಾರಿ ನಡೆಸಿಲ್ಲ. ಫೆ.10ರ ಬಳಿಕ ತಯಾರಿ ನಡೆಸುವುದಾಗಿ ಹೇಳಿದರು. ಮಂಡ್ಯ ಕ್ಷೇತ್ರಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬರುವುದಾದರೆ ಸ್ವಾಗತ ಎಂದು ಈಗಾಗಲೇ ಹೇಳಿದ್ದು, ಅದಕ್ಕೆ ನಾನು ಬದ್ಧನಿದ್ದೇನೆ. ಕುಮಾರಸ್ವಾಮಿ ಬಂದರೆ ಕ್ಷೇತ್ರ ತ್ಯಾಗಕ್ಕೂ ಸಹ ನಾನು ಸಿದ್ಧನಿದ್ದೇನೆ ಎಂದರು.



ಶ್ರೀನಿವಾಸ್ ಸಭಾಂಗಣ ಲೋಕಾರ್ಪಣೆ: ಫೆ.9ರಂದು ಹನಕೆರೆಯಲ್ಲಿ ಹನಕೆರೆ ಎಂ.ಶ್ರೀನಿವಾಸ್ ಸಭಾಂಗಣ ಲೋಕಾರ್ಪಣೆಯಾಗಲಿದೆ. ಅಂದು ಮಧ್ಯಾಹ್ನ 1 ಗಂಟೆಗೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಹನಕೆರೆ ಡೈರಿ ಆವರಣದಲ್ಲಿ ಹನಕೆರೆ ಹಾಲು ಉತ್ಪಾದಕರ ಸಂಘದ ನೆಲ ಮತ್ತು ಮೊದಲ ಮಹಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಹನಕೆರೆ ಎಂ.ಶ್ರೀನಿವಾಸ್ ಸಭಾಂಗಣ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮನ್‌ಮುಲ್ ಅಧ್ಯಕ್ಷ ಆರ್.ರಾಮಚಂದ್ರ, ಉಪಾಧ್ಯಕ್ಷ ಎಂಎಸ್.ರಘುನಂದನ್, ನಿರ್ದೇಶಕ ವಿ.ಎಂ.ವಿಶ್ವನಾಥ್, ಯು.ಸಿ.ಶಿವಕುಮಾರ್, ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಆರ್.ಮಂಜೇಶ್, ವ್ಯವಸ್ಥಾಪಕ ಎಸ್.ಪ್ರಭಾಕರ್, ಉಪ ವ್ಯವಸ್ಥಾಪಕ ಡಾ.ಎ.ಎನ್.ಮಂಜೇಶ್ ಗೌಡ, ಮಾರ್ಗ ವಿಸ್ತರಣಾಧಿಕಾರಿ ಸಿ.ಎಂ.ತೇಜಸ್ವಿನಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕುಂಭಾಭಿಷೇಕ ಮಹೋತ್ಸವ: ಜೊತೆಗೆ ಫೆ.8ರಿಂದ ಕಾಲಭೈರವೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ ಹನಕೆರೆ ಇವರ ವತಿಯಿಂದ ಕುಂಭಾಭಿಷೇಕ ಹಮ್ಮಿಕೊಂಡಿದ್ದು, ಕಾಲಭೈರವೇಶ್ವರ, ಸಿದ್ದೇಶ್ವರ, ಮಂಚಮ್ಮ ದೇವಿ, ಚಿಕ್ಕಮ್ಮ ದೇವಿ ದೇಗುಲಗಳ ಪುನರ್ ಪ್ರತಿಷ್ಠಾಪನಾ ಮಹೋತ್ಸವ ಜರುಗಲಿದ್ದು, ಕಡೆ ದಿನ ಫೆ.10 ರಂದು ಮಹಾಪ್ರಸಾದ ಹಾಗೂ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದರು. ಗೋಷ್ಠಿಯಲ್ಲಿ ಹನಕೆರೆ ಡೈರಿ ಅಧ್ಯಕ್ಷ ಗೋವಿಂದರಾಜು, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಯೋಗೇಶ್, ಗ್ರಾಮಸ್ಥರಾದ ನಾಗಪ್ಪ, ಶಶಿಕುಮಾರ್, ಹೆಚ್.ಬಿ.ರಾಜಣ್ಣ ಇದ್ದರು.

ಮದ್ದೂರಲ್ಲಿ ಎಸ್.ಗುರುಚರಣ್ ಸ್ಪರ್ಧೆ ಖಚಿತ

ವಿಧಾನಪರಿಷತ್ ಸದಸ್ಯ ಮಧು ಸ್ಪಷ್ಟನೆ



ಭಾರತೀನಗರ, ಫೆ.7– ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಎಸ್.ಗುರುಚರಣ್ ಸ್ಪರ್ಧೆ ಖಚಿತ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಸ್ಪಷ್ಟಪಡಿಸಿದರು.

ಇಲ್ಲಿನ ಭಾರತೀ ಕಾಲೇಜಿನ ಆವರಣದಲ್ಲಿ ನಡೆದ ಚಿಕ್ಕರಸಿನಕೆರೆ ಹೋಬಳಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ಬೆಳವಣಿಗೆಯಲ್ಲಿ ಕಾಂಗ್ರೆಸ್‌ನಿಂದ ಗುರುಚರಣ್ ಬದಲು ಬೇರೆಯವರು ಸ್ಪರ್ಧಿಸುತ್ತಾರೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಭ್ಯರ್ಥಿ ಆಯ್ಕೆಯನ್ನು ನಮ್ಮ ನಿರ್ಣಯಕ್ಕೆ ಬಿಟ್ಟಿದ್ದಾರೆ. ನಾನು ಮತ್ತು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಗುರುಚರಣ್ ಅವರಿಗೆ ಟಿಕೆಟ್ ಕೊಡಬೇಕೆಂದು ತಿಳಿಸಿದ್ದೇವೆ. ಅದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಹಾಗಾಗಿ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರವನ್ನು ಈಗಿನಿಂದಲೇ ಪ್ರಾರಂಭಿಸಿದ್ದೇವೆ ಎಂದರು.

ಕೆಪಿಸಿಸಿ ಸದಸ್ಯ ಎಸ್.ಗುರುಚರಣ್ ಮಾತನಾಡಿ, ಕಾಂಗ್ರೆಸ್‌ನ ಪ್ರಜಾಧ್ವನಿ ಕಾರ್ಯಕ್ರಮ ಫೆ.11ರಂದು ಮದ್ದೂರಿನ ಸರ್ಕಾರಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಶಕ್ತಿ ತುಂಬಬೇಕು ಎಂದರು.

ಕಾಂಗ್ರೆಸ್ ಮುಖಂಡ ಆಶಯ್ ಮಾತನಾಡಿ, ಮಾಜಿ ಸಂಸದ ದಿ.ಜಿ.ಮಾದೇಗೌಡರ ಕುಟುಂಬ ಕೈ ಹಿಡಿದು ಮಧು ಜಿ.ಮಾದೇಗೌಡ ಅವರನ್ನು ಆಯ್ಕೆಗೊಳಿಸಿದ್ದೀರಿ. ಅದರಂತೆ ಗುರುಚರಣ್ ಅವರನ್ನು ಮುಂಬರುವ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಎಸ್.ಎಂ.ಕೃಷ್ಣ ಅವರ ಕುಟುಂಬ ಕೈಹಿಡಿಯಬೇಕೆಂದು ಕೋರಿದರು.

ನಮ್ಮ ತಂದೆ ಗೆಲುವಿನಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಬಲಬಂದಂತಾಗಿದೆ. ಪ್ರಜ್ಞಾವಂತರು ಯೋಚಿಸಿ ಮತ ನೀಡಿದ್ದಾರೆ. ಅದರಂತೆ ಈ ಚುನಾವಣೆಯಲ್ಲೂ ಕೈ ಹಿಡಿಯುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಆಶಯ ವ್ಯಕ್ತಪಡಿಸಿದರು.

ಇದೇ ವೇಳೆ ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಲಿಂಗೇಗೌಡ, ಕಾಂಗ್ರೆಸ್ ಮುಖಂಡರಾದ ಬಿ.ಎಂ.ನಂಜೇಗೌಡ, ಪಾಪಣ್ಣ, ಸಿದ್ದೇಗೌಡ, ರಾಮಕೃಷ್ಣ, ವೀಣಾ, ನಾಗರಾಜು, ಕೃಷ್ಣಪ್ಪ, ಆರ್.ಸಿದ್ದಪ್ಪ, ತಾಪಂ ಮಾಜಿ ಸದಸ್ಯ ಗಿರೀಶ್, ಗ್ರಾಪಂ ಅಧ್ಯಕ್ಷೆ ಸೌಮ್ಯ ಸೇರಿದಂತೆ ಹಲವರಿದ್ದರು.

224 ಕ್ಷೇತ್ರದಲ್ಲೂ ಆಪ್ ಕಣಕ್ಕೆ: ನಾಗಣ್ಣ

ಮಂಡ್ಯ, ಫೆ.7– ಮುಂಬರುವ ಚುನಾವಣೆಯಲ್ಲಿ ರಾಜ್ಯದ 224 ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಆಮ್ ಆದ್ಮಿ ಪಕ್ಷದ ಕಾರ್ಯಾಧ್ಯಕ್ಷ ಬಿ.ಟಿ.ನಾಗಣ್ಣ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಪೂರ್ವಭಾವಿ ಸಭೆ ಏರ್ಪಡಿಸಲಾಗಿದ್ದು, ಮುಖಂಡರಿಗೆ ಆಹ್ವಾನ ನೀಡಲಾಗಿದೆ ಎಂದರು.

ಮಂಡ್ಯ, ಚಾಮರಾಜನಗರ, ಮೈಸೂರಿನಲ್ಲಿ ಪಕ್ಷ ಸಂಘಟಿಸಲಾಗುವುದು. ಈ ಭಾಗಗಳು ಸೇರಿದಂತೆ ರಾಜ್ಯದ ಎಲ್ಲಾ ಕ್ಷೇತ್ರಗಳಿಗೂ ಅಭ್ಯರ್ಥಿ ಹಾಕಲಾಗುವುದು ಎಂದರು. ಮಾ.4 ರಂದು ಆಮ್ ಆದ್ಮಿ ಪಕ್ಷದ ರಾಷ್ಟ್ರಾಧ್ಯಕ್ಷ ಅರವಿಂದ ಕೇಜ್ರಿವಾಲ್ ಕರ್ನಾಟಕಕ್ಕೆ ಭೇಟಿ ನೀಡಲಿದ್ದಾರೆ. ಅಂದು ದಾವಣಗೆರೆಯಲ್ಲಿ ಪಕ್ಷದ ಸಮಾವೇಶ ನಡೆಯಲಿದ್ದು, ಎಲ್ಲಾ ಬೂತ್ ಮಟ್ಟದ ಕಾರ್ಯಕರ್ತರಿಗೆ ಪ್ರತಿಜ್ಞಾವಿಧಿ ಬೋಧಿಸಲಿದ್ದಾರೆ. ಆದ್ದರಿಂದ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಆಪ್ ರಾಜ್ಯ ಉಪಾಧ್ಯಕ್ಷ ಚನ್ನಪ್ಪಗೌಡ, ಮಂಡ್ಯ ಟಿಕೆಟ್ ಆಕಾಂಕ್ಷಿ ವಕೀಲ ಬೂದನೂರು ಬೊಮ್ಮಯ್ಯ, ರಾಜ್ಯ ಕಾನೂನು ಘಟಕದ ಅಧ್ಯಕ್ಷ ನಂಜಪ್ಪ ಕಾಳೇಗೌಡ, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಶಿವಕುಮಾರ್, ರಾಜ್ಯ ಜಂಟಿ ಕಾರ್ಯದರ್ಶಿ ಮಹದೇವಪ್ಪ ಇದ್ದರು.

ವಿಜೃಂಭಣೆಯ ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವ

ಕೆ.ಆರ್.ಪೇಟೆ, ಫೆ.7– ತಾಲೂಕಿನ ಅಕ್ಕಿ ಹೆಬ್ಬಾಳು ಗ್ರಾಮದ ಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವಕ್ಕೆ ಸಚಿವ ಡಾ.ಕೆ.ಸಿ.ನಾರಾಯಣ ಗೌಡ, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಎ.ಆರ್.ರಘು, ಗ್ರಾಪಂ ಅಧ್ಯಕ್ಷೆ ನಾಗೇಶ್ವರಿ ಮತ್ತಿತರರು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಆಗಸದಲ್ಲಿ ಗರುಡ ಪಕ್ಷಿ ದೇವಾಲಯದ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ರಥೋತ್ಸವಕ್ಕೆ ಚಾಲನೆ ನೀಡುವ ಸಂಪ್ರದಾಯ ಹಿಂದಿನಿಂದಲೂ ಬಂದಿದೆ. ಅದರಂತೆ ಇಂದು ಕೂಡ



ಗರುಡ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ತೇರನ್ನು ಎಳೆದು ಗೋವಿಂದ ನಾಮಸ್ಮರಣೆ ಮಾಡಿ ದೇವರ ಕೃಪೆಗೆ ಪಾತ್ರರಾದರು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು

ಈ ವೇಳೆ ತಹಸೀಲ್ದಾರ್ ನಿಸರ್ಗ ಪ್ರಿಯ, ಅಕ್ಕಿಹೆಬ್ಬಾಳು ಗ್ರಾಪಂ ಅಧ್ಯಕ್ಷೆ ನಾಗೇಶ್ವರಿ, ಉಪಾಧ್ಯಕ್ಷ ಸತೀಶ್, ಪಿಡಿಓ ರವಿಕುಮಾರ್, ಸದಸ್ಯರಾದ ಅಣ್ಣಯ್ಯ, ಪ್ರಥಮ ದರ್ಜೆ ಗುತ್ತಿಗೆದಾರ ರಘು, ಮನ್‌ಮುಲ್ ಮಾಜಿ ನಿರ್ದೇಶಕ ಅಂಬರೀಶ್, ಜಿಪಂ ಮಾಜಿ ಸದಸ್ಯ ನಾಗೇಂದ್ರ ಕುಮಾರ್, ಪಿಡಿಓ ರವಿಕುಮಾರ್, ಸಚಿವರ ಆಪ್ತ ಸಹಾಯಕ ದಯಾನಂದ್, ಅತೀಕ್ ಅಹ್ಮದ್, ಪರಮೇಶ್ ಸೇರಿದಂತೆ ಸಾವಿರಾರು ಭಕ್ತರಿದ್ದರು.

ಪ್ರಸ್ತುತ ಕೇಂದ್ರ ಬಜೆಟ್ ಅಭಿವೃದ್ಧಿಗೆ ಪೂರಕ

ಮಂಡ್ಯ, ಫೆ.7– ಕೇಂದ್ರ ಬಿಜೆಪಿ ಸರ್ಕಾರ ಮಂಡಿಸಿರುವ ಬಜೆಟ್ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಬಿಜೆಪಿ ಮುಖಂಡ ಡಾ.ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಅನುದಾನ ಒದಗಿಸಲಾಗಿದೆ. ರೈಲ್ವೆ ಕ್ಷೇತ್ರಕ್ಕೂ ರಾಜ್ಯಕ್ಕೆ 7561 ಕೋಟಿ ರೂ. ನೀಡಲಾಗಿದೆ ಎಂದರು.

ಕೃಷಿ ಕ್ಷೇತ್ರ, ಜಲಜೀವನ್ ಮಿಷನ್ ಯೋಜನೆಗೆ ಆದ್ಯತೆ ನೀಡಲಾಗಿದೆ. ಕೌಶಲಾಭಿವೃದ್ಧಿಗೆ ಒತ್ತು ಕೊಡಬೇಕೆಂಬ ರಾಜ್ಯದ ಬೇಡಿಕೆಗೆ ಮನ್ನಣೆ ದೊರೆತಿದೆ ಎಂದು ನುಡಿದರು. ಮೆಟ್ರೋ 4ನೇ ಹಂತದ ಯೋಜನೆ ಬಿಡದಿ, ಮಾಗಡಿಗೆ ವಿಸ್ತರಣೆಯಾಗಲಿದೆ. ಕೃಷಿ ಸ್ಟಾರ್ಟಪ್‌ಗಳನ್ನು ಉತ್ತೇಜಿಸಲು ಕೃಷಿ ವೇಗವರ್ಧಕ ನಿಧಿ ಸ್ಥಾಪಿಸಲಾಗಿದೆ. ಉದ್ಯೋಗ ಸುಧಾರಣೆಗೆ 79000 ಕೋಟಿಗೆ ಅನುದಾನ ಹೆಚ್ಚಳ ಮಾಡಲಾಗಿದೆ. ಬಂಡವಾಳ ಹೂಡಿಕೆಯನ್ನು 10 ಲಕ್ಷ ಕೋಟಿಗೆ ಏರಿಕೆ ಮಾಡಲಾಗಿದೆ. ರಸಗೊಬ್ಬರ, ಆಹಾರ ಧಾನ್ಯ ಕ್ಷೇತ್ರಕ್ಕೆ 75000 ಕೋಟಿ ರೂ. ಒದಗಿಸಲಾಗಿದೆ. ಆದಾಯ ಮಿತಿಯನ್ನು 7 ಲಕ್ಷಕ್ಕೆ ಹೆಚ್ಚಿಸಲಾಗಿದ್ದು, ಇದರಿಂದ ಮಧ್ಯಮ ವರ್ಗದವರಿಗೆ ಅನುಕೂಲವಾಗಲಿದೆ. ಹೀಗೆ ಕೇಂದ್ರ ಬಜೆಟ್ ಅನ್ನು ಪ್ರತಿ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ಮಂಡಿಸಲಾಗಿದ್ದು ಈ ಬಜೆಟ್ ಪ್ರಗತಿಪರ, ಸರ್ವಸ್ಪರ್ಶಿ, ಸರ್ವವ್ಯಾಪಿ ಬಜೆಟ್ಟಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಂದಗಾಲು ಶಿವಣ್ಣ, ಅಶೋಕ್ ಜಯರಾಂ, ವಿವೇಕ್, ನಾಗಾನಂದ ಸಿ.ಟಿ.ಮಂಜುನಾಥ್ ಉಪಸ್ಥಿತರಿದ್ದರು.

ಪಕ್ಷಭೇದವಿಲ್ಲದೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ

ಭಾರತೀನಗರ, ಫೆ.7– ಪಕ್ಷಭೇದವಿಲ್ಲದೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.



ಇಲ್ಲಿನ ದೊಡ್ಡರಸಿನಕೆರೆ ಗ್ರಾಮದ ಮಾದುರಯ್ಯ ದೇವಸ್ಥಾನದ ಬಳಿ 10 ಲಕ್ಷ ರೂ. ವೆಚ್ಚದ ರಸ್ತೆ ಚರಂಡಿ ಅಭಿವೃದ್ಧಿ ಹಾಗೂ 26 ಲಕ್ಷ ರೂ. ವೆಚ್ಚದ ಗ್ರಂಥಾಲಯ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಜೆಡಿಎಸ್ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ, ಸ್ವಾಭಿಮಾನ ಬದಿಗೊತ್ತಿ ಭಿಕ್ಷೆ ಬೇಡಿ ಅನುದಾನ ತಂದು ಕ್ಷೇತ್ರದ ಜನರಿಗೆ ಅನುಕೂಲ ಕಲ್ಪಿಸುತ್ತಿರುವುದಾಗಿ ತಿಳಿಸಿದರು.

ತಮ್ಮದೇ ಸರ್ಕಾರ ಆಡಳಿತದಲ್ಲಿದ್ದರೆ ಸಾವಿರಾರು ಕೋಟಿ ಅನುದಾನ ಬಿಡುಗಡೆಯಾಗಿ ಕ್ಷೇತ್ರ ಸಮಗ್ರ ಅಭಿವೃದ್ಧಿಯಾಗಲಿದ್ದು ರೈತ ಸಮುದಾಯ ಇದನ್ನರಿತು ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಈಗಿನಿಂದಲೇ ಕಾರ್ಯ ಯೋಜನೆ ರೂಪಿಸಿ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಗ್ರಾಪಂ ಅಧ್ಯಕ್ಷೆ ಸಬೀನಾ, ಉಪಾಧ್ಯಕ್ಷೆ ಸೌಮ್ಯ, ಮಂಚೇಗೌಡ, ಡಿ.ಎಲ್.ಪ್ರದೀಪ್, ಚಿಕ್ಕಮುಚ್ಚೇಗೌಡ, ಆನಂದ, ಮಹೇಶ, ಸಂದೀಪ, ವಿನು ಸೇರಿದಂತೆ ಹಲವರಿದ್ದರು.

ನಾನು ವಂಶ ರಾಜಕಾರಣದ ವಿರೋಧಿ



ಮಂಡ್ಯ, ಫೆ.7– ರಾಜಕಾರಣಕ್ಕೆ ನಮ್ಮ ಕುಟುಂಬದಿಂದ ನಾನೇ ಮೊದಲಿಗ, ನಾನೇ ಕೊನೆ. ನನ್ನ ಪತ್ನಿ, ಮಕ್ಕಳು ಯಾರನ್ನೂ ರಾಜಕೀಯಕ್ಕೆ ತರುವುದಿಲ್ಲ ಎನ್ನುವ ಮೂಲಕ ಕುಟುಂಬ ರಾಜಕಾರಣದ ವಿರುದ್ಧ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ವಾಗ್ದಾಳಿ ನಡೆಸಿದರು.

ತಾಲೂಕಿನ ಕೊತ್ತತ್ತಿಯಲ್ಲಿ ಸೋಮವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ಬಿಜೆಪಿಗೆ ನೀಡುವ ಮತ ಎಂದಿಗೂ ವ್ಯರ್ಥವಾಗಲ್ಲ. ಅಭಿವೃದ್ಧಿ ಮೂಲಕ ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ. ಪ್ರಪಂಚವೇ ಒಪ್ಪಿದ ಮೋದಿ ಅವರ ನಾಯಕತ್ವದಲ್ಲಿ ದೇಶ ಸುಭದ್ರವಾಗಿದೆ. ಈ ಬಾರಿ ಬಿಜೆಪಿ ಬೆಂಬಲಿಸಿ, ಕುಟುಂಬ ರಾಜಕೀಯಕ್ಕೆ ಅಂತ್ಯ ಹಾಡಿ. ಈ ಬಾರಿ ನಿಮ್ಮ ಮನೆ ಮಗನಾದ ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಗ್ರಾಮಕ್ಕೆ ಭೇಟಿ ನೀಡಿದ ಸಚ್ಚಿದಾನಂದರನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು. ನೂರಾರು ಮಹಿಳೆಯರು ಪೂರ್ಣಕುಂಭ ಹೊತ್ತು ಸಚ್ಚಿದಾನಂದ ಅವರನ್ನು ಸ್ವಾಗತಿಸಿದರು. ಗ್ರಾಮದ ಹೆಬ್ಬಾಗಿಲಿನಿಂದ ರಾಮಮಂದಿರ ದೇವಾಲಯದ ವರೆಗೆ ತೆರೆದ ವಾಹನದಲ್ಲಿ ರ್‍ಯಾಲಿ ನಡೆಸಿ, ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿದ ಅವರು, ಮನೆ ಮನೆಗೆ ತೆರಳಿ ಬಿಜೆಪಿ ಸರ್ಕಾರದ ಸಾಧನೆಗಳನ್ನು ಒಳಗೊಂಡ ಕರಪತ್ರ ಹಂಚಿ, ಸ್ಟಿಕ್ಕರ್‌ಗಳನ್ನು ಗೋಡೆಗಳಿಗೆ ಅಂಟಿಸುವ ಮೂಲಕ ಜನರಿಗೆ ಸರ್ಕಾರದ ಸಾಧನೆಗಳನ್ನು ತಲುಪಿಸುವ ಕೆಲಸ ಮಾಡಿದರು.

ಡಿಕೆಶಿ ವಿರುದ್ಧ ಸಿಬಿಐ ದೂರು ನೀಡಲುದ್ದೇಶಿಸಿದ್ದ ರಮೇಶ್ ಜಾರಕಿಹೊಳಿ ಮೇಲೆ ಕಾಂಗ್ರೆಸ್ ದೂರು

ನವದೆಹಲಿ, ಫೆ.7– ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸೇರಿದಂತೆ ಬಿಜೆಪಿ ನಾಯಕರ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ನಾಯಕರ ನಿಯೋಗ ದೂರು ನೀಡಿದೆ. ಈ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದ ಬಿಜೆಪಿ ಪಾಳಯಕ್ಕೆ ಕೈ ನಾಯಕರು ಶಾಕ್ ನೀಡಿದ್ದಾರೆ. ಇಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ನೇತೃತ್ವದಲ್ಲಿ ಸಂಸದರ ತಂಡ ರಮೇಶ್ ಜಾರಕಿಹೊಳಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್‌ಕಟೀಲ್ ಹಾಗೂ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ವಿರುದ್ಧ ದೂರು ನೀಡಿದೆ. ಮಾಜಿ ಸಚಿವ ರಮೇಶ ಜಾರಕಿಹೊಳಿ ಆರು ಸಾವಿರಕ್ಕೆ ಒಂದರಂತೆ ಮತ ಖರೀದಿಸುವುದಾಗಿ ಬಹಿರಂಗ ಹೇಳಿಕೆ ನೀಡಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರಶ್ನೆ ಮಾಡುವಂತಿದೆ. ಜನರಿಗೆ ಹಣದ ಆಮಿಷ ಒಡ್ಡಿ ಕೋಟಿ ಕೋಟಿ ಹಣ ಖರ್ಚು ಮಾಡಿ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ಪ್ರಯತ್ನಿಸುತ್ತಿದೆ. ಈ ಹೇಳಿಕೆ ಹಿಂದೆ ವ್ಯವಸ್ಥಿತ ಷಡ್ಯಂತ್ರವಿದ್ದು, ಈ ಬಗ್ಗೆ ತನಿಖೆ ಮಾಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಚುನಾವಣಾ ಆಯೋಗಕ್ಕೆ ದೂರು ನೀಡಿದ ಬಳಿಕ ಮಾತನಾಡಿದ ರಣದೀಪ್ ಸುರ್ಜೇವಾಲ, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಆರು ಸಾವಿರ ರೂಪಾಯಿಗೆ ಒಂದರಂತೆ ಎಲ್ಲ ಮತಗಳನ್ನು ಕೊಳ್ಳುತ್ತಿದೆ. ಇದರಲ್ಲಿ ಸಿಎಂ ಬಸವರಾಜ ಬೊಮ್ಮಾಯಿ, ರಮೇಶ ಜಾರಕಿಹೊಳಿ, ಜೆ.ಪಿ.ನಡ್ಡಾ ಹಾಗೂ ನಳಿನ್ ಕುಮಾರ್ ಕಟೀಲ್ ಪಿತೂರಿ ಇದೆ. ಹೀಗಾಗಿ ಈ ಬಗ್ಗೆ ಪೂರ್ತಿ ತನಿಖೆ ಮಾಡಲು ಒತ್ತಾಯ ಮಾಡಿದ್ದೇವೆ ಎಂದರು.

ಮತದಾರರ ಪಟ್ಟಿಯಿಂದ ಬಿಜೆಪಿ ವಿರುದ್ಧ ಮತದಾರರ ಹೆಸರು ಡಿಲಿಟ್ ಮಾಡಿರುವ ಚಿಲುಮೆ ಪ್ರಕರಣದ ಬಗ್ಗೆ ಮಾತನಾಡಿ, ಶಿವಾಜಿನಗರದಲ್ಲಿ 9 ಸಾವಿರ ಮತದಾರರ ಹೆಸರು ಡಿಲಿಟ್ ಮಾಡಲಾಗಿದೆ. ಉದ್ದೇಶಪೂರ್ವಕವಾಗಿ ಡಿಲಿಟ್ ಮಾಡಲಾಗಿದೆ. ಅಲ್ಪಸಂಖ್ಯಾತರು, ಎಸ್ಸಿ, ಎಸ್ಟಿ ಹಾಗೂ ಹಿಂದುಳಿದವರ ಹೆಸರನ್ನು ಡಿಲಿಟ್ ಮಾಡಲಾಗಿದೆ. ಈ ಬಗ್ಗೆ ಸಹ ದೂರು ನೀಡಿದ್ದು, ತನಿಖೆಗೆ ಮತ್ತೆ ಒತ್ತಾಯಿಸಿದೆ ತಿಳಿಸಿದರು.

ಬಳಿಕ ಮಾತನಾಡಿದ ಸಂಸದ ಹನುಮಂತಯ್ಯ, ಐದು ಕೋಟಿಗೆ ಮತಗಳನ್ನು ಕೊಳ್ಳುತ್ತೇವೆ ಎನ್ನುವ ಹೇಳಿಕೆ ಬಿಜೆಪಿಯ ನಿರ್ಲಜ್ಜ ಸ್ಥಿತಿ ತಲುಪಿರುವುದನ್ನು ತೋರಿಸುತ್ತದೆ. ಮತ ಕೊಳ್ಳುವ ಹೇಳಿಕೆ ಬಗ್ಗೆ ತನಿಖೆ ಮಾಡಬೇಕು ಅನ್ನೋದು ನಮ್ಮ ಆಗ್ರಹ. ಜೊತೆಗೆ ಶಿವಾಜಿನಗರದಲ್ಲಿ ಸಾವಿರ ಮತದಾರರ ಹೆಸರು ತೆಗೆದಿರುವ ಬಗ್ಗೆಯೂ ತನಿಖೆಗೆ ಮನವಿ ಮಾಡಿದೆ ಎಂದು ಹೇಳಿದರು.

ಜೆಡಿಎಸ್ ಅಭ್ಯರ್ಥಿ ಗೆಲ್ಲದಿದ್ದರೆ ರಾಜಕೀಯ ನಿವೃತ್ತಿ

ಕೆಂಗೇರಿ, ಫೆ.7– ಯಶವಂತಪುರ ಕ್ಷೇತ್ರದಿಂದ ಪಕ್ಷದ ಜೆಡಿಎಸ್ ಅಭ್ಯರ್ಥಿ ಗೆಲ್ಲಲು ವಿಫಲವಾದಲ್ಲಿ ರಾಜಕೀಯದಿಂದ ನಿವೃತ್ತಿ ಪಡೆಯುವೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಘೋಷಿಸಿದ್ದಾರೆ. ಯಶವಂತಪುರ ಕಾರ್ಯಕರ್ತರ ಸಭೆಯಲ್ಲಿ ಜವರಾಯಿಗೌಡ ಅವರನ್ನು ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಿಸಿ ಅವರು ಮಾತನಾಡಿದ ಅವರು, ಕಳೆದ ಮೂರು ಚುನಾವಣೆಗಳಲ್ಲಿ ಜವರಾಯಿಗೌಡ ಕಡಿಮೆ ಅಂತರದಲ್ಲಿ ಸೋತಿದ್ದಾರೆ. ಕ್ಷೇತ್ರದ ಮತದಾರರ ಅನುಕಂಪ ಅವರ ಮೇಲಿದೆ. ಈ ಬಾರಿ ಜನರು ಅವರನ್ನು ಕೈ ಹಿಡಿಯಲಿದ್ದಾರೆ. ವೈಯಕ್ತಿಕವಾಗಿ ಬೆಂಬಲ ನೀಡುವ ಅವರನ್ನು ಜಯಶೀಲರನ್ನಾಗಿ ಮಾಡಿಯೇ ತೀರುವೆ ಎಂದು ಹೇಳಿದರು.



ಒಂದನೇ ಪುಟದಿಂದ

ಅಂತಿಮ ಹಂತದ ಕಾಮಗಾರಿ ತ್ವರಿತ

ಈ ಸಮಸ್ಯೆಯನ್ನು ಅರಿತ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಯೋಜನೆಯ ಮೂಲ ವಿನ್ಯಾಸಕ್ಕೆ ಕೆಲ ಮಾರ್ಪಾಡು ಮಾಡಿ, ಸಾರ್ವಜನಿಕರ ಅನುಕೂಲಕ್ಕಾಗಿ ನಾಲೆಗೆ ತಡೆಗೋಡೆ ನಿರ್ಮಿಸುವ ಕೆಲಸ ವೇಗವಾಗಿ ನಡೆಯುತ್ತಿದೆ. ಅದರಿಂದಾಗಿ ಯಾವುದೇ ಅಡೆತಡೆ ಇಲ್ಲದೆ ಕಾಲುವೆ ನೀರು ಸರಾಗವಾಗಿ ಹರಿದು ಹೋಗಲಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. 6 ಎಕ್ಸ್‌ಪ್ರೆಸ್ ಮೇನ್ ಕಾರಿಡಾರ್ ಮತ್ತು 4 ಸರ್ವೀಸ್ ರೋಡ್ ಹೊಂದಿರುವ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಮಾರ್ಗ ಮಧ್ಯೆ ಹಲವು ಕಡೆಗಳಲ್ಲಿ ಬರುವ ಅಂಡರ್ ಬ್ರಿಡ್ಜ್, ಓವರ್ ಫ್ಲೈ, ಮೇಲ್ಸೆತುವೆ, ಆಗಮನ, ನಿರ್ಗಮನ ಸ್ಥಳಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಮೂಲ ವಿನ್ಯಾಸವನ್ನು ಬದಲಾಯಿಸಿ ಕಾಮಗಾರಿಗಳನ್ನು ಮಾಡುವುದು ಅನಿವಾರ್ಯವಾಗಿದೆ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ. ಅದೇ ರೀತಿ ಸಿದ್ದಲಿಂಗಪುರ ಬಳಿ ಇದ್ದ ಹಳೇ ಬ್ರಿಡ್ಜ್ ಅನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಾಣ ಮಾಡುವ ಕೆಲಸವೂ ವೇಗವಾಗಿ ನಡೆಯುತ್ತಿದ್ದು, 20 ದಿನದೊಳಗಾಗಿ ಕಾಮಗಾರಿ ಮುಗಿಸಿ ರಸ್ತೆ ಉದ್ಘಾಟನೆಗೆ ಅನುವು ಮಾಡಿಕೊಡಲಾಗುವುದು ಎಂದು ಹೆದ್ದಾರಿ ಅಧಿಕಾರಿಗಳು ತಿಳಿಸಿದ್ದಾರೆ.

10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ಮೈಸೂರು, ಫೆ. 7 – ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ನಿವೃತ್ತ ಐಜಿಪಿ ಓಂ ಪ್ರಕಾಶ್ ಆಗಮಿಸಿದ್ದರು. ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದರು. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಿಮ್ಮ ಜ್ಞಾನ, ಕೌಶಲ, ಪ್ರತಿಭೆ ಮತ್ತು ಅದೃಷ್ಟಗಳೊಂದಿಗೆ ಶ್ರಮವಹಿಸಿ ನೀವು ಸ್ಪರ್ಧಿಸಬೇಕು. ನೀವು ಆರಿಸಿಕೊಂಡ ದಾರಿ ಯಾವುದೇ ಇರಲಿ, ನೀವು ಅತ್ಯುತ್ಕೃಷ್ಟರಾಗಿರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಶಾಲೆಯ ಅಧ್ಯಕ್ಷ ಟಿ. ಬಾಬು ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲಿ ಹೋದರು ನಿಮ್ಮ ಜೀವನದಲ್ಲಿ ಮೌಲ್ಯವನ್ನು ಕಾಪಾಡಿಕೊಳ್ಳಿ ಎಂದು ಹೇಳಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವಿ.ಆರ್. ಶಶಿಕಲಾ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಸರಸ್ವತಿ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಬಾರಿ ಬೀಳ್ಕೊಡುಗೆ ಸಮಾರಂಭದಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿಗಳ ಪೋಷಕರೂ ಕೂಡ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಶಾಲೆಯ ಎಲ್ಲಾ ಶಿಕ್ಷಕರೂ–ಶಿಕ್ಷಕೇತರ ಸಿಬ್ಬಂದಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಗುಂಡ್ಲುಪೇಟೆ: ಕೊಳೆತ ಸ್ಥಿತಿಯಲ್ಲಿ ಹುಲಿ ಕಳೇಬರ ಪತ್ತೆ

ಗುಂಡ್ಲುಪೇಟೆ, ಫೆ.7– ತಾಲೂಕಿನ ಬಂಡೀಪುರ ಅಭಯಾರಣ್ಯದ ಕುಂದಕೆರೆ ವಲಯ ವ್ಯಾಪ್ತಿಯ ಚೌಡಹಳ್ಳಿ ಹೊರವಲಯದ ಮಲ್ಲಯ್ಯನಕಟ್ಟೆ ಕೆರೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಹುಲಿ ಕಳೇಬರ ಪತ್ತೆಯಾಗಿದೆ.



ಹುಲಿ ಕಳೆದ ಮೂರ್ನಾಲ್ಕು ದಿನಗಳ ಹಿಂದೆ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದ್ದು, ಸಾವಿಗೆ ಇನ್ನೂ ಕೂಡ ನಿಖರ ಕಾರಣ ತಿಳಿದು ಬಂದಿಲ್ಲ. ಕೆರೆಯಲ್ಲಿ ದನಗಳಿಗೆ ನೀರು ಕುಡಿಸಲು ರೈತರೊಬ್ಬರು ಹೋದಾಗ ಮೃತದೇಹ ಕೆರೆಯಲ್ಲಿ ತೇಲುತ್ತಿರುವುದು ಕಂಡು ಬಂದಿದೆ. ನಂತರ ರೈತರು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಹಾಯಕ ಅರಣ್ಯಾಧಿಕಾರಿ ರವೀಂದ್ರ, ಆರ್‌ಎಫ್‌ಓ ಶ್ರೀನಿವಾಸ್ ಹಾಗೂ ತಂಡದವರು ಪರಿಶೀಲಿಸಿದರು.

ಅರಣ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ರೈತರು: ಚೌಡಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹುಲಿ, ಚಿರತೆ, ಕಾಡಾನೆಗಳು ನಿರಂತರವಾಗಿ ಜಾನುವಾರು ಹಾಗೂ ರೈತರ ಫಸಲಿನ ಮೇಲೆ ದಾಳಿ ನಡೆಸಿ ನಾಶಗೊಳಿಸಿದ್ದವು. ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ರೈತರು ಹಲವು ಬಾರಿ ದೂರು ನೀಡಿದ್ದರೂ ಅಧಿಕಾರಿಗಳು ಕ್ರಮಕ್ಕೆ ಮುಂದಾಗಿರಲಿಲ್ಲ. ಆದರೆ ಇದೀಗ ಕೆರೆಯಲ್ಲಿ ಹುಲಿ ಮೃತದೇಹ ಪತ್ತೆಯಾಗಿರುವ ಕಾರಣ ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳನ್ನು ರೈತರು ತರಾಟೆಗೆ ತೆಗೆದುಕೊಂಡು, ಆಕ್ರೋಶ ಹೊರಹಾಕಿದರು.

ಹಿಂದೂ ಆದ ಮೇಲೆ ಹಿಂದುತ್ವ ತಾನಾಗಿ ಬರುತ್ತೆ

ಮಂತ್ರಾಲಯ ಶ್ರೀಗಳಿಂದ ಸಿದ್ದರಾಮಯ್ಯರಿಗೆ ಪಾಠ

ಬಾಗಲಕೋಟೆ, ಫೆ.7– ನಾನು ಹಿಂದು ಆದರೆ ಹಿಂದುತ್ವವನ್ನು ಒಪ್ಪುವುದಿಲ್ಲ ಎಂದು ಹೇಳಿಕೆ ನೀಡಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಮಂತ್ರಾಲಯ ಮಠದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿಗಳು ತಿರುಗೇಟು ನೀಡಿದ್ದಾರೆ.



ಹಿಂದು ಅಂದ ಮೇಲೆ ಹಿಂದುತ್ವವನ್ನು ಗೌರವಿಸಲೇಬೇಕು. ಹಿಂದುಗಳಲ್ಲಿ ಇರುವಂತಹದ್ದು ಹಿಂದುತ್ವ ಹೀಗಾಗಿ ಹಿಂದೂಗಳೆಲ್ಲರೂ ಹಿಂದುತ್ವವನ್ನು ಗೌರವಿಸಲೇಬೇಕು ಎಂದು ಹೇಳಿರುವ ಮಂತ್ರಾಲಯ ಶ್ರೀಗಳು, ತಾಯಿ ಅಂದ ಮೇಲೆ ಅವಳಿಗೆ ನೀವು ಸಂತಾನ ಅಂತ ಆಯ್ತಲ್ಲ ಎಂದು ಸಿದ್ದರಾಮಯ್ಯಗೆ ತೀಕ್ಷ್ಣವಾಗಿ ಹೇಳಿದ್ದಾರೆ.

ನಾವು ಹಿಂದು ಎಂದ ಮೇಲೆ ಹಿಂದುತ್ವವನ್ನು ಗೌರವಿಸಲೇಬೇಕು. ಒಂದೇ ಕಡೆ ನನ್ನ ತಾಯಿ ಅನ್ನೋದು, ಅವಳು ನಿಸ್ಸಂತಾನ ಉಳ್ಳುವಳು ಅನ್ನೋದು ಎಷ್ಟು ಅಪಹಾಸ್ಯ. ತಾಯಿ ಅಂದಮೇಲೆ ಅವಳಿಗೆ ಸಂತಾನ ನೀನು ಅಂತಾ ಆಯಿತಲ್ಲಾ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಸಿದ್ದರಾಮಯ್ಯ ಅವರ ದ್ವಂದ್ವ ಹೇಳಿಕೆಯಲ್ಲಿ ಅರ್ಥವಿಲ್ಲ. ಹಿಂದುತ್ವ ವಿಚಾರದಲ್ಲಿ ಅವರಿಗೆ ಸ್ವಲ್ಪ ಭೇದ ಇರಬಹುದು. ಅದನ್ನು ವಿಚಾರ ವಿನಿಮಯ ಮಾಡಿಕೊಂಡು ಪರಿಹರಿಸಿಕೊಳ್ಳುವುದು ಉತ್ತಮ. ಹಿಂದು ಎಂದು ಹೇಳಿಕೊಳ್ಳುತ್ತಾ ಹಿಂದುತ್ವ ವಿರೋಧಿಸುತ್ತೇನೆ ಎನ್ನುವುದು ಅರ್ಥಹೀನ ಎಂದು ಸ್ವಾಮೀಜಿ ಹೇಳಿದ್ದಾರೆ.

ಟರ್ಕಿ, ಸಿರಿಯಾ ಭೂಕಂಪ: ಸಾವಿನ ಸಂಖ್ಯೆ 6 ಸಾವಿರಕ್ಕೆ ಏರಿಕೆ

15 ಸಾವಿರ ಮಂದಿಗೆ ಗಾಯ; 4,900 ಕಟ್ಟಡಗಳು ಧ್ವಂಸ

ಇಸ್ತಾಂಬುಲ್, ಫೆ.7– ಪ್ರಾಕೃತಿಕ ವಿಕೋಪಕ್ಕೆ ಟರ್ಕಿ, ಸಿರಿಯಾ ದೇಶಗಳಲ್ಲಿ ಅಲ್ಲೋಲ–ಕಲ್ಲೋಲ ಸೃಷ್ಟಿಯಾಗಿದೆ. ಒಂದೇ ದಿನ 2 ದೇಶಗಳಲ್ಲಿ 3 ಬಾರಿ ಪ್ರಬಲ ಭೂಕಂಪ ಸಂಭವಿಸಿದ್ದು, ಸಾವಿನ ಸಂಖ್ಯೆ 6 ಸಾವಿರಕ್ಕೆ ಏರಿಕೆಯಾಗಿದೆ. ಸುಮಾರು 15 ಸಾವಿರ ಮಂದಿ ಗಾಯಗೊಂಡಿದ್ದಾರೆ. 4,900 ಕಟ್ಟಡಗಳು ಸಂಪೂರ್ಣ ನೆಲಸಮಗೊಂಡಿವೆ.



ಟರ್ಕಿಯಲ್ಲಿ ಸೋಮವಾರ ನಸುಕಿನ ಜಾವದಲ್ಲಿ 7.8 ತೀವ್ರತೆಯ ಭೂಕಂಪ ಸಂಭವಿಸಿದೆ. ಈ ಬೆನ್ನಲ್ಲೇ ಮತ್ತೆರಡು ಬಾರಿ ಭೂಕಂಪ ಸಂಭವಿಸಿದ್ದು, ಕಳೆದ 24 ಗಂಟೆಯಲ್ಲಿ ಸರಿಸುಮಾರು 2,600 ಮಂದಿ ಬಲಿಯಾಗಿದ್ದರು. 8 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಇದೀಗ ಸಾವಿನ ಸಂಖ್ಯೆ ಹಾಗೂ ಗಾಯಗೊಂಡ ಸಂತ್ರಸ್ತರ ಸಂಖ್ಯೆ ಏರುತ್ತಲೇ ಇದೆ ಎಂದು ಮೂಲಗಳು ತಿಳಿಸಿವೆ.



ಟರ್ಕಿಯಲ್ಲಿ 1939ರಲ್ಲಿ 7.8 ತೀವ್ರತೆಯ ಭೂಕಂಪ ಕಾಣಿಸಿಕೊಂಡಿತ್ತು. ಆಗ ಪೂರ್ವ ಎರ್ಜಿಂಕನ್ ಪ್ರಾಂತ್ಯದಲ್ಲಿ ಸುಮಾರು 33 ಸಾವಿರ ಮಂದಿ ದಾರುಣವಾಗಿ ಸಾವಿಗೀಡಾಗಿದ್ದರು. ಎರ್ಜಿಂಕನ್ ಬಯಲು ಮತ್ತು ಕೆಲ್ಕಿಟ್ ನದಿ ಕಣಿವೆಯಲ್ಲಿ ತೀವ್ರ ಹಾನಿಯನ್ನುಂಟುಮಾಡಿತ್ತು. 360 ಕಿಮೀನಷ್ಟು ಭೂಪ್ರದೇಶವನ್ನು ಛಿದ್ರ–ಛಿದ್ರಗೊಳಿಸಿತ್ತು. ಈ ಬಗ್ಗೆ 2003ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯ ಅಧ್ಯಯನ ಮಾಡಿತ್ತು. ಆ ನಂತರ ಸಂಭವಿಸಿದ ಅತಿದೊಡ್ಡ ದುರಂತ ಇದಾಗಿದೆ ಎಂದು ತಿಳಿದು ಬಂದಿದೆ.

ದಕ್ಷಿಣ ಟರ್ಕಿ, ಉತ್ತರ ಸಿರಿಯಾ, ಲೆಬನಾನ್, ಇಸ್ರೇಲ್‌ನಲ್ಲೂ ತೀವ್ರ ಕಂಪನ ಉಂಟಾಗಿದೆ. ಟರ್ಕಿಯ ದಿಯರ್‌ಬಕರ್, ಸಿರಿಯಾದ ಅಲೆಪ್ಪೋ, ಹುಮಾನಗರಗಳಲ್ಲಿ ಸಾವಿರಾರು ಕಟ್ಟಡ ನೆಲಸಮವಾಗಿವೆ. 7.8 ರಷ್ಟು ತೀವ್ರತೆಯ ಭೂಕಂಪದ ಬಳಿಕ ಗಂಟೆಗಳ ಅವಧಿಯಲ್ಲಿ 20ಕ್ಕೂ ಹೆಚ್ಚು ಬಾರಿ ಭೂಮಿ ಕಂಪಿಸಿದ್ದು, ಹೆಚ್ಚು ಸಾವು ನೋವಿಗೆ ಕಾರಣವಾಗಿದೆ. ಭೂಕಂಪ ಪೀಡಿತ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗಿದೆ.

45 ದೇಶಗಳಿಂದ ನೆರವು: ಈಗಾಗಲೇ ಟರ್ಕಿ, ಸಿರಿಯಾಗೆ ವಿಶ್ವದ 45 ರಾಷ್ಟ್ರಗಳು ನೆರವು ಘೋಷಣೆ ಮಾಡಿವೆ. ಭಾರತ ಸಹ ಎನ್‌ಡಿಆರ್‌ಎಫ್ ಮೊದಲ ತಂಡವನ್ನು ಕಳಿಸಿಕೊಟ್ಟಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಕೃತಿಗಳ ಆಹ್ವಾನ

ಮೈಸೂರು, ಫೆ. 7– ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ಉತ್ತಮ ಕೃತಿಗಳಿಗೆ 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಯನ್ನು 1983 ರಿಂದ ಪ್ರತಿವರ್ಷ ನೀಡಲಾಗುತ್ತಿದೆ. ಪ್ರಶಸ್ತಿ ಪುರಸ್ಕೃತರಿಗೆ 25,000 ರೂ.ಗಳ ಪ್ರಶಸ್ತಿ ಧನ, ಸ್ವಸ್ತಿವಾಚನ ಹಾಗೂ ಪ್ರಶಸ್ತಿ ಫಲಕವನ್ನು ನೀಡಿ ಪುರಸ್ಕರಿಸಲಾಗುತ್ತಿದೆ.

ವೀರಶೈವ, ಲಿಂಗಾಯತ ಧರ್ಮ, ಸಾಹಿತ್ಯ ಇತಿಹಾಸ, ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ 2022ನೇ ಸಾಲಿನಲ್ಲಿ ಪ್ರಕಟವಾಗಿರುವ ಕೃತಿಗಳನ್ನು 'ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ'ಗೆ ಆಹ್ವಾನಿಸಲಾಗಿದೆ.


ಕೃತಿಗಳನ್ನು ಲೇಖಕರು ಹಾಗೂ ಪ್ರಕಾಶಕರು ಪ್ರಶಸ್ತಿ ಸಮಿತಿ ಅವಗಾಹನೆಗಾಗಿ 'ನಿರ್ದೇಶಕರು, ಪ್ರಕಟಣಾ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004' ವಿಳಾಸಕ್ಕೆ 31 ಮಾರ್ಚ್ 2023ರ ಒಳಗಾಗಿ ಕಳುಹಿಸಲು ಕೋರಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿರುವ ಸಾಹಿತ್ಯಾಸಕ್ತರು ಕೂಡ ಕೃತಿಗಳ ವಿವರಗಳನ್ನು ಸಂಪೂರ್ಣ ವಿಳಾಸ ಹಾಗೂ ಮಾಹಿತಿಯೊಂದಿಗೆ ಕಳುಹಿಸಬಹುದಾಗಿದೆ.

ದೀಪಾಶ್ರೀಗೆ ಮೊದಲ ರ್‍ಯಾಂಕ್

ಮೈಸೂರು: ನಂಜನಗೂಡು ತಾಲೂಕಿನ ಬಂಚಹಳ್ಳಿ ಹುಂಡಿ ಗ್ರಾಮದ ರಂಗಸ್ವಾಮಿ ಅವರ ಪುತ್ರಿ ದೀಪಾಶ್ರೀ ಆರ್. ವಿಶೇಷ ಡಿಎಡ್ (ಹೆಚ್‌ಐ) ಪರೀಕ್ಷೆಯಲ್ಲಿ ಮೊದಲನೇ ರ್‍ಯಾಂಕ್ ಪಡೆದಿದ್ದಾಳೆ.



15 ದಿನಗಳಲ್ಲಿ ಕರಿಕೆ–ಭಾಗಮಂಡಲ ರಸ್ತೆ ಅಭಿವೃದ್ಧಿಪಡಿಸದಿದ್ದರೆ ಪ್ರತಿಭಟನೆ



ಮಡಿಕೇರಿ, ಫೆ.7– ಕರಿಕೆ–ಭಾಗಮಂಡಲ ರಸ್ತೆಯನ್ನು ತಕ್ಷಣ ಅಭಿವೃದ್ಧಿ ಪಡಿಸಬೇಕು ಮತ್ತು ಮಳೆಗಾಲದಲ್ಲಿ ಬಿದ್ದಿರುವ ಮಣ್ಣಿನ ರಾಶಿಯನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿ ಕಾಂಗ್ರೆಸ್ ಪಕ್ಷದ ಪ್ರಮುಖರು ಜಿಲ್ಲಾಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆ ಅಭಿಯಂತರರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಮುಂದಿನ 15 ದಿನಗಳೊಳಗೆ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡದಿದ್ದಲ್ಲಿ ಕರಿಕೆ ಗ್ರಾಮಸ್ಥರ ಸಹಕಾರದೊಂದಿಗೆ ಕಾಂಗ್ರೆಸ್ ಪಕ್ಷ ಪ್ರತಿಭಟನೆ ನಡೆಸಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮನವಿ ಸಲ್ಲಿಸಿ ಮಾತನಾಡಿದ ಕರಿಕೆ ಗ್ರಾಪಂ ಉಪಾಧ್ಯಕ್ಷ ಎನ್.ಬಾಲಚಂದ್ರ ನಾಯರ್ ಕರಿಕೆ ಗ್ರಾಮದ ಮುಖ್ಯ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಕೊಡಗಿನ ಗಡಿಭಾಗದ ರಸ್ತೆಯ ಅಭಿವೃದ್ಧಿಯನ್ನೇ ಸರ್ಕಾರ ಮರೆತಿದೆ ಎಂದು ಆರೋಪಿಸಿದರು.

ಕರಿಕೆ ಗ್ರಾಮವು ಜಿಲ್ಲಾ ಕೇಂದ್ರವಾದ ಮಡಿಕೇರಿಯಿಂದ ಕೇವಲ 68 ಕಿ.ಮೀ. ದೂರದಲ್ಲಿದೆ. ನೆರೆಯ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಗೆ ಹೊಂದಿಕೊಂಡಿದೆ. ಪುಣ್ಯಕ್ಷೇತ್ರಗಳಾದ ತಲಕಾವೇರಿ ಮತ್ತು ಎಮ್ಮೆಮಾಡುವಿಗೆ ತೆರಳಲು ಇದೇ ರಸ್ತೆಯನ್ನು ಅವಲಂಬಿಸಬೇಕಾಗಿದೆ. ಅಂತರ ರಾಜ್ಯ ವ್ಯಾಪಾರ, ವಹಿವಾಟು, ಸರಕು ಸಾಗಾಣಿಕೆಗೂ ಇದು ಸಹಕಾರಿಯಾಗಿದೆ. ಆದರೆ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯನ್ನು ಅಭಿವೃದ್ಧಿ ಪಡಿಸದೆ ಕಡೆಗಣಿಸಲಾಗಿದೆ. ವಾಹನ ಚಾಲಕರು ಮಾತ್ರವಲ್ಲದೆ ಪಾದಚಾರಿಗಳು ಕೂಡ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಗ್ರಾಮಸ್ಥರು ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಲೋಕೋಪಯೋಗಿ ಇಲಾಖೆ ಎದುರು ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ ಎಂದರು.

ಕೆಪಿಸಿಸಿ ಸದಸ್ಯ ಬಿ.ಎಸ್.ರಮಾನಾಥ್ ಮಾತನಾಡಿ, ಪಂಚಾಯಿತಿ ವ್ಯಾಪ್ತಿಯ ಸುಮಾರು 10 ಕಿ.ಮೀ ನಷ್ಟು ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಇದರಿಂದ ಗ್ರಾಮಸ್ಥರ ನಿತ್ಯ ಸಂಚಾರಕ್ಕೆ ತೊಂದರೆಯಾಗಿದೆ. ಶಾಲಾ ಮಕ್ಕಳು ಹಾಗೂ ನಿತ್ಯ ಕೆಲಸಕ್ಕೆ ಹೋಗುವ ಕೂಲಿ ಕಾರ್ಮಿಕರು ಗುಂಡಿ ಬಿದ್ದ ರಸ್ತೆಯ ಮೂಲಕವೇ ಕಷ್ಟಪಟ್ಟು ತೆರಳಬೇಕಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಮಳೆಗಾಲದಲ್ಲಿ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಮಣ್ಣಿನ ರಾಶಿಯನ್ನು ಇಲ್ಲಿಯವರೆಗೆ ತೆರವುಗೊಳಿಸಿಲ್ಲ. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ. ರಸ್ತೆ ಅಭಿವೃದ್ಧಿಯನ್ನು ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ನಿರ್ಲಕ್ಷಿಸಿರುವುದರಿಂದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಎಚ್ಚರಿಸಲು ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ ಎಂದರು.

ಕರಿಕೆ ವಲಯ ಕಾಂಗ್ರೆಸ್ ಅಧ್ಯಕ್ಷ ಬಿ.ಡಿ. ದೇವರಾಜ್ ಮಾತನಾಡಿ, ನೆರೆಯ ಕೇರಳ ರಾಜ್ಯದಲ್ಲಿ ಉತ್ತಮ ರಸ್ತೆಗಳನ್ನು ಅಲ್ಲಿನ ಸರ್ಕಾರ ನಿರ್ಮಿಸಿದೆ. ಆದರೆ ಕರ್ನಾಟಕ ರಾಜ್ಯ ಸರ್ಕಾರ ಮಾತ್ರ ರಸ್ತೆ ಅಭಿವೃದ್ಧಿ ಮಾಡದೆ ಕೊಡಗು ಜಿಲ್ಲೆ ಹಾಗೂ ರಾಜ್ಯಕ್ಕೂ ಕಳಂಕ ತಂದಿದೆ. 2004 ರಿಂದ ಕರಿಕೆ–ಭಾಗಮಂಡಲ ರಸ್ತೆಯ ವಿಸ್ತರಣೆ ಕಾರ್ಯವೇ ನಡೆದಿಲ್ಲ. ರಸ್ತೆ ಮಾತ್ರವಲ್ಲದೆ ಸರ್ಕಾರದ ಮೂಲಭೂತ ಸೌಲಭ್ಯದ ಕೊರತೆಯಿಂದಲೂ ಕರಿಕೆ ಜನರು ಪರದಾಡುತ್ತಿದ್ದಾರೆ. ಸಾಕಷ್ಟು ಬಾರಿ ಜಿಲ್ಲೆಯ ಶಾಸಕರಿಗೆ, ಸಂಸದರಿಗೆ ಸಮಸ್ಯೆಗಳ ಬಗ್ಗೆ ತಿಳಿಸಲಾಗಿದೆ. ಆದರೆ ಯಾವುದೇ ಸ್ಪಂದನೆ ದೊರೆತ್ತಿಲ್ಲ ಎಂದು ಟೀಕಿಸಿದರು.

ರಾಷ್ಟ್ರೀಯ ಹೆದ್ದಾರಿ ಕನಸು: 2017ರಲ್ಲಿ ಕೇರಳದ ಕಾಂಞ್ಞಂಗಾಡುವಿನಿಂದ ಮಡಿಕೇರಿಯ ಕಾಟಕೇರಿ ತನಕ 110 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಯ ರಸ್ತೆ ಅಭಿವೃದ್ಧಿ ನಿಗಮದಿಂದ ಸರ್ವೆಗೆ ಆದೇಶ ನೀಡಲಾಗಿತ್ತು. ಈ ಬಗ್ಗೆ ಕೇರಳ ರಾಜ್ಯದ ಗಡಿ ಭಾಗದವರೆಗೆ ಸರ್ವೆಯಾಗಿದೆ. ಆದರೆ ಕರ್ನಾಟಕದಲ್ಲಿ ಸರ್ವೆ ಕಾರ್ಯ ನಡೆದಿಲ್ಲ. ರಾಷ್ಟ್ರೀಯ ಹೆದ್ದಾರಿ ಎನ್ನುವುದು ಕನಸಾಗಿಯೇ ಉಳಿದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಲಜೀವನ್ ಮಿಷನ್ ಯೋಜನೆಯಲ್ಲಿ ಅಸಮರ್ಪಕ ಕಾಮಗಾರಿ

ಜಿಪಂ ಇಂಜಿನಿಯರಿಂಗ್ ವಿಭಾಗಕ್ಕೆ ಮುತ್ತಿಗೆ, ಪ್ರತಿಭಟನೆ



ಮಡಿಕೇರಿ, ಫೆ.7– ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿರುವ ಜಲಜೀವನ್ ಮಿಷನ್ ಯೋಜನೆಯಡಿ ಶಾಂತಳ್ಳಿ ಗ್ರಾಮ ಪಂಚಾಯಿತಿಯ ಅನೇಕ ಗ್ರಾಮಗಳು ಸೇರಿದಂತೆ ಗೌಡಳ್ಳಿ ಗ್ರಾಮ ಪಂಚಾಯಿತಿಯ ಶುಂಠಿ ಗ್ರಾಮದಲ್ಲಿ ಅಸಮರ್ಪಕ ಕಾಮಗಾರಿ ನಡೆಸಲಾಗಿದ್ದು, ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಸೋಮವಾರಪೇಟೆ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಶಾಂತಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರಗ ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಪೈಪ್‌ಲೈನ್ ಅಳವಡಿಸಿ 2 ವರ್ಷ ಕಳೆದರೂ ಈವರೆಗೆ ನೀರಿನ ವ್ಯವಸ್ಥೆಯಾಗಿಲ್ಲ. ಲಕ್ಷಾಂತರ ರೂಪಾಯಿ ವೆಚ್ಚದ ಕಾಮಗಾರಿಯಲ್ಲಿ ಅವ್ಯವಹಾರವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ತಲ್ತರೆಶೆಟ್ಟಳ್ಳಿಯ ಉದ್ದಳ್ಳಿಯಲ್ಲೂ ಇದೇ ಪರಿಸ್ಥಿತಿ ಬಂದಿದೆ. ಕಳೆದ 2 ವರ್ಷಗಳಿಂದ ಮನವಿ ಮಾಡುತ್ತಾ ಬಂದಿದ್ದರೂ ಈವರೆಗೆ ಕ್ರಮವಹಿಸಿಲ್ಲ. ಅಳವಡಿಸಿರುವ ಪೈಪ್ ಲೈನ್ ಕಾಮಗಾರಿಯೂ ಕಳಪೆಯಾಗಿದೆ. ಎಂದು ಬಗ್ಗನ ಅನಿಲ್ ಕುಮಾರ್, ಡಾಲಿ ಪ್ರಕಾಶ್, ಜೀವನ್, ಸುಖಾಂತ್, ರವಿ, ಚನ್ನಕೇಶವ ಅವರುಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಗೌಡಳ್ಳಿಯ ಶುಂಠಿ ಗ್ರಾಮದಲ್ಲಿ ನಿರ್ಮಿಸಿರುವ ನೀರಿನ ಟ್ಯಾಂಕ್‌ನಲ್ಲಿ ಈಗಲೇ ನೀರು ಸೋರಿಕೆಯಾಗುತ್ತಿದೆ. ಟ್ಯಾಂಕ್‌ನ್ನು ಒಡೆದು ಹಾಕಿ ನೂತನ ಟ್ಯಾಂಕ್ ನಿರ್ಮಿಸಬೇಕು. ಕಾಮಗಾರಿ ನಡೆಸಿದ ಗುತ್ತಿಗೆದಾರನನ್ನು ಕಪ್ಪುಪಟ್ಟಿಗೆ ಸೇರಿಸಬೇಕೆಂದು ಗ್ರಾಮಸ್ಥರಾದ ಚರಣ್ ಸೇರಿದಂತೆ ಇತರರು ಆಗ್ರಹಿಸಿದರು.

ಗ್ರಾಮಸ್ಥರ ಅಹವಾಲು ಆಲಿಸಿ ಪ್ರತಿಕ್ರಿಯಿಸಿದ ಜಿಲ್ಲಾ ಪಂಚಾಯ್ತಿ ಕಾರ್ಯಪಾಲಕ ಅಭಿಯಂತರ ದೇವಾನಂದ್, ಜಲಜೀವನ್ ಮಿಷನ್ ಯೋಜನೆಯಡಿ ಸಮಸ್ಯೆಗಳು ಬಂದಿರುವ ಕಡೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಶುಂಠಿ ಗ್ರಾಮದ ಟ್ಯಾಂಕ್ ನೀರು ತುಂಬಿಸಿ ಸೋರಿಕೆ ಕಂಡು ಬಂದರೆ ಟ್ಯಾಂಕ್‌ನ್ನು ಒಡೆದು ನೂತನ ಟ್ಯಾಂಕ್ ನಿರ್ಮಿಸಲು ಕ್ರಮ ವಹಿಸಲಾಗುವುದು. ಹರಗ, ತಲ್ತರೆಶೆಟ್ಟಳ್ಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭ ಸಹಾಯಕ ಕಾರ್ಯಪಾಲಕ ಅಭಿಯಂತರ ಟಿ.ಪಿ.ವೀರೇಂದ್ರ ಹಾಜರಿದ್ದರು.

ಕೊಡವ ಭಾಷೆಯ ಅಧಿಕೃತ ಲಿಪಿ ಸಿದ್ಧ

ವಾಣಿಜ್ಯ ಮಳಿಗೆಗಳಲ್ಲಿ ಕೊಡವ ಭಾಷೆ ಬಳಸಲು ಆಗ್ರಹ

ಮಡಿಕೇರಿ, ಫೆ.7– ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕೊಡವ ಅಧಿಕೃತ ಲಿಪಿಯ ಬಗ್ಗೆ ನಿರ್ಧಾರ ಕೈಗೊಂಡಿದ್ದು, ಸರ್ಕಾರ ತಕ್ಷಣ ಇದನ್ನು ಅಂಗೀಕರಿಸಿ, ಜಿಲ್ಲೆಯ ವಾಣಿಜ್ಯ ಮಳಿಗೆ ಮತ್ತು ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡ ಭಾಷೆಯೊಂದಿಗೆ ಬಳಸಲು ಆದೇಶ ನೀಡಬೇಕೆಂದು ಕರ್ನಾಟಕ ಭಾಷಾ ಅಲ್ಪಸಂಖ್ಯಾತರ ಒಕ್ಕೂಟದ ರಾಜ್ಯಾಧ್ಯಕ್ಷ ಪ್ರತೀಕ್ ಪೊನ್ನಣ್ಣ ಮನವಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾಗಮಂಡಲದ ದೇವಾಲಯದಲ್ಲಿ ಸಿಕ್ಕ ಶಾಸನ ಕೊಡವ ಲಿಪಿಯಲ್ಲಿರುವ ಮೊದಲ ಶಾಸನವಾಗಿದೆ ಇದು 1370ರ ಇಸವಿಯದಾಗಿದ್ದು, ಅದರಂತೆ 1887ರಲ್ಲಿ ಡಾ.ಕೊರವಂಡ ಅಪ್ಪಯ್ಯ ಅವರು ಲಿಪಿಯನ್ನು ಬಿಡುಗಡೆ ಮಾಡಿದ್ದಾರೆ ಎಂದರು. ನಂತರ 1970ರಲ್ಲಿ ಸುಮಾರು 12 ಲಿಪಿಗಳನ್ನು ಸಂಶೋಧನೆ ಮಾಡಿ ಡಾ.ಐ.ಎಂ. ಮುತ್ತಣ್ಣ ಅವರು ಕೊಡವ ಭಾಷೆಗೆ ಸರಳವಾಗಿರುವ ಒಂದು ಲಿಪಿಯನ್ನು ತಂದಿದ್ದಾರೆ. ಅಲ್ಲದೆ ನಂತರ ದಿನಗಳಲ್ಲಿ ಐದು ಲಿಪಿಗಳು ಕೊಡವ ಭಾಷೆಗೆ ಬಂದವು. ಇದೀಗ ಅಧಿಕೃತವಾಗಿ ಯಾವ ಲಿಪಿಯನ್ನು ಬಳಸಬೇಕು ಎಂಬ ಗೊಂದಲಕ್ಕೆ ತೆರೆ ಎಳೆದಿರುವ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕೊಡವ ಅಧಿಕೃತ ಲಿಪಿಯನ್ನು ಅಂತಿಮಗೊಳಿಸಿದೆ.

2022 ಫೆ.21ರಲ್ಲಿ ನಡೆದ ಲಿಪಿ ಸಮಿತಿಯ ಸಭೆಯಲ್ಲಿ ಸೆಂಟರ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್ ಮೈಸೂರಿನ ಪ್ರತಿನಿಧಿಗಳು, ಇತಿಹಾಸಕಾರ, ಸಾಹಿತಿ ಬಾಚರಣಿಯಂಡ ಅಪ್ಪಣ್ಣ, ಬೊವ್ವೇರಿಯಂಡ ಉತ್ತಯ್ಯ, ಅಪ್ಪನೆರವಂಡ ಕಿರಣ್ ಸುಬ್ಬಯ್ಯ, ಬಾಚರಣಿಯಂಡ ರಾಣು ಅಪ್ಪಣ್ಣ ಡಾ.ಸುಭಾಷ್ ನಾಣಯ್ಯ, ಮೂಕೊಂಡ ನಿತಿನ್ ಕುಶಾಲಪ್ಪ ಬಾಚರಣಿಯಂಡ ಗೌರಮ್ಮ ಮಾದಮ್ಮಯ್ಯ, ಮಾಜಿಮಡ ಜಾನಕಿ ಮಾಚಯ್ಯ, ತೇಲಪಂಡ ಕವನ್ ಕಾರ್ಯಪ್ಪ, ಕುಡಿಯರ ಮುತ್ತಪ್ಪ ಡಾ.ಮುಲ್ಲೇಂಗಡ ರೇವತಿ ಪೂವಯ್ಯ ಅವರು ಪಾಲ್ಗೊಂಡು ಚರ್ಚಿಸಿದ್ದರು. ಹಲವು ಚರ್ಚೆಗಳ ನಂತರ ಡಾ.ಐ.ಎಂ.ಮುತ್ತಣ್ಣ ಅವರ ಲಿಪಿಯನ್ನು ಕೊಡವ ಭಾಷೆಯ ಅಧಿಕೃತ ಲಿಪಿ ಎಂದು ಪರಿಗಣಿಸಿದ್ದಾರೆ. ಆದ್ದರಿಂದ ಸರ್ಕಾರ ಇದನ್ನು ತಕ್ಷಣ ಅಂಗೀಕರಿಸಿ ಕೊಡಗಿನ ವಾಣಿಜ್ಯ ಮಳಿಗೆಯಲ್ಲಿ ಮತ್ತು ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡ ಭಾಷೆಯೊಂದಿಗೆ ಬಳಸಲು ಆದೇಶ ನೀಡಬೇಕೆಂದು ಪ್ರತೀಕ್ ಪೊನ್ನಣ್ಣ ಒತ್ತಾಯಿಸಿದರು.

ಇ–ತ್ಯಾಜ್ಯ ಸಂಗ್ರಹ



ಗೋಣಿಕೊಪ್ಪ, ಫೆ.7– ಗೋಣಿಕೊಪ್ಪ ಲಯನ್ಸ್ ಕ್ಲಬ್ ವತಿಯಿಂದ ನಡೆದ ಇ–ತ್ಯಾಜ್ಯ ಸಂಗ್ರಹ ಅಭಿಯಾನದಲ್ಲಿ ಸುಮಾರು 55 ಕೆ. ಜಿ ಎಲೆಕ್ಟ್ರಾನಿಕ್ ತ್ಯಾಜ್ಯಗಳನ್ನು ಸಂಗ್ರಹಿಸಲಾಯಿತು.

ಅಂಚೆ ಕಚೇರಿ ಸಮೀಪದ ಕಾರ್ಯಪ್ಪ ಪ್ಲಾಜಾ, ಎಂ. ಸಿ. ಮಾದಪ್ಪ ಪೆಟ್ರೋಲಿಯಂ, ಬಾಳೆಲೆ ಗ್ರಾ ಪಂ ಆವರಣದಲ್ಲಿ ಇವುಗಳನ್ನು ಸಂಗ್ರಹ ಮಾಡಲಾಯಿತು. ಸುತ್ತಲಿನ ಗ್ರಾಮಸ್ಥರು ತ್ಯಾಜ್ಯ ನೀಡಿದರು. ಗೋಣಿಕೊಪ್ಪ ಗ್ರಾಪಂ ಅಧ್ಯಕ್ಷೆ ಮನ್ನಕಮನೆ ಸೌಮ್ಯ ಬಾಲಕೃಷ್ಣ, ಲಯನ್ಸ್ ಕ್ಲಬ್ ಅಧ್ಯಕ್ಷ ಡಾ. ಅಮ್ಮಂಡ ಚಿಣ್ಣಪ್ಪ, ಕಾರ್ಯದರ್ಶಿ ಪೊನ್ನಿಮಾಡ ಲೋಕೇಶ್ ಕಾರ್ಯಪ್ಪ, ಸದಸ್ಯ ಕೆ ಸಿ. ಅಚ್ಚಯ್ಯ, ಉದ್ಯಮಿ ಮಚ್ಚಮಾಡ ಅನೀಶ್ ಮಾದಪ್ಪ ಬಾಳೆಲೆ ಗ್ರಾಪಂ ಅಧ್ಯಕ್ಷ ಪೋಡಮಾಡ ಸುಕೇಶ್ ಇದ್ದರು.

ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.7– ಮಡಿಕೇರಿ, ವಿದ್ಯುತ್ ಉಪ–ಕೇಂದ್ರದಿಂದ 66/11 ಕೆವಿ ಹೊರ ಹೋಗುವ ಓಂಕಾರೇಶ್ವರ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಫೆ.8 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಗೌಡಸಮಾಜ, ಕನ್ನಂಡ ಬಾಣೆ, ಗಣಪತಿ ದೇವಸ್ಥಾನ ಚೈನ್‌ಗೇಟ್, ಓಂಕಾರೇಶ್ವರ ರಸ್ತೆ, ವೈವಾಸ್ ಆಸ್ಪತ್ರೆ, ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಫೆ.9ರಂದು ವಿದ್ಯುತ್ ವ್ಯತ್ಯಯ: ಶನಿವಾರಸಂತೆ 66 ಕೆವಿ ವಿದ್ಯುತ್ ವಿತರಣಾ ಕೇಂದ್ರದ ಶಕ್ತಿ ಪರಿವರ್ತಕದ ನಿರ್ವಹಣೆ ಕಾರ್ಯವನ್ನು ಕೆಪಿಟಿಸಿಎಲ್ ಅವರು ನಿರ್ವಹಿಸಬೇಕಿರುವುದರಿಂದ ಫೆ.9 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹಂಡ್ಲಿ, ಕೊಡ್ಲಿಪೇಟೆ, ಶನಿವಾರಸಂತೆ, ಆಲೂರು, ಗೋಪಲ್‌ಪುರ, ಬಲ್ಲಾರಳ್ಳಿ, ಕಿತ್ತೂರು ಗೌಡಳ್ಳಿ, ನಿಡ್ತ, ಅಂಕನಹಳ್ಳಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಉದ್ಘಾಟನೆಗೆ ಸಿದ್ಧಗೊಂಡಿರುವ ಅಂಬೇಡ್ಕರ್ ಭವನ



ವಿರಾಜಪೇಟೆ, ಫೆ.7– ವಿರಾಜಪೇಟೆ ಪಟ್ಟಣದಲ್ಲಿ 1.80 ಕೋಟಿ ರೂ. ವೆಚ್ಚದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧಗೊಂಡಿದೆ.

ವಿರಾಜಪೇಟೆ ತಾಲೂಕಿನಲ್ಲಿ ಅಂಬೇಡ್ಕರ್ ಭವನದ ಅಗತ್ಯವಿರುವುದಾಗಿ ನಿವೃತ ಶಿಕ್ಷಕ ಎನ್.ವೀರಭದ್ರಯ್ಯ ಮತ್ತು ಮಾಜಿ ಸೈನಿಕ ಹೆಚ್.ಕೆ.ಗಣೇಶ್ ಅವರು ಸಮಿತಿಯೊಂದನ್ನು ರಚಿಸಿ ಸ್ಥಳೀಯ ಶಾಸಕ ಕೆ.ಜಿ.ಬೋಪಯ್ಯ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದರು. ಶಾಸಕರ ಸಲಹೆ ಮೇರೆಗೆ ಅಂಬೇಡ್ಕರ್ ಯೋಜನೆ ಅಭಿವೃದ್ಧಿ ಸಂಘವನ್ನು ರಚನೆ ಮಾಡಿ 2016 ರಲ್ಲಿ ಸಮಾಜ ಕಲ್ಯಾಣ ಇಲಾಖೆ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದಾಗ ಶಾಸಕರ ನೇತೃತ್ವದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 180 ಲಕ್ಷ ರೂ, ಅನುದಾನ ಮಂಜೂರು ಆಗಿತ್ತು. ಶಾಸಕ ಕೆ.ಜಿ.ಬೋಪಯ್ಯ ಭೂಮಿಪೂಜೆ ನೆರವೇರಿಸಿದ್ದರು.

ಕಟ್ಟಡ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದವರು ನಡೆಸಿದ್ದು, ಕಾಮಗಾರಿ ಸಂದರ್ಭ 150 ಲಕ್ಷ ರೂ. ಅನುದಾನ ಮಾತ್ರ ಬಿಡುಗಡೆಗೊಂಡಿತು. ಉಳಿದ ಕಾಮಗಾರಿಗೆ ಮಂಜೂರಾಗಿದ್ದ ಅನುದಾನವಲ್ಲ ಎಂಬ ಮಾತು ಕೇಳಿಬಂತು. ನಂತರ ವಿರಾಜಪೇಟೆ ಪುರಸಭೆಯಿಂದ 20 ಲಕ್ಷ ರೂ. ಹಾಗೂ ತಾಲೂಕಿನ 36 ಗ್ರಾಮ ಪಂಚಾಯಿತಿಗಳಿಂದ ಒಟ್ಟು 11 ಲಕ್ಷ ರೂ. ಅನುದಾನ ದೊರಕಿತು ಎಂದು ಅಂಬೇಡ್ಕರ್ ಭವನ ಅಭಿವೃದ್ಧಿ ಸಂಘದ ಅಧ್ಯಕ್ಷ ಎನ್.ವೀರಭದ್ರಯ್ಯ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಂಬೇಡ್ಕರ್ ಭವನದ ಕಟ್ಟಡದಲ್ಲಿ, ವಾಹನ ನಿಲುಗಡೆ ಸ್ಥಳದಲ್ಲಿ ಕಾಂಕ್ರೀಟ್ ಕಾಮಗಾರಿ ಆಗಬೇಕು, ಊಟದ ಸಭಾಂಗಣ, ಸಭಾ ಮಂಟಪ, ಶಾಚಾಲಯಗಳ ಕಾಮಗಾರಿ ಮುಗಿದಿದ್ದು, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಉದ್ಘಾಟನೆ ಸಮಾರಂಭ ನಡೆಯಲಿದೆ, ಮುಖ್ಯಮಂತ್ರಿಗಳು ಮಡಿಕೇರಿಗೆ ಬರಲಿದ್ದು ಈ ಸಂದರ್ಭದಲ್ಲಿ ಅಂಬೇಡ್ಕರ್ ಭವನ ಉದ್ಘಾಟಿಸಲಿದ್ದಾರೆ ಎಂದರು.

ಇಂದಿನಿಂದ ನುಡಿ ಜಾತ್ರೆ

ಸಾಹಿತ್ಯ ಸಮ್ಮೇಳನಕ್ಕೆ ಸರ್ವ ಸಜ್ಜುಗೊಂಡಿರುವ ಕೊಳ್ಳೇಗಾಲ ಪಟ್ಟಣ



ಕೊಳ್ಳೇಗಾಲ, ಫೆ.7– ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಳ್ಳೇಗಾಲ ತಾಲೂಕು ಆಡಳಿತ ಹಾಗೂ ತಾಲೂಕು ಪರಿಷತ್ ವತಿಯಿಂದ ಚಾಮರಾಜನಗರ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಫೆ. 8 ಮತ್ತು 9ರಂದು ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ.

ಫೆ.8 ರಂದು ಬೆಳಿಗ್ಗೆ 8.30 ಗಂಟೆಗೆ ಉಪವಿಭಾಗಾಧಿಕಾರಿ ಗೀತಾ ಹುಡೇದ ಅವರು ರಾಷ್ಟ್ರಧ್ವಜಾರೋಹಣ ನೆರವೇರಿಸುವರು. ತಹಶೀಲ್ದಾರ್ ಎಂ. ಮಂಜುಳಾ ನಾಡಧ್ವಜಾರೋಹಣ ನೆರವೇರಿಸುವರು. ಕನ್ನಡ ಸಾಹಿತ್ಯ ಪರಿಷತ್ತಿ ಜಿಲ್ಲಾಧ್ಯಕ್ಷ ಎಂ. ಶೈಲಕುಮಾರ್ ಪರಿಷತ್ತಿನ ಧ್ವಜಾರೋಹಣ ನೆರವೇರಿಸುವರು. ಬೆಳಗ್ಗೆ 10 ಗಂಟೆಗೆ ಸಮ್ಮೇಳನದ ಸರ್ವಾಧ್ಯಕ್ಷ ಮಹದೇವ ಶಂಕನಪುರ ಅವರನ್ನು ನ್ಯಾಷನಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಿಂದ ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ ಡಾ. ರಾಜ್‌ಕುಮಾರ್ ರಸ್ತೆ ಮಾರ್ಗವಾಗಿ ಕಲಾ ತಂಡಗಳ ಭವ್ಯ ಮೆರವಣಿಗೆಯಲ್ಲಿ ಜನಪದ ಮಹಾಮಂಟಪಕ್ಕೆ ಕರೆತರಲಾಗುವುದು.

ನಗರಸಭಾಧ್ಯಕ್ಷೆ ರೇಖಾ ರಮೇಶ್ ಅವರು ಮೆರವಣಿಗೆ ಉದ್ಘಾಟಿಸುವರು. ನಗರಸಭೆ ಆಯುಕ್ತ ಎಸ್. ನಂಜುಂಡ ಸ್ವಾಮಿ, ಪೊಲೀಸ್ ಉಪಾಧೀಕ್ಷಕ ಯು.ಎಸ್. ಸೋಮೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್. ಗುರುಲಿಂಗಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಬೆಳಗ್ಗೆ 11 ಗಂಟೆಗೆ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ, ಮಳವಳ್ಳಿಯ ಮಂಟೇಸ್ವಾಮಿ ಮಠದ ಶ್ರೀಕಂಠಸಿದ್ದಲಿಂಗರಾಜೇಅರಸ್ ಅವರು ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸುವರು. ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಪುಷ್ಪಾರ್ಚನೆ ಮಾಡುವರು. ಶಾಸಕ ಎನ್. ಮಹೇಶ್ ಅವರು ಅಧ್ಯಕ್ಷತೆ ವಹಿಸುವರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ. ಶೈಲಕುಮಾರ್ ಆಶಯ ನುಡಿಗಳನ್ನಾಡುವರು. ಚಾಮರಾಜನಗರ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಮಂಜು ಕೋಡಿಉಗನೆ ಅವರು ನಿಕಟಪೂರ್ವ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡುವರು. ಚಾಮರಾಜನಗರ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಮಹಾದೇವಶಂಕನಪುರ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡುವರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಪುಸ್ತಕ ಮಳಿಗೆ ಉದ್ಘಾಟಿಸುವರು. ಶಾಸಕ ಆರ್. ನರೇಂದ್ರ ಅವರು ಕೃತಿಗಳ ಲೋಕಾರ್ಪಣೆ ಮಾಡುವರು. ಶಾಸಕ ಸಿ.ಎಸ್. ನಿರಂಜನ ಕುಮಾರ್ ಅವರು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸುವರು. ಸಮಾಜದ ಗಣ್ಯರು, ಸಾಹಿತಿಗಳು ಕಾರ್ಯಕ್ರಮದಲ್ಲಿ ಹಾಜರಿರುವರು.

ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು, ಉದ್ಯೋಗಕ್ಕೆ ಇಂಗ್ಲಿಷ್, ಖಾಸಗಿ ಶಾಲೆ ಅನಿವಾರ್ಯವಲ್ಲ

ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಮಹಾದೇವ ಶಂಕನಪುರ ಆಶಯ



ಚಾಮರಾಜನಗರ, ಫೆ.7– ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು... ಉದ್ಯೋಗ ಪಡೆಯಲು ಇಂಗ್ಲಿಷ್ ಮಾಧ್ಯಮ ಹಾಗೂ ಖಾಸಗಿ ಶಾಲೆಗಳು ಅನಿವಾರ್ಯವಲ್ಲ... ಗಡಿ ಭಾಗದಲ್ಲಿ ಕನ್ನಡದ ಸ್ಥಿತಿ–ಗತಿ ಚೆನ್ನಾಗಿದೆ... ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಅನುಷ್ಠಾನಕ್ಕೆ ಆದ್ಯತೆ ಸಿಗುವಂತಾಗಬೇಕು... ಇದು ಕೊಳ್ಳೇಗಾಲದಲ್ಲಿ ಫೆ. 8 ಮತ್ತು 9ರಂದು ನಡೆಯಲಿರುವ ಚಾಮರಾಜನಗರ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಸಾಹಿತಿ ಮಹಾದೇವ ಶಂಕನಪುರ ಅವರ ಆಶಯಗಳು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಹಾದೇವ ಶಂಕನಪುರ ಅವರು ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅವರನ್ನು 'ಮೈಸೂರು ಮಿತ್ರ' ಸಂದರ್ಶಿಸಿತು. ಈ ಸಂದರ್ಶನದಲ್ಲಿ ಅವರು ಕನ್ನಡದ ಬಗ್ಗೆ ಮನಬಿಚ್ಚಿ ಮಾತನಾಡಿದರು.

ಮೈಸೂರುಮಿತ್ರ: ಜಿಲ್ಲೆಯ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ತಮಗೆ ಅಭಿನಂದನೆಗಳು. ತಮ್ಮ ಅನಿಸಿಕೆ ಏನು?

ಮಹಾದೇವ ಉತ್ತರ: ನನಗೆ ವೈಯಕ್ತಿಕವಾಗಿ ಬಹಳ ಸಂತೋಷ ತರಿಸಿದೆ. ನಮ್ಮ ಜಿಲ್ಲೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಹೃದಯಿಗಳು ನನಗೆ ಈ ಒಂದು ಅವಕಾಶ ಕಲ್ಪಿಸಿದ್ದಾರೆ. ಇದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

'ಮಿತ್ರ': ಚಾಮರಾಜನಗರ ಗಡಿ ಜಿಲ್ಲೆಯಲ್ಲಿ ಕನ್ನಡದ ಸ್ಥಿತಿಗತಿ ಹೇಗಿದೆ?

ಉತ್ತರ: ಜಿಲ್ಲೆಯಲ್ಲಿ ಕನ್ನಡ ತಮಿಳು, ಕನ್ನಡ ಮಳೆಯಾಳಂ ನಡುವಿನ ನಂಟು ಬಹಳಷ್ಟಿದೆ. ಆದರೂ ಸಹ ಕನ್ನಡದ ಸ್ಥಿತಿ–ಗತಿ, ಸ್ವಾಭಿಮಾನ ಚೆನ್ನಾಗಿದೆ. ನಮ್ಮ ಕನ್ನಡವನ್ನು ಉಳಿಸಿಕೊಂಡು ಇತರ ಭಾಷೆಗಳೊಂದಿಗೆ ಸೌಹಾರ್ದತೆಯಿಂದ ಇರಬೇಕು. ಇದೂ ಕನ್ನಡಕ್ಕೆ ಪೂರಕವೇ ಹೊರತು ಮಾರಕ ಆಗುವುದಿಲ್ಲ.

ಸಂದರ್ಶನ: ಸಿದ್ದಲಿಂಗಸ್ವಾಮಿ

'ಮಿತ್ರ': ವಿದ್ಯಾರ್ಥಿಗಳ ಕೊರತೆ ಹಿನ್ನೆಲೆಯಲ್ಲಿ 5124 ಸರ್ಕಾರಿ ಶಾಲೆಗಳ ಬಂದ್‌ಗೆ ಆಡಳಿತ ಸುಧಾರಣಾ ಆಯೋಗ ಸರ್ಕಾರಕ್ಕೆ ವರದಿ ನೀಡಿದೆ. ಇದರ ಬಗ್ಗೆ ತಮ್ಮ ಅಭಿಪ್ರಾಯ?

ಉತ್ತರ: ವಿದ್ಯಾರ್ಥಿಗಳ ಕೊರತೆ ಎಂಬ ಕಾರಣಕ್ಕೆ ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಸರಿಯಾದ ತೀರ್ಮಾನ ಅಲ್ಲ. ಇದು ಆತಂಕಕಾರಿ ವಿಷಯ. ಸರ್ಕಾರಿ ಶಾಲೆಗಳಿಗೆ ಮಕ್ಕಳ ಕೊರತೆ ಉಂಟಾಗಲು ಪೋಷಕರಲ್ಲಿ ಇರುವ ಭ್ರಮೆ ಕಾರಣ. ಪೋಷಕರು ಇಂಗ್ಲಿಷ್ ಮಾಧ್ಯಮಕ್ಕೆ ಹಾಗೂ ಖಾಸಗಿ ಶಾಲೆಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಇಂತಹ ಶಾಲೆಗಳಲ್ಲಿ ಓದಿದರಷ್ಟೇ ತಮ್ಮ ಮಕ್ಕಳಿಗೆ ಉದ್ಯೋಗ ದೊರೆಯುತ್ತದೆ ಎಂಬ ತಮ್ಮ ಕಲ್ಪನೆಯಿಂದ ಪೋಷಕರು ಮೊದಲು ಹೊರಬರಬೇಕು. ಸರ್ಕಾರಿ ಶಾಲೆಗಳಲ್ಲಿ ಹಾಗೂ ಕನ್ನಡ ಮಾಧ್ಯಮದಲ್ಲಿ ಓದಿದ ಬಹಷ್ಟು ಮಂದಿ ದೊಡ್ಡ ಹುದ್ದೆಯಲ್ಲಿ ಇಲ್ಲವೇ?

'ಮಿತ್ರ': ನಿಮ್ಮ ಮುಂದಿನ ಬರವಣಿಗೆಯ ದಿಕ್ಕು ಯಾವುದು?

ಉತ್ತರ: ಈ ಜಿಲ್ಲೆಯ ಬಗ್ಗೆ ಈ ತನಕ ಅನಾವರಣ ಆಗದ, ಬೆಳಕಿಗೆ ಬಾರದ ಹಲವಾರು ವಿಷಯಗಳಿಗೆ ಆದ್ಯತೆ ನೀಡಲಿದ್ದೇನೆ. ಜಿಲ್ಲೆಯ ಕನ್ನಡ ಸಾಹಿತ್ಯ, ಇತಿಹಾಸ ಪರಂಪರೆಯನ್ನು ಕುರಿತು ಮತ್ತಷ್ಟು ಬೆಳಕು ಚೆಲ್ಲಲು ಪ್ರಯತ್ನಿಸುತ್ತೇನೆ.

'ಮಿತ್ರ': ಸಾಹಿತ್ಯ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳು ಅನುಷ್ಠಾನಗೊಳ್ಳುವುದಿಲ್ಲವಲ್ಲ?

ಉತ್ತರ: ನಿರ್ಣಯಗಳ ಅನುಷ್ಠಾನ ಸರ್ಕಾರ, ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗಗಳ ಮೇಲೆ ಅವಲಂಬಿತವಾಗಿರುತ್ತವೆ. ಹೀಗಾಗಿ, ಈ ಮೂವರು ತಮ್ಮ ಇಚ್ಛಾಶಕ್ತಿ ಪ್ರದರ್ಶಿಸಿ ನಿರ್ಣಯಗಳ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ನೀಡುವಂತಾಗಬೇಕು.

ಮಾದಪಟ್ಟಣ ವಿರಕ್ತ ಮಠದ ಹಿರಿಯ ಶ್ರೀ ಸದಾಶಿವ ಸ್ವಾಮಿ ಲಿಂಗೈಕ್ಯ

ಬೇಗೂರು(ಗುಂಡ್ಲುಪೇಟೆ), ಫೆ.7– ಸಮೀಪದ ಮಾದಪಟ್ಟಣ ಗ್ರಾಮದ ವಿರಕ್ತ ಮಠದ ಹಿರಿಯ ಶ್ರೀ ಸದಾಶಿವ ಸ್ವಾಮಿ (80) ಸೋಮವಾರ ರಾತ್ರಿ ಲಿಂಗೈಕ್ಯರಾಗಿದ್ದು ಮಂಗಳವಾರ ಸಂಜೆ ಮಠದ ಗದ್ದಿಗೆ ಆವರಣದಲ್ಲಿ ಮಠಾಧಿಪತಿಗಳು ಮತ್ತು ಭಕ್ತರ ಶೋಕ ಸಾಗರದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.



ಸುತ್ತೂರು ಶ್ರೀ ದೇಶಿಕೇಂದ್ರ ಮಹಾಸ್ವಾಮಿ, ಕನಕಪುರ ದೇಗುಲ ಮಠದ ಶ್ರೀ ಮಹಾಲಿಂಗಸ್ವಾಮಿಯವರ ನೇತೃತ್ವದಲ್ಲಿ, ದೇವನೂರು ಮಠದ ಮಹಾಂತ ಸ್ವಾಮಿ ಸೇರಿದಂತೆ ಹಲವಾರು ಮಠಾಧಿಪತಿಗಳು ಹಾಜರಿದ್ದರು, ಶಾಸಕ ಸಿ.ಎಸ್. ನಿರಂಜನ್ ಕುಮಾರ್, ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ. ಗಣೇಶ್ ಪ್ರಸಾದ್, ಚಾಮುಲ್ ಮಾಜಿ ಅಧ್ಯಕ್ಷ ನಂಜುಂಡ ಪ್ರಸಾದ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಆರ್.ಲೋಕೇಶ್, ಚಾಮುಲ್ ಸದಸ್ಯ ಎಂ.ಪಿ. ಸುನೀಲ್ ಸೇರಿದಂತೆ ಮಠಾಧಿಪತಿಗಳು ಕಂಬನಿ ಮಿಡಿದು, ಅಂತಿಮ ದರ್ಶನ ಪಡೆದರು.

ಮಣಹಳ್ಳಿಯಲ್ಲಿ ಅಂಬೇಡ್ಕರ್ ಸಮುದಾಯ ಭವನ, ಶಾಗ್ಯದಲ್ಲಿ ಆದಿಜಾಂಬವರ ಸಮುದಾಯ ಭವನ ಉದ್ಘಾಟನೆ



ಹನೂರು, ಫೆ7– ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರಿನಲ್ಲಿ ಲೋಕಾರ್ಪಣೆಗೊಳ್ಳುತ್ತಿರುವ ಸಮುದಾಯ ಭವನಗಳು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಗಳಿಗೆ ಬಳಕೆ ಆಗುವ ಮೂಲಕ ಮಾದರಿಯಾಗಲಿ ಎಂದು ಶಾಸಕ ಆರ್. ನರೇಂದ್ರ ತಿಳಿಸಿದರು.

ತಾಲೂಕಿನ ಮಣಗಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಡಾ.ಅಂಬೇಡ್ಕರ್ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಗ್ರಾಮಕ್ಕೆ ಡಾ.ಅಂಬೇಡ್ಕರ್ ಹೆಸರಿನಲ್ಲಿ ಸಮುದಾಯ ಭವನ ಆಸ್ತಿಯನ್ನು ನೀಡುತ್ತಿದ್ದು ಇದನ್ನು ಸದುಪಯೋಗಪಡಿಸಿಕೊಳ್ಳುವ ವಿಚಾರ ಜನತೆಗೆ ಬಿಟ್ಟಿದ್ದು, ಸಮುದಾಯ ಭವನವನ್ನು ಮದುವೆ ಹಾಗೂ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಯಲ್ಲದೇ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ಡಾ.ಅಂಬೇಡ್ಕರ್ ಸೇರಿದಂತೆ ಮಹನೀಯರ ವಿಚಾರಧಾರೆಗಳನ್ನು ಅರಿಯುವ ಕೆಲಸವಾಗಬೇಕು.

ತಾಪಂ ಮಾಜಿ ಸದಸ್ಯ ಜವಾದ್ ಅಹ್ಮದ್, ಮುಖಂಡ ಮಲ್ಲಣ್ಣ ಮಾತನಾಡಿದರು. ಬಳಿಕ ಶಾಗ್ಯ ಗ್ರಾಮದಲ್ಲಿ ಆದಿ ಜಾಂಬವರ ಸಮುದಾಯ ಭವನ ಲೋಕಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಣಗಳ್ಳಿ ಗ್ರಾಪಂ ಅಧ್ಯಕ್ಷೆ ಮಂಜುಳ, ಉಪಾಧ್ಯಕ್ಷೆ ಸಿದ್ದಮ್ಮ, ಸದಸ್ಯ ಸಿದ್ದರಾಜು, ಟಿಎಪಿಎಂಸಿ ಮಾಜಿ ನಿರ್ದೇಶಕ ಲಿಂಗರಾಜು, ಯೂಥ್ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಗ್ರಾಮದ ಯಜಮಾನರುಗಳು, ಮುಖಂಡರುಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಅಪರಿಚಿತ ಸಾವು

ಚಾಮರಾಜನಗರ, ಫೆ.7– ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬ ಯಡಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ. ಸುಮಾರು 30 ರಿಂದ 32 ವರ್ಷ ವಯಸ್ಸಿನ ವ್ಯಕ್ತಿಯಾಗಿದ್ದು, 5.6 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲುಮುಖ, ಕಪ್ಪು ಕೂದಲು, ಕುರುಚಲುಗಡ್ಡ ಹೊಂದಿದ್ದು, ಕಪ್ಪು ಮತ್ತು ಬಿಳಿ ಬಣ್ಣ ತುಂಬು ತೋಳಿನ ಶರ್ಟ್ ಧರಿಸಿರುತ್ತಾರೆ. ವಾರಸುದಾರರು ಇದ್ದಲ್ಲಿ ನಗರದ ಪಟ್ಟಣ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಪ್ರಕಟಣೆ ಕೋರಿದೆ.



ಇಂದು ಬೇಗೂರಿನಲ್ಲಿ ಗ್ರಾಮದೇವತೆ ಮಾರಮ್ಮನ ಹಬ್ಬ



ಬೇಗೂರು, ಫೆ.7– ಗ್ರಾಮದ ಗ್ರಾಮ ದೇವತೆ ಮಾರಮ್ಮನ ಹಬ್ಬವು ಫೆ.8 ರಂದು ವಿಜೃಂಭಣೆಯಿಂದ ನಡೆಯಲಿದೆ. ಗ್ರಾಮದಲ್ಲಿ ಎಲ್ಲಾ ಕೋಮಿನವರು ಒಗ್ಗೂಡಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಸಭೆ ನಡೆಸಿ ವಿಜೃಂಭಣೆಯಿಂದ ಗ್ರಾಮದೇವತೆ ಮಾರಮ್ಮನ ಹಬ್ಬವನ್ನು ಆಚರಿಸಲು ನಿರ್ಧರಿಸಿದ್ದಾರೆ.

ವಿವಿಧ ಹೋಮ, ವಿಶೇಷ ಅಭಿಷೇಕ, ಕವಚಧಾರಣೆ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಹಬ್ಬದ ಹಿನ್ನೆಲೆಯಲ್ಲಿ ಡೊಳ್ಳು ಕುಣಿತ, ಕಡ್ಡಿವರಸೆ, ಕತ್ತಿ ವರಸೆ ಸೇರಿದಂತೆ ಗ್ರಾಮೀಣ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸಲಾಗುವುದು. ದೇಗುಲವನ್ನು ಸುಣ್ಣ ಬಣ್ಣ ಬಳಿದು ವಿದ್ಯುತ್‌ದೀಪ ಮತ್ತು ನಾನಾ ಬಗೆಯ ಹೂಗಳಿಂದ ಅಲಂಕರಿಸಲಾಗಿದ್ದು, ಮಾರಮ್ಮನ ಮೂರ್ತಿಗೆ ವಿಶೇಷ ಅಭಿಷೇಕಗಳು ನಡೆಯಲಿದೆ

ಎಡೆ ಪೂಜೆ: ಹರಕೆ ಹೊತ್ತ ಭಕ್ತರು ಗ್ರಾಮದ ಮಹಿಳೆಯರು ಉಪವಾಸದೊಂದಿಗೆ ದೇವಾಲಯದ ಆವರಣಕ್ಕೆ ತೆರಳಿ ಅಲ್ಲಿಯೇ ಬೆಲ್ಲದನ್ನದ ಎಡೆಪೂಜೆ ತಯಾರಿಸಿ ಪೂಜೆ ಸಲ್ಲಿಸಿದ ನಂತರ ಉಪಾಹಾರ ಸೇವಿಸುತ್ತಾರೆ. ಗ್ರಾಮದ ಚಾವಡಿ, ಸಮುದಾಯ ಭವನ ಮತ್ತು ಮಾರಮ್ಮನ ಗುಡಿ, ಆವರಣದಲ್ಲಿ ಸಮಾವೇಶಗೊಳ್ಳುವ ಗ್ರಾಮಸ್ಥರು ಗ್ರಾಮ ದೇವತೆಗೆ ತಂಬಿಟ್ಟಿನ ಸೇವೆ ಸಲ್ಲಿಸಲು ಪ್ರತಿಯೊಬ್ಬರ ಮನೆಯಲ್ಲಿಯೂ ತಂಬಿಟ್ಟು, ಹೂಗಳಿಂದ ಅಲಂಕರಿಸಿದ ತಟ್ಟೆಯಲ್ಲಿರಿಸಿ ತುಪ್ಪದ ದೀಪವನ್ನು ಬೆಳಗಿಸಿ ಮಹಿಳೆಯರೆಲ್ಲಾ ತಲೆಯ ಮೇಲೆತ್ತು ವಾದ್ಯಮೇಳ ಮತ್ತು ತಮಟೆ, ಛತ್ರಿ–ಛಾಮರ, ಸತ್ತಿಗೆ ಬಿರುದುಗಳ ಸಮೇತ ಸರದಿ ಸಾಲಿನಲ್ಲಿ ಒಟ್ಟಾಗಿ ಬಂದು ಪೂಜೆ ಸಲ್ಲಿಸುವುದು ವಿಶೇಷ.

ಸಂಚಾರ ನಿಯಮ ಉಲ್ಲಂಘನೆ ದಂಡ ಮೊತ್ತಕ್ಕೆ ಶೇ. 50ರಷ್ಟು ರಿಯಾಯಿತಿ

ಚಾಮರಾಜನಗರ, ಫೆ.7– ಸಂಚಾರ ನಿಯಮ ಪ್ರಕರಣಗಳ ಉಲ್ಲಂಘನೆಗಾಗಿ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ಫೆ11ರೊಳಗೆ ಇತ್ಯರ್ಥ ಪಡಿಸಿಕೊಳ್ಳುವ ಪ್ರಕರಣಗಳಿಗೆ ಶೇ.50 ರಷ್ಟು ರಿಯಾಯಿತಿ ನೀಡಿ ಆದೇಶ ಹೊರಡಿಸಿದ್ದು, ಇದರ ಸದುಪಯೋಗಕ್ಕೆ ಕಾನೂನು ಸೇವೆಗಳ ಪ್ರಾಧಿಕಾರ ಮನವಿ ಮಾಡಿದೆ.

ಇದೇ ಫೆಬ್ರವರಿ 11ರಂದು ಹಮ್ಮಿಕೊಂಡಿರುವ ರಾಷ್ಟ್ರೀಯ ಲೋಕ್ ಅದಾಲತ್ ಗಮನದಲ್ಲಿಟ್ಟುಕೊಂಡು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ವೀರಪ್ಪ ಅವರ ಮನವಿಯಂತೆ ವಾಹನ ಮಾಲೀಕರು ಬಾಕಿ ಉಳಿಸಿಕೊಂಡಿರುವ ಸಂಚಾರ ನಿಯಮದ ಉಲ್ಲಂಘನೆ ಪ್ರಕರಣಗಳ ದಂಡ ಮೊತ್ತಗಳಿಗೆ ಸರ್ಕಾರ ಶೇ. 50ರಷ್ಟು ರಿಯಾಯಿತಿ ನೀಡಿ ಆದೇಶಿಸಿದೆ.

ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆದು ಬಾಕಿ ಇರುವ ದಂಡ ವಿವರ ವೀಕ್ಷಿಸಿ ಪಾವತಿ ಮಾಡಬಹುದಾಗಿದೆ. ಪೇಟಿಎಂ ಆ್ಯಪ್ ಮೂಲಕವೂ ದಂಡ ಪಾವತಿಸಲು ಅವಕಾಶವಿದೆ. ಹತ್ತಿರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ವಾಹನದ ನೋಂದಣಿ ಸಂಖ್ಯೆ ವಿವರ ನೀಡಿ ದಂಡ ಪಾವತಿಸಬಹುದು. ರಿಯಾಯಿತಿ ಆದೇಶವು ಫೆಬ್ರವರಿ 11ರವರೆಗೆ ಜಾರಿಯಲ್ಲಿರುತ್ತದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಬುಧವಾರ 8 ಫೆಬ್ರವರಿ 2023

ಒಂದನೇ ಪುಟದಿಂದ

ಹೆದ್ದಾರಿಯಲ್ಲಿ ದರೋಡೆ

ಕುಳಿತು ಕತ್ತಿಗೆ ಡ್ರ್ಯಾಗರ್ ಇಟ್ಟು ಬೆದರಿಸಿದ. ಮತ್ತೊಬ್ಬ ಎಡಬದಿಯ ಡೋರ್ ತೆಗೆದು ನನ್ನ ಪತ್ನಿ ಕತ್ತಿಗೆ ಚಾಕು ಇಟ್ಟು ಹೆದರಿಸಿದ. ನನ್ನ ಪತ್ನಿ ಭಯದಿಂದ ಕಿರುಚಿದಾಗ ಆಕೆಗೆ ಥಳಿಸಿ ಕೊಲೆ ಮಾಡುವುದಾಗಿ ಬೆದರಿಸಿದ. ಹಣ, ಒಡವೆ ಎಲ್ಲವನ್ನೂ ಬೇಗ ಕೊಟ್ಟುಬಿಡಿ, ಇಲ್ಲವಾದರೆ ನಿಮ್ಮನ್ನು ಕೊಂದು ಕಿತ್ತುಕೊಂಡು ಹೋಗುತ್ತೇವೆ ಎಂದು ಬೆದರಿಸಿದರು. ರಸ್ತೆಯಲ್ಲಿ ನಿರಂತರವಾಗಿ ವಾಹನಗಳು ಸಂಚರಿಸುತ್ತಿದ್ದರೂ ನಾವು ಯಾರ ಸಹಾಯ ಕೇಳುವುದಕ್ಕೂ ಆಗದೆ ಭಯದಿಂದ ಕುಳಿತಿದ್ದೆವು. ಆಗ ನನ್ನ ಬಳಿ ಇದ್ದ 20 ಗ್ರಾಂ ಸರ, 1 ಗ್ರಾಂ ಡಾಲರ್, 4 ಗ್ರಾಂ ಉಂಗುರ ಜೇಬಿನಲ್ಲಿದ್ದ 25 ಸಾವಿರ ರೂ. ಹಣ ಹಾಗೂ ನನ್ನ ಪತ್ನಿಯ ಎರಡು ಎಳೆ ಚೈನ್, 2 ಗುಂಡುಗಳು, ತಾಳಿ ಸೇರಿ ಒಟ್ಟು 67 ಗ್ರಾಂ ಮಾಂಗಲ್ಯ ಸರ ಕಿತ್ತುಕೊಂಡರು' ಎಂದು ನಾಗರಾಜ್ ತಿಳಿಸಿದ್ದಾರೆ.

ನನ್ನ ಪತ್ನಿ ಕೊರಳಿಗೆ ಚಾಕು ಹಿಡಿದಿದ್ದವನು ಚಿನ್ನಾಭರಣ ಕಿತ್ತುಕೊಂಡು ಕಾಲಿನಿಂದಲೇ ಕಾರಿನ ಡೋರ್ ಹಾಕಿ, ಹೆದ್ದಾರಿಯ ಫೆನ್ಸಿಂಗ್ ಹಾರಿ ಸರ್ವೀಸ್ ರಸ್ತೆಯಲ್ಲಿ ಪರಾರಿಯಾದ. ನನಗೆ ಡ್ರ್ಯಾಗನ್ ಹಿಡಿದಿದ್ದವನು ಕಾರಿನ ಕೀ ಕೊಟ್ಟು ಸ್ಟಾರ್ಟ್ ಮಾಡುವಂತೆ ಹೇಳಿದ. ನಾನು ಸ್ಟಾರ್ಟ್ ಮಾಡಿದ ಕೂಡಲೇ ಆತ ಕಾರಿನಿಂದಿಳಿದು ಎಲ್ಲಿಯೂ ನಿಲ್ಲಿಸಬಾರದು. ಇನ್ನೂ 50 ಕಿಮೀ ದೂರದವರೆಗೂ ನಮ್ಮ ಹುಡುಗರಿದ್ದಾರೆ. ಎಲ್ಲಾದರೂ ಕಾರು ನಿಲ್ಲಿಸಿದರೆ ನಿಮ್ಮ ಪ್ರಾಣ ತೆಗೆಯುತ್ತಾರೆ ಎಂದು ಬೆದರಿಸಿದ. ತುಂಬಾ ಭಯವಾಗಿದ್ದರಿಂದ ಕಾರು ಚಾಲಿಸಿಕೊಂಡು ಮೈಸೂರಿನ ಮಣಿಪಾಲ್ ಆಸ್ಪತ್ರೆ(ಹಿಂದಿನ ಕೊಲಂಬಿಯಾ ಏಷಿಯಾ ಆಸ್ಪತ್ರೆ) ಜಂಕ್ಷನ್ ಬಳಿ ನಿಲ್ಲಿಸಿಕೊಂಡು ಪೊಲೀಸರು ಹಾಗೂ ಸಂಬಂಧಿಕರಿಗೆ ವಿಷಯ ತಿಳಿಸಿದೆ. ಸೋಮವಾರ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆವು. ಪೊಲೀಸ್ ಅಧಿಕಾರಿಗಳು ಸ್ಥಳ ಮಹಜರು ನಡೆಸಿ, ಆರೋಪಿಗಳ ಪತ್ತೆ ಹಚ್ಚುವುದಾಗಿ ಭರವಸೆ ನೀಡಿ, ಸ್ಥೈರ್ಯ ತುಂಬಿ ಕಳುಹಿಸಿದರು' ಎಂದು ವಿವರಿಸಿದರು.

ಫೆನ್ಸಿಂಗ್ ಜಿಗಿದು ಬಂದಿರಬೇಕು: ನಾನು ಕಾರು ನಿಲ್ಲಿಸಿದ ಸ್ಥಳದಲ್ಲಿ ಸರ್ವೀಸ್ ರಸ್ತೆಯಲ್ಲಿ ಮುಚ್ಚಿದ ಅಂಗಡಿ, ಅದರ ಪಕ್ಕದಲ್ಲಿ ಸಿಮೆಂಟ್ ಇಟ್ಟಿಗೆ ಕಾರ್ಖಾನೆ ಇರುವುದನ್ನು ಗಮನಿಸಿದ್ದೆ. ನಾನು ಮೂತ್ರ ವಿಸರ್ಜನೆ ನಂತರ ಬಾಟಲ್ ನೀರಿನಲ್ಲಿ ಮುಖ ತೊಳೆಯುವಷ್ಟರಲ್ಲಿ ಇಬ್ಬರು ಖದೀಮರು ಪ್ರತ್ಯಕ್ಷವಾಗಿದ್ದರು. ಸರ್ವೀಸ್ ರಸ್ತೆ ಕಡೆಯಿಂದ ಫೆನ್ಸಿಂಗ್ ಜಿಗಿದು ಬಂದಿರಬೇಕು. ಒಬ್ಬ ಕುಳ್ಳಗೆ ದಪ್ಪವಾಗಿದ್ದರೆ ಮತ್ತೋರ್ವ ತೆಳ್ಳಗೆ ಉದ್ದವಾಗಿದ್ದ. ಇಬ್ಬರೂ ಜರ್ಕಿನ್ ಧರಿಸಿದ್ದರು. ಒಬ್ಬ ಡ್ರ್ಯಾಗನ್, ಮತ್ತೋರ್ವ ಚಾಕು ಹಿಡಿದುಕೊಂಡಿದ್ದ. ಕತ್ತಿಗೆ ಮಾರಕಾಸ್ತ್ರ ಇಟ್ಟು ಸಾಯಿಸಿಬಿಡುವುದಾಗಿ ಬೆದರಿಸಿದ್ದರಿಂದ ಕಿರುಚುವುದಕ್ಕೂ ಆಗಲಿಲ್ಲ. ಒಬ್ಬ ಕುಯ್ದುಬಿಡು ಎಂದು ಹೇಳುತ್ತಿದ್ದ. ಆ ಕ್ಷಣ ನೆನಪಿಸಿಕೊಂಡರೂ ಭಯವಾಗುತ್ತದೆ. ಜೀವ ಉಳಿದಿದ್ದೇ ಹೆಚ್ಚು ಎನ್ನಿಸುತ್ತದೆ ಎಂದು ಆ ದುಷ್ಟರಿಂದ ಬಚಾವಾಗಿ ಬಂದಿರುವ ಬಗ್ಗೆ ನಾಗರಾಜ್ ಆತಂಕದಿಂದಲೇ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಹೆದ್ದಾರಿ ದರೋಡೆಕೋರರ ಪತ್ತೆಗೆ ಬಲೆ ಬೀಸಿದ್ದಾರೆ.

ಡ್ರ್ಯಾಗರ್‌ನಿಂದ ಇರಿತ

ಫುಟೇಜ್‌ಗಳನ್ನು ಸಂಗ್ರಹಿಸಿದ್ದಾರೆ. ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರಪ್ರಸಾದ್ ಸಹ ಸ್ಥಳ ಪರಿಶೀಲಿ ಸಿದರಲ್ಲದೆ, ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳಿಂದ ಮಾಹಿತಿ ಪಡೆದರು. ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹಲ್ಲೆ ನಡೆಸಿ ತಲೆಮರೆಸಿಕೊಂಡಿರುವ ರಾಷ್ಟ್ರೀಯ ಶಿವಶಕ್ತಿ ಸೇನಾಪಡೆ ರಾಜ್ಯಾಧ್ಯಕ್ಷ ಎನ್ನಲಾದ ಆರೋಪಿ ಅನುಶಿವಪ್ಪನಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಹೊಟ್ಟೆ ಭಾಗದಲ್ಲಿ ಇರಿದ ಗಾಯಗಳಾಗಿರುವ ಸಂತೋಷ್ ಸ್ಥಿತಿ ಗಂಭೀರವಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ವೀರಶೈವ ಮುಖಂಡರು ಮೂಲೆಗುಂಪು

ಬಸವರಾಜ ಬೊಮ್ಮಾಯಿ ಕೂರಿಸಿ ಯಾರು ಆಡಳಿತ ಮತ್ತು ರಾಜಕೀಯ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಅವರ ಹೆಸರಲ್ಲಿ ಹಿಂಬಾಗಿಲಿನಿಂದ ಎಲ್ಲವನ್ನು ನಡೆಸುತ್ತಿದ್ದಾರೆ. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ತಕ್ಷಣ ಬಿಜೆಪಿ ಅವರನ್ನು ರಾಜಕೀಯವಾಗಿ ಮೂಲೆಗುಂಪು ಮಾಡಿದೆ. ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶದಲ್ಲಿ ಮಾಜಿ ಮುಖ್ಯ ಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಪ್ರಧಾನಿ ಅವರಿದ್ದ ವೇದಿಕೆ ಏರಲು ಬಿಡಲಿಲ್ಲ. ಇದೆಲ್ಲ ಏನನ್ನು ತೋರಿಸುತ್ತದೆ ಎಂದರು. ಡಿಎನ್‌ಎ ಬಗ್ಗೆ ಹೇಳಿಕೆ ನೀಡಿದ ನಂತರ ಬಿಜೆಪಿಯ ಕೆಲವು ನಾಯಕರು ಹೇಳಿಕೆ ಮೇಲೆ ಹೇಳಿಕೆ ನೀಡುತ್ತಿದ್ದಾರೆ. ಸಚಿವ ಅಶ್ವತ್ಥನಾರಾಯಣ ಅವರು, ಮತ ವಿಭಜನೆ ಆಗುವುದಿಲ್ಲ. ನಮ್ಮದು ಲೂಟಿ ಕುಟುಂಬ ಎಂದಿದ್ದಾರೆ. ನಾವಲ್ಲ, ಲೂಟಿ ಮಾಡುತ್ತಿರುವುದು ಇವರು. ಬಡ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದ ಬಿಎಂಎಸ್ ಶಿಕ್ಷಣ ಸಂಸ್ಥೆಯನ್ನು ಉದ್ದಿಮೆದಾರರಿಗೆ ಮಾರಾಟ ಮಾಡಿ ಅವರೊಂದಿಗೆ ಯಾವ ರೀತಿ ಭಕ್ಷ್ಯ ಭೋಜನ ಸೇವಿಸುತ್ತಿದ್ದಾರೆ ನೋಡಿ ಎಂದು ಕೆಲವು ಛಾಯಾಚಿತ್ರಗಳನ್ನು ಬಿಡುಗಡೆ ಮಾಡಿದರು. ಮುಂದಿನ ಚುನಾವಣೆಯಲ್ಲಿ ಲಿಂಗಾಯಿತ ಸಮುದಾಯದವರೇ ಬಿಜೆಪಿಯವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಹೇಳಿದರು.

ಆರ್‌ಎಸ್‌ಎಸ್‌ಗೆ ನುಂಗಲಾರದ ತುತ್ತು

ಆಧಾರದ ಮೇಲೆ ಎದುರಿಸುವ ನಿರ್ಧಾರ ಕೈಗೊಂಡಿದ್ದ ಬಿಜೆಪಿ ಪ್ರಮುಖ ಸಮುದಾಯಗಳನ್ನು ಹಿಡಿದಿಟ್ಟುಕೊಳ್ಳುವ ಯತ್ನ ಮಾಡಿತ್ತು. ಹಿಂದಿನ ಎಲ್ಲಾ ಚುನಾವಣೆಗಳಲ್ಲೂ ವೀರಶೈವ ಮುಖಂಡರನ್ನೇ ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದ ಬಿಜೆಪಿ ಸದಾನಂದಗೌಡರನ್ನು ಹೊರತುಪಡಿಸಿ, ಉಳಿದೆಲ್ಲ ಸನ್ನಿವೇಶದಲ್ಲೂ ಆ ಸಮುದಾಯದವರೇ ಮುಖ್ಯಮಂತ್ರಿಗಳಾಗಿದ್ದರು. ವೀರಶೈವ ಸಮುದಾಯ ಇಕ್ಕಳ ದಲ್ಲಿರುವ ಪಕ್ಷವನ್ನು ಹೊರತರಲು ಈ ಚುನಾವಣೆಯಲ್ಲಿ ಹಿಂದುತ್ವದ ಪ್ರಯೋಗ ಮಾಡಿದ್ದರು. ಬ್ರಾಹ್ಮಣ, ವೀರಶೈವ ಸೇರಿದಂತೆ ಪ್ರಮುಖ ಜನಾಂಗಗಳು ತಮ್ಮ ಕೈಬಿಡುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ಬಿಜೆಪಿ ನಾಯಕರಿಗೆ ಕುಮಾರಸ್ವಾಮಿ ಅವರ ಹೇಳಿಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಇವರ ಹೇಳಿಕೆಯಿಂದ ನಮ್ಮ ಮತಗಳು ಛಿದ್ರಗೊಳ್ಳುತ್ತವೆ ಎಂಬ ಆತಂಕ ಅವರಿಗೆ ಎದುರಾಗಿದೆ. ಕುಮಾರಸ್ವಾಮಿ ಬ್ರಾಹ್ಮಣ ಸಮುದಾಯಕ್ಕೆ ಪ್ರತಿ ಅಸ್ತ್ರ ಬಿಡಲು ಮುಖಂಡರ ಮೇಲಿಂದ ಮೇಲೆ ಸಭೆಗಳನ್ನು ನಡೆಸುತ್ತಿದ್ದಾರೆ. ಆದರೆ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ.

ಕಚೇರಿಯಲ್ಲಿ 'ಲಂಚ' ವ್ಯವಹಾರ

ಸದಸ್ಯರನ್ನಾಗಿ ನೇಮಿಸುವುದಕ್ಕಾಗಿ ಪ್ರಹ್ಲಾದ್ ಜೋಶಿಯವರ ಕಚೇರಿಯ ಸಿಬ್ಬಂದಿಗೆ ರೂ. 2.5 ಕೋಟಿ ಲಂಚ ಸಂದಾಯವಾಗಿದೆ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಜೋಶಿ ಅವರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜೀನೇಂದ್ರ ಕುಮಾರ್ ಎಂಬುವವರ ಬ್ಯಾಂಕ್ ಖಾತೆಗೆ 2021ರ ಜುಲೈನಲ್ಲಿ ರೂ. 2 ಕೋಟಿ ವರ್ಗಾವಣೆ ಮಾಡಲಾಗಿದೆ. ರೂ. 50 ಲಕ್ಷ ನಗದು ರೂಪದಲ್ಲಿ ನೀಡಲಾಗಿದೆ. ಹಣ ಪಡೆದು ಅವರನ್ನು ಎನ್‌ಎಂಸಿ ಸದಸ್ಯರನ್ನಾಗಿ ನೇಮಕ ಮಾಡಬೇಕೆಂಬ ಕೋರಿಕೆಯನ್ನು ಪರಿಗಣಿಸುವುದಾಗಿ ಆಗ ಕೇಂದ್ರ ಆರೋಗ್ಯ ಸಚಿವರಾಗಿದ್ದ ಡಾ.ಹರ್ಷವರ್ಧನ್ ಅವರು ಪ್ರಹ್ಲಾದ್ ಜೋಶಿಯವರಿಗೆ ಪತ್ರವನ್ನೂ ಬರೆದಿದ್ದರು ಎಂದು ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಕೇಂದ್ರ ಸಚಿವರ ಪತ್ರಗಳನ್ನು ತೋರಿಸಿದರು.

ಜೋಶಿ ಅವರು ನಮ್ಮ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡರ ಕುಟುಂಬದ ಕುರಿತು ಲಘುವಾಗಿ ಮಾತನಾಡಿದ್ದಾರೆ. ಅದರೆ, ಅವರ ಕಚೇರಿಯಲ್ಲೇ ಲಂಚದ ಕಳ್ಳ ವ್ಯವಹಾರ ನಡೆದಿರುವ ಕುರಿತು ಏನು ಹೇಳುತ್ತಾರೆ. ಅವರ ಕಚೇರಿಯಲ್ಲಿ ಏನು ನಡೆಯುತ್ತಿದೆ ಎನ್ನುವುದು ರಾಜ್ಯಕ್ಕೆ ಗೊತ್ತಾಗಬೇಕು. ಪರಿಶುದ್ಧರು ಎಂದು ಬೊಬ್ಬಿರಿದು ಹೇಳುವ ಅವರ ಕರ್ಮಕಾಂಡ ಇಲ್ಲಿದೆ. ಕೇಂದ್ರ ಸರ್ಕಾರದ ಹುದ್ದೆಗಳನ್ನು ಪ್ರಹ್ಲಾದ್ ಜೋಶಿಯವರ ಕಚೇರಿಯಲ್ಲಿ ಹಣಕ್ಕಾಗಿ ಬಿಕರಿಗಿಡಲಾಗಿದೆ ಎಂದು ಆರೋಪಿಸಿದರು. ಈ ಪ್ರಕರಣದ ಕುರಿತು ಉನ್ನತಮಟ್ಟದ ತನಿಖೆ ನಡೆಸಬೇಕು. ಹಣ ನೀಡಿದವರು ಮತ್ತು ಪಡೆದವರ ಬಯಲಾದ ರೂಪಾಯಿ ಹಗರಣದ ನಿಜವಾದ ಕಿಂಗ್‌ಪಿನ್ ಯಾರು ಎಂಬುದು ಪ್ರಹ್ಲಾದ್ ಜೋಶಿಯವರ ಪಾತ್ರ ಏನು ಎಂಬುದು ತನಿಖೆಯಿಂದ ಹೊರಬರಬೇಕು ಎಂದು ಆಗ್ರಹಿಸಿದರು.

ಆರಂಭದಲ್ಲಿ ಎನ್‌ಎಂಸಿ ಸದಸ್ಯರನ್ನಾಗಿ ನೇಮಿಸುವ ಅಮಿಷವೊಡ್ಡಿ ಹಣ ಪಡೆಯಲಾಗಿತ್ತು. ನಂತರ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರನ್ನಾಗಿ ಮಾಡುವ ಭರವಸೆ ನೀಡಲಾಗಿತ್ತು. ಕೇಂದ್ರ ಆರೋಗ್ಯ ಸಚಿವರು ಜೋಶಿಯವರಿಗೆ ಬರೆದಿರುವ ಪತ್ರಕ್ಕೂ ಹಗರಣಕ್ಕೂ ಇರುವ ನಂಟಿನ ಕುರಿತು ಕೂಡ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಡಿಕೆಶಿ ಕೈ ಮೇಲು

ಅದರ ಜೊತೆಗೆ ರಾಜ್ಯ ಘಟಕದಿಂದ ಡಾ. ಪರಮೇಶ್ವರ್ ಹಾಗೂ ಹರಿಪ್ರಸಾದ್ ಇವರ ಕೈ ಬಲಪಡಿಸುತ್ತಾರೆ. ಸಿದ್ದರಾಮಯ್ಯ ಅವರಿಗೆ ಎಂ.ಬಿ.ಪಾಟೀಲ್ ಹೊರತು ಪಡಿಸಿದರೆ, ಉಳಿದ ಸದಸ್ಯರು ಅಷ್ಟಕಷ್ಟೇ. ಹೀಗಾಗಿ ಸ್ಕ್ರೀನಿಂಗ್ ಕಮಿಟಿಯಲ್ಲೇ ಶಿವಕುಮಾರ್ ರಾಜಕೀಯ ಮಾಡಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ. ಕೆಪಿಸಿಸಿ ಚುನಾವಣಾ ಸಮಿತಿ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಿಂದ ಐದು ಆಕಾಂಕ್ಷಿಗಳ ಹೆಸರನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ. ಕೆಪಿಸಿಸಿ ಪಟ್ಟಿಯನ್ನು ಅಂತಿಮಗೊಳಿಸಲು ಮೋಹನ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ಎಐಸಿಸಿ ಸಮಿತಿ ನೇಮಕ ಮಾಡಿದೆ. ಸಮಿತಿ ಇದೇ 13ರಂದು ಸಭೆ ಸೇರಿ ವಿವಾದವಿಲ್ಲದ 100 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ, ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಫೆ.11ರಂದು ಮೈಸೂರಲ್ಲಿ ಲೋಕ ಅದಾಲತ್

● ಮೈಸೂರು ಕೋರ್ಟ್‌ನಲ್ಲಿ 1,11,492 ಪ್ರಕರಣ ಬಾಕಿ ● 34,739 ಪ್ರಕರಣ ಲೋಕ ಅದಾಲತ್‌ನಲ್ಲಿ ಇತ್ಯರ್ಥ ನಿರೀಕ್ಷೆ

ಮೈಸೂರು,ಫೆ.7(ಎಂಟಿವೈ)– ಇತ್ಯರ್ಥವಾಗದೇ ಬಾಕಿ ಉಳಿದಿರುವ ರಾಜಿಯಾಗಬಲ್ಲ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲು ಫೆ.11ರಂದು ಮೈಸೂರಿನ ನ್ಯಾಯಾಲಯಗಳಲ್ಲಿ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್.ಸಂಗ್ರೇಶಿ ತಿಳಿಸಿದ್ದಾರೆ.



ಮೈಸೂರಿನ ಮಳಲವಾಡಿ ನ್ಯಾಯಾಲಯದ ಸಭಾಂಗಣದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್.ಸಂಗ್ರೇಶಿ ಸುದ್ದಿಗೋಷ್ಠಿಯಲ್ಲಿ ಲೋಕ ಅದಾಲತ್ ಮಾಹಿತಿ ನೀಡಿದರು. ಚಿತ್ರದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅವರನ್ನು ಕಾಣಬಹುದು.

ಮೈಸೂರಿನ ಮಳಲವಾಡಿಯಲ್ಲಿರುವ ನ್ಯಾಯಾಲಯದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ನ್ಯಾಯಾಲಯಗಳಲ್ಲಿ ಇದುವರೆಗೆ 1,11,492 ಪ್ರಕರಣಗಳು ಬಾಕಿಯಿವೆ. ಅವುಗಳಲ್ಲಿ 59,872 ಸಿವಿಲ್ ಹಾಗೂ 62,403 ಕ್ರಿಮಿನಲ್ ಪ್ರಕರಣಗಳಾಗಿವೆ. ಇವುಗಳಲ್ಲಿ 34,739 ಪ್ರಕರಣಗಳು ಇತ್ಯರ್ಥವಾಗುವ ಸಾಧ್ಯತೆಯಿದೆ. ಈಗಾಗಲೇ 19,586 ರಾಜೀ ಪ್ರಕರಣಗಳ ಗುರುತಿಸಲಾಗಿದೆ ಎಂದರು.

ರಾಜೀಯಾಗಬಲ್ಲ ಪ್ರಕರಣಗಳು: ಮೋಟಾರು ವಾಹನ ಅಪಘಾತಕ್ಕೆ ಸಂಬಂಧಿಸಿದ 3949 ಪ್ರಕರಣಗಳು, ರಾಜೀಯಾಗಬಹುದಾದ 2,306 ಕ್ರಿಮಿನಲ್ ಪ್ರಕರಣಗಳು, 22,649 ಚೆಕ್ ಬೌನ್ಸ್ ಪ್ರಕರಣಗಳಲ್ಲಿ 5,077 ಹಾಗೂ ನ್ಯಾಯಾಲಯಗಳಲ್ಲಿ ದಾಖಲಾಗದೇ ಇರುವ ವ್ಯಾಜ್ಯ ಪೂರ್ವ 1,112 ಪ್ರಕರಣಗಳು, 7142 ರಾಜಿಯಾಗಬಹುದಾದ ಇತರೆ ಸಿವಿಲ್ ಕೇಸ್ ಸೇರಿದಂತೆ ಒಟ್ಟು 19,586 ಪ್ರಕರಣಗಳನ್ನು ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಲೋಕ ಅದಾಲತ್‌ನಿಂದ ವ್ಯಾಜ್ಯವನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ, ಕಾಲಮಿತಿಯೊಳಗೆ ಪರಿಹರಿಸಿಕೊಳ್ಳಬಹುದಾಗಿದೆ. ಅದಾಲತ್‌ನಲ್ಲಿ ರಾಜೀಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ನೀಡಿದ ಆದೇಶಕ್ಕೆ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸುವ ಪ್ರಕರಣದಲ್ಲಿ ನೀಡಿದ ಆದೇಶದಷ್ಟೇ ಮಹತ್ವ ಇರುತ್ತದೆ. ಸಮಯ ಉಳಿಯುವ ಜತೆಗೆ ಕಕ್ಷಿದಾರರ ಮಧ್ಯದ ಸಂಬಂಧ ಚೆನ್ನಾಗಿ ಉಳಿಯುತ್ತದೆ. ಯಾವುದೇ ಕೋರ್ಟ್ ಫೀ ಕಟ್ಟಬೇಕಿಲ್ಲ. ಪಕ್ಷಗಾರರು ನೇರವಾಗಿ ಭಾಗವಹಿಸಬಹುದು. ಪ್ರಕರಣ ರಾಜೀಯಾದಲ್ಲಿ ಶೇ.100ರಷ್ಟು ನ್ಯಾಯಾಲಯದ ಶುಲ್ಕ ಹಿಂದಿರುಗಿಸಲಾಗುವುದು. ಲೋಕ ಅದಾಲತ್ ಅವಾರ್ಡ್ (ಆದೇಶ) ವಿರುದ್ಧ ಮೇಲ್ಮನವಿಗೆ ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಇನ್ನು ಏಳು ನ್ಯಾಯಾಲಯದ ಅವಶ್ಯಕತೆ ಇದೆ: ಮೈಸೂರು ನಗರ ಹಾಗೂ ತಾಲೂಕು ಕೇಂದ್ರಗಳಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕಾಗಿ ಇನ್ನು 7 ನ್ಯಾಯಾಲಯಗಳ ಅವಶ್ಯಕತೆ ಇದೆ. ಒಂದು ಕೋರ್ಟ್‌ಗೆ 2 ಸಾವಿರಕ್ಕಿಂತ ಹೆಚ್ಚು ಪ್ರಕರಣಗಳಿದ್ದರೆ ಹೊಸ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ. ಮೈಸೂರಲ್ಲಿ ಹಿರಿಯ ಶ್ರೇಣಿಯ 3, ಕಿರಿಯ ಶ್ರೇಣಿಯ 3 ಹಾಗೂ 1 ಪೋಕ್ಸೋ ನ್ಯಾಯಾಲಯದ ಅವಶ್ಯಕತೆ ಇದ್ದು, ಅದರ ಸ್ಥಾಪನೆಗಾಗಿ ಪ್ರಸ್ತಾವನೆ ಸಲ್ಲಿಸಲು ಉದ್ದೇಶಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಶಿವಣ್ಣೇಗೌಡ ಇದ್ದರು.

ಶೇ.50ರಷ್ಟು ರಿಯಾಯಿತಿ ಪ್ರಭಾವ, 1.46 ಕೋಟಿ ದಂಡ ಸಂಗ್ರಹ

ಸಂಚಾರಿ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ವಾಹನ ಸವಾರರಿಗೆ ದಂಡ ಶುಲ್ಕದಲ್ಲಿ ಶೇ.50 ರಿಯಾಯಿತಿ ನೀಡಿರುವುದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 2019ರಿಂದ 2022ರ ನವೆಂಬರ್‌ವರೆಗೆ 25,51,048 ಇ–ಚಲನ್ ಪ್ರಕರಣಗಳಲ್ಲಿ 127,82,93,700 ರೂ. ದಂಡ ವಸೂಲಿಯಾಗಬೇಕಾಗಿತ್ತು. ಶೇ.50ರಷ್ಟು ರಿಯಾಯಿತಿ ಘೋಷಿಸಿದ್ದರಿಂದಾಗಿ ಫೆ.3ರಿಂದ ಫೆ.7ರ ರಾತ್ರಿ 10 ಗಂಟೆ ವೇಳೆಗೆ 69,419 ಪ್ರಕರಣ ಇತ್ಯರ್ಥಗೊಂಡಿದ್ದು, ಅವುಗಳಿಂದ 1,46,73,800 ರೂ. ಸಂಗ್ರಹವಾಗಿದೆ. ಇನ್ನು 24,81,629 ಪ್ರಕರಣಗಳಿದ್ದು, 126,36,19,900 ರೂ. ಸಂಗ್ರಹವಾಗಬೇಕಾಗಿದೆ. ಈ ರಿಯಾಯಿತಿ ಫೆ.11ರವರೆಗೆ ಚಾಲ್ತಿಯಲ್ಲಿದ್ದು, ವಾಹನ ಸವಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಅವಧಿ ಮುಗಿದ ಬಳಿಕ ಪೂರ್ಣ ದಂಡ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ಅಕ್ಷಯ ಪಾತ್ರ ಫೌಂಡೇಷನ್, ಎಂಟಿಆರ್ ಫುಡ್ಸ್ ಸಹಯೋಗದಲ್ಲಿ

ಮೈಸೂರು, ಹುಬ್ಬಳ್ಳಿಯ 13 ಸಾವಿರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ವಿಸ್ತರಣೆ

ಫೌಂಡೇಷನ್‌ನ ಉಪಾಧ್ಯಕ್ಷ ಕರುಣಾಸಾಗರ ದಾಸರಿಂದ ಚಾಲನೆ



ಮೈಸೂರು, ಫೆ.7(ಆರ್‌ಕೆಬಿ)– ಅಕ್ಷಯ ಪಾತ್ರ ಫೌಂಡೇಷನ್ ಮತ್ತು ಎಂಟಿಆರ್ ಫುಡ್ಸ್ ಸಹಯೋಗದಲ್ಲಿ ಪ್ರಧಾನಮಂತ್ರಿ ಪೋಷಣ್ (ಮಧ್ಯಾಹ್ನದ ಊಟ) ಕಾರ್ಯಕ್ರಮದಡಿ ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ 13 ಸಾವಿರ ಮಕ್ಕಳಿಗೆ 13 ಲಕ್ಷಕ್ಕೂ ಹೆಚ್ಚು ಊಟವನ್ನು ಒದಗಿಸುವ ಕಾರ್ಯಕ್ಕೆ ಮಂಗಳವಾರ ಮೈಸೂರಿನ ಕುಂಬಾರಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಕ್ಷಯಪಾತ್ರ ಫೌಂಡೇಷನ್‌ನ ಉಪಾಧ್ಯಕ್ಷ ಕರುಣಾಸಾಗರ ದಾಸ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಂಟಿಆರ್ ಫುಡ್ಸ್ ಮಾರಾಟ ಪ್ರಧಾನ ವ್ಯವಸ್ಥಾಪಕ ಆರ್.ಮೂರ್ತಿ, ಎಂಟಿಆರ್ ಫುಡ್ಸ್ ಕಂಪನಿಯು ತನ್ನ ಸಾಮಾಜಿಕ ಸಹಭಾಗಿತ್ವದಡಿ 2014ರಿಂದಲೇ ರಾಜ್ಯದಲ್ಲಿ 52 ಲಕ್ಷಕ್ಕೂ ಅಧಿಕ ಮಂದಿಗೆ ಮಧ್ಯಾಹ್ನದ ಊಟವನ್ನು ಆರಂಭಿಸಿತ್ತು. ಅದನ್ನು ಈಗ 'ನಮ್ಮ ಮಕ್ಕಳು– ನಮ್ಮ ಎಂಟಿಆರ್' ಘೋಷಣೆಯಡಿ ಮೈಸೂರು ಮತ್ತು ಹುಬ್ಬಳ್ಳಿಗೂ ವಿಸ್ತರಿಸಿದ್ದು, 13 ಸಾವಿರ ಮಕ್ಕಳಿಗೆ 13 ಲಕ್ಷ ಊಟ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎಂಟಿಆರ್ ಫುಡ್ಸ್ ಮುಖ್ಯ ವಾಣಿಜ್ಯ ಅಧಿಕಾರಿ ಸುನಯ್ ಭಾಸಿನ್, ಅಕ್ಷಯ ಪಾತ್ರ ಫೌಂಡೇಷನ್‌ನ ಉಸ್ತುವಾರಿ ಕೃಷ್ಣಕೇಶವದಾಸ, ಸಂವಹನ ಅಧಿಕಾರಿ ಅನಂತ್ ಅರೋರಾ, ಜಿಲ್ಲಾ ಶಿಕ್ಷಣಾಧಿಕಾರಿ ರೇವಣ್ಣ, ಶಾಲೆಯ ಮುಖ್ಯೋಪಾಧ್ಯಾಯ ವೈ.ಇಲೋಹಿತ್ ಇನ್ನಿತರರು ಉಪಸ್ಥಿತರಿದ್ದರು.

ವಿಧಾನಸಭಾ ಚುನಾವಣೆ ; ಎಲ್ಲಾ ಪಕ್ಷಗಳು ಮಡಿವಾಳ ಜನಾಂಗದವರಿಗೆ ಆದ್ಯತೆ ನೀಡಲು ಒತ್ತಾಯ



ಮೈಸೂರು,ಫೆ.7(ಪಿಎಂ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಮಡಿವಾಳ ಸಮುದಾಯದ ಅಭ್ಯರ್ಥಿಗಳು ಸ್ಪರ್ಧಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಮಡಿವಾಳರ ಜನಜಾಗೃತಿ ವೇದಿಕೆ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಕೆಂಪಶೆಟ್ಟಿ, ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ಕ್ಷೇತ್ರದಿಂದ ಸ್ಪರ್ಧಿಸಲು ಸಮುದಾಯದ ಹೆಚ್.ಎಂ.ಗೋಪಿಕೃಷ್ಣ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಬೇಕು. ಅಂತೆಯೇ ಸೊರಬ ಕ್ಷೇತ್ರದಲ್ಲಿ ರಾಜು ತಲ್ಲೂರ ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಅನುದಾನ ನೀಡಬೇಕು. ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಸಮುದಾಯದ ಮುಖಂಡರಾದ ಚೌಡಯ್ಯ, ಚಂದ್ರಶೇಖರ ಭೈರಿ, ಮಧು, ಕುಮಾರ್ ಗೋಷ್ಠಿಯಲ್ಲಿದ್ದರು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕ್ಷಮೆ ಕೇಳಬೇಕು



ಮೈಸೂರು,ಫೆ.7(ಪಿಎಂ)– ಬ್ರಾಹ್ಮಣ ಸಮುದಾಯವನ್ನು ನಿಂದಿಸಲೆಂದೇ ದುರುದ್ದೇಶಪೂರ್ವಕವಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಇದೀಗ ಉಲ್ಟಾ ಹೊಡೆಯುತ್ತಿದ್ದಾರೆ. ಅವರು ಈ ಕೂಡಲೇ ಬ್ರಾಹ್ಮಣ ಸಮುದಾಯದ ಕ್ಷಮೆ ಕೋರಬೇಕು ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕ ಎಂ.ಆರ್.ಬಾಲಕೃಷ್ಣ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರಿಗೆ ಕುಮಾರಸ್ವಾಮಿ ಜಾತಿ ನಿಂದನೆ ಮಾಡಿದ್ದಾರೆ. ಇದು ಇಡೀ ಬ್ರಾಹ್ಮಣ ಸಮುದಾಯಕ್ಕೆ ಮಾಡಿದ ಅವಮಾನ. ಪ್ರಹ್ಲಾದ್ ಜೋಶಿಯವರು ಎಂದೂ ಜಾತಿ ಆಧಾರದಲ್ಲಿ ಮತ ಯಾಚಿಸಿಲ್ಲ. ಕೂಡಲೇ ಕುಮಾರಸ್ವಾಮಿಯವರು ರಾಜ್ಯದ ಬ್ರಾಹ್ಮಣ ಸಮುದಾಯದಲ್ಲಿ ಕ್ಷಮೆ ಯಾಚಿಸಬೇಕು. ಇಲ್ಲವಾದರೆ ಸಮುದಾಯ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು. ವಿಪ್ರ ಮುಖಂಡರಾದ ಶ್ರೀನಿವಾಸ್, ನಾಗರಾಜು, ಕೃಷ್ಣ ಗೋಷ್ಠಿಯಲ್ಲಿದ್ದರು.

ರಾಜ್ಯ ಬಿಜೆಪಿ ಸರ್ಕಾರದಿಂದ ಹಿಂದುಳಿದ ವರ್ಗಗಳ ಸೌಲಭ್ಯ ಕಡಿತ; ಆರೋಪ



ಮೈಸೂರು,ಫೆ.7(ಪಿಎಂ)– ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಹಿಂದುಳಿದ ವರ್ಗಗಳಿಗೆ ದೊರೆಯುತ್ತಿದ್ದ ಸೌಲಭ್ಯಗಳನ್ನು ಕಡಿತಗೊಳಿಸುತ್ತಲೇ ಬರಲಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆರೋಪಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕಡಿಮೆ ಅನುದಾನ ನೀಡಲಾಗಿದೆ. ನಿಗಮದಿಂದ ಅನುಷ್ಠಾನಗೊಳ್ಳುವ ಗಂಗಾ ಕಲ್ಯಾಣ ಯೋಜನೆಯಡಿ 2021–22ನೇ ಸಾಲಿನಲ್ಲಿ ಒಂದೂ ಕೊಳವೆ ಬಾವಿ ಸಹ ಕೊರೆದಿಲ್ಲ. ನಿಗಮದ ಕಿರುಸಾಲ ಯೋಜನೆಯಡಿ 2021–22ನೇ ಸಾಲಿನಲ್ಲಿ ಒಬ್ಬರಿಗೂ ಸಾಲ ಮಂಜೂರು ಮಾಡಿಲ್ಲ ಎಂದು ದೂರಿದರು.

2022–23ನೇ ಸಾಲಿನಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಾಲಸೌಲಭ್ಯ ನೀಡುವಲ್ಲಿಯೂ ಇಳಿಮುಖವಾಗಿದೆ. ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2020–21 ಮತ್ತು 2021–22ನೇ ಸಾಲಿನಲ್ಲಿ ವಿದ್ಯಾರ್ಥಿವೇತನವನ್ನೇ ಕೊಟ್ಟಿಲ್ಲ. ಹಿಂದುಳಿದ ವರ್ಗಗಳ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕ್ರಮ ವಹಿಸಿಲ್ಲ ಎಂದು ಆರೋಪಿಸಿದರು.

ಈ ಎಲ್ಲಾ ಅಂಕಿ–ಅಂಶಗಳು ಸರ್ಕಾರದ್ದೇ ಆಗಿದ್ದು, ನಾವು ಆರ್‌ಟಿಐ ಮೂಲಕ ಪಡೆದಿದ್ದೇವೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಎಲ್ಲಾ ಯೋಜನೆಗಳಿಗೆ ಹೆಚ್ಚು ಅನುದಾನ ಮೀಸಲಿಡಬೇಕು ಎಂದು ಆಗ್ರಹಿಸಿದರು. ಹಿಂದುಳಿದ ವರ್ಗಗಳ ಮುಖಂಡರಾದ ಹೆಚ್.ಎಸ್.ಪ್ರಕಾಶ್, ಮೊಗಣ್ಣಾಚಾರ್, ಶೋಭಾ ಹನೂರು ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಯಕ ಜಾತಿ ಪ್ರಮಾಣ ಪತ್ರ ತಕರಾರು: ಇಂದು ಸಭೆ

ಮೈಸೂರು, ಫೆ7(ಎಂಟಿವೈ)– ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ನಾಳೆ(ಫೆ.8) ಬೆಳಗ್ಗೆ 11 ಗಂಟೆಗೆ ನಾಯಕ ಜಾತಿ ಪ್ರಮಾಣ ಪತ್ರ ಪಡೆದಿರುವ ಸಂಬಂಧ ದಾಖಲಾದ 12 ಪ್ರಕರಣಗಳ ಇತ್ಯರ್ಥಕ್ಕೆ ಮಹತ್ತರ ಸಭೆ ನಡೆಯಲಿದೆ.

ಸುಳ್ಳು ಮಾಹಿತಿ ನೀಡಿ ನಾಯಕ ಜನಾಂಗದ ಜಾತಿ ಪ್ರಮಾಣ ಪತ್ರ ಪಡೆದು ವಿವಿಧ ಸವಲತ್ತು ಹಾಗೂ ಅಧಿಕಾರ ಪಡೆದಿದ್ದಾರೆ ಎಂದು ಸುಭಾಷ್ ಬಿನ್ ಚಾಮಯ್ಯ ಎಂಬುವವರು ದಾಖಲಿಸಿದ್ದ 6 ಪ್ರಕರಣ ಒಳಗೊಂಡಂತೆ ಒಟ್ಟು 12 ಪ್ರಕರಣಗಳ ವಿಚಾರಣೆ ನಡೆಯಲಿದೆ. ಜಿಲ್ಲೆಯಲ್ಲಿ ದಾಖಲಾಗಿರುವ ಒಟ್ಟು 52 ಪ್ರಕರಣಗಳಲ್ಲಿ ನಾಳೆ 12 ಪ್ರಕರಣಗಳ ಕೈಗೆತ್ತಿಕೊಳ್ಳಲಾಗಿದೆ ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಜಿ.ಪಂ ಉಪ ಕಾರ್ಯದರ್ಶಿ, ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರು, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಯಾರ ಪ್ರಕರಣಗಳು: ನಾಳೆ ನಡೆಯುವ ಪ್ರಕರಣದಲ್ಲಿ ಮೇಯರ್ ಶಿವಕುಮಾರ್, ಕರಿನಾಯಕ ಕೆ.ಆರ್.ನಗರ, ಅಪ್ಪಣ್ಣ, ದೇವರಾಜ್ ಟಿ ಕಾಟೂರ್, ಪಡುವಾರಹಳ್ಳಿ ರಾಮಕೃಷ್ಣ, ಮಾಜಿ ಶಾಸಕ ದಿ.ಚಿಕ್ಕಮಾದು ಅವರ ಮಕ್ಕಳು ಮತ್ತು ಅಣ್ಣನ ಮಕ್ಕಳಿಗೆ ಸಂಬಂಧಿಸಿದ ಪ್ರಕರಣ, ಶ್ರೀಧರ್‌ನಾಯಕ, ಸುವರ್ಣ, ಸ್ವಾಮಿ ನಾಯಕ, ರಾಮ ನಾಯಕ, ಭರತ್ ಕುಮಾರ್, ಶರತ್‌ಕುಮಾರ್, ಹಾಗೂ ಕೆಂಪಸಿದ್ದನಾಯಕ ಎಂಬುವರ ವಿರುದ್ಧ ಜಾತಿ ಪ್ರಮಾಣ ಪತ್ರ ಪಡೆದಿರುವುದಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣ ವಿಚಾರಣೆ ನಡೆಯಲಿದೆ. ಪರಿವಾರ ಪಂಗಡವಾಗಿದ್ದರೂ ನಾಯಕ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ. ಇವರು ಉದ್ಯೋಗ ಮತ್ತು ಚುನಾವಣೆಗೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರ ತೆಗೆದುಕೊಂಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿಪ್ರರ ನಿಂದಿಸಿಲ್ಲ

ಮೈಸೂರು,ಫೆ.7(ಪಿಎಂ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಬ್ರಾಹ್ಮಣ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿಲ್ಲ. ಅವರು ವ್ಯಕ್ತಿಗತವಾಗಿ ಟೀಕಿಸಿರುವುದನ್ನು ರಾಜಕೀಯ ದುರುದ್ದೇಶಕ್ಕಾಗಿ ತಿರುಚಲಾಗಿದೆ ಎಂದು ವಿಪ್ರ ಯುವ ಮಹಾಸಭಾದ ಸದಸ್ಯ ಮತ್ತು ಜೆಡಿಎಸ್ ಯುವ ಘಟಕದ ಕಾರ್ಯಾಧ್ಯಕ್ಷ ಪ್ರಶಾಂತ್ ಹೇಳಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸ್ಥಾಪಿಸಿದರು. ಬ್ರಾಹ್ಮಣ ಸಮುದಾಯದ ಬಗ್ಗೆ ಅವರು ಅಪಾರ ಗೌರವ ಹೊಂದಿದ್ದಾರೆ. ಅವರು ಬ್ರಾಹ್ಮಣ ಸಮುದಾಯ, ಮಠಗಳ ಬಗ್ಗೆ ಅಹವೇಳನ ಮಾಡಿಲ್ಲ. ಆದರೂ ಸುಳ್ಳು ವದಂತಿ ಹಬ್ಬಿಸಲಾಗುತ್ತಿದ್ದು, ಇದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೆಆರ್‌ಎಸ್ ಗ್ರಾಪಂ ಸದಸ್ಯ ಮತ್ತು ವಿಪ್ರ ಮುಖಂಡ ವಿಜಯ್‌ಕುಮಾರ್, ವಿಪ್ರ ಮುಖಂಡ ಮಿರ್ಲೆ ಫಣೀಶ್ ಗೋಷ್ಠಿಯಲ್ಲಿದ್ದರು.

ಫೆ.11ರಂದು 'ಇಲ್ಯೂಮಿನೇಟ್' ; ವಿಜ್ಞಾನ, ತಂತ್ರಜ್ಞಾನ ಕುರಿತ ಕಾರ್ಯಕ್ರಮ

ಇಸ್ರೋ ಮಾಜಿ ವಿಜ್ಞಾನಿ ಡಾ.ಮೈಲ್‌ಸ್ವಾಮಿ ಅಣ್ಣಾದುರೈ, ವಂದೇ ಭಾರತ್ ಎಕ್ಸ್‌ಪ್ರೆಸ್ ಆವಿಷ್ಕಾರಕ ಸುಧಾಂಶು ಮಣಿ ಭಾಗಿ



ಮೈಸೂರು,ಫೆ.7(ಪಿಎಂ)– ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ಪ್ರಮುಖ ಸಾಧನೆಗಳ ಮೇಲೆ ಬೆಳಕು ಚೆಲ್ಲಲು 'ಇಲ್ಯೂಮಿನೇಟ್' ಶೀರ್ಷಿಕೆಯಡಿ ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ (ಎಲ್‌ಟಿಟಿಎಸ್) ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು (ಎನ್‌ಐಇ) ಜಂಟಿ ಆಶ್ರಯದಲ್ಲಿ ಆರಂಭಿಸಿರುವ ಮೊದಲ ಆವೃತ್ತಿಯ ತಜ್ಞರ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ಫೆ.11ರಂದು ನಡೆಯಲಿದೆ.

'ಮೂನ್ ಮ್ಯಾನ್ ಆಫ್ ಇಂಡಿಯಾ' ಖ್ಯಾತನಾಮರಾದ ಇಸ್ರೋ ಮಾಜಿ ವಿಜ್ಞಾನಿ ಪದ್ಮಶ್ರೀ ಪುರಸ್ಕೃತ ಡಾ.ಮೈಲ್‌ಸ್ವಾಮಿ ಅಣ್ಣಾದುರೈ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ಆವಿಷ್ಕಾರಕ ಸುಧಾಂಶು ಮಣಿ ಈ ಕಾರ್ಯಕ್ರಮದ ಉದ್ಘಾಟನಾ ಆವೃತ್ತಿಯಲ್ಲಿ ಪ್ರಮುಖ ಭಾಷಣ ಮಾಡಲಿದ್ದಾರೆ. ಮುಕ್ತ ಗಂಗೋತ್ರಿಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಅಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1ರವರೆಗೆ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಈ ವಿಷಯ ತಿಳಿಸಿದ ಎನ್‌ಐಇ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಎಂ.ಎಸ್.ಗಣೇಶ್ ಪ್ರಸಾದ್, ಇಂಜಿನಿಯರಿಂಗ್ ಕ್ಷೇತ್ರದ ಶೈಕ್ಷಣಿಕ ಸಂಸ್ಥೆ ಮತ್ತು ಉದ್ಯಮ ಎರಡೂ ಸೇರಿ ಆಯೋಜಿಸುತ್ತಿರುವ ಈ ಕಾರ್ಯಕ್ರಮವು ಕ್ಷೇತ್ರದಲ್ಲಿನ ತಜ್ಞರು ತಮ್ಮ ಅನುಭವ ಹಂಚಿಕೊಳ್ಳುವ ಜೊತೆಗೆ ಕ್ಷೇತ್ರದಲ್ಲಿನ ನೂತನ ಪ್ರವೃತ್ತಿಗಳನ್ನು ಪರಿಚಯಿಸಲು ವೇದಿಕೆಯಾಗಲಿದೆ ಎಂದು ತಿಳಿಸಿದರು.

ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಜಾಗತಿಕವಾಗಿ ಸಾಧನೆಗೈಯುತ್ತಿರುವ ಪ್ರಮುಖರಿಂದ ತಾಂತ್ರಿಕ ವಿಚಾರಗಳನ್ನು ಅನಾವರಣಗೊಳಿಸಲು ಇದು ಉತ್ತಮ ಕಾರ್ಯಕ್ರಮವಾಗಲಿದೆ. ಡಾ.ಮೈಲ್‌ಸ್ವಾಮಿ ಅಣ್ಣಾದೊರೈ ಅವರು ತಮಿಳುನಾಡು ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಂದ್ರಯಾನ–1 ಮತ್ತು ಮಂಗಳಯಾನ ಅಭಿಯಾನಕ್ಕೆ ಚಾಲನೆ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅವರ 36 ವರ್ಷಗಳ ವೃತ್ತಿಜೀವನದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆಗೆ ಪಾತ್ರರಾದ ವಿಜ್ಞಾನಿಯಾಗಿ ಹೊರಹೊಮ್ಮಿದ್ದಾರೆ ಎಂದು ಹೇಳಿದರು.



ಡಾ.ಮೈಲ್‌ಸ್ವಾಮಿ ಸುಧಾಂಶು ಮಣಿ

ಸುಧಾಂಶು ಮಣಿಯವರು ಇತ್ತೀಚೆಗೆ ಚಾಲನೆ ಪಡೆದಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ವಿನ್ಯಾಸದ ಮೆದುಳು. ಇವರು ಭಾರತೀಯ ರೈಲ್ವೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಅಂದು 'ಇಲ್ಯೂಮಿನೇಟ್' ಕಾರ್ಯಕ್ರಮದಲ್ಲಿ ಆಸಕ್ತರು ಉಚಿತವಾಗಿ ಪಾಲ್ಗೊಳ್ಳಲು ಅವಕಾಶವಿದೆ. ಆನ್‌ಲೈನ್ (https://www.ltts.com/events/Illuminate?utm_source=QR&utm_medium=Email&utm_campaign=Illuminate) ಮೂಲಕವೂ ನೋಂದಣಿ ಮಾಡಿಕೊಳ್ಳಬಹುದು ಅಥವಾ ಸ್ಥಳದಲ್ಲಿಯೂ ನೋಂದಣಿಗೆ ಅವಕಾಶವಿದೆ. ಅಲ್ಲದೆ, ಕಾರ್ಯಕ್ರಮ ನೇರ ಪ್ರಸಾರ ಕೂಡ ಇರಲಿದೆ (Here is the streaming link https://www.youtube.com/watch?v=P7LNu2pCOlg) ಎಂದರು.

ಎನ್‌ಐಇ ಕಾಲೇಜಿನ ತರಬೇತಿ ಮತ್ತು ಉದ್ಯೋಗಾಧಿಕಾರಿ ಹರ್ಷಿತ್ ದಿವಾಕರ್, ಸಾರ್ವಜನಿಕ ಸಂಪರ್ಕಾಧಿಕಾರಿ ಎಸ್.ಆರ್. ಗಾಯಕ್ವಾಡ್, ಎಲ್‌ಟಿಟಿಎಸ್ ಮೈಸೂರು ಸೆಂಟರ್ ಮುಖ್ಯಸ್ಥ ಶಶಿಧರ ಡೋಂಗ್ರೆ, ವಿತರಣಾ ವಿಭಾಗದ ಮುಖ್ಯಸ್ಥ ಕಾರ್ತಿಕೇಯನ್, ಸಂಸ್ಥೆ ನೌಕರ ಅನಿರುದ್ಧ ಬಸು ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ವೈಭವದ ಶ್ರೀ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ

ಬೆಟ್ಟದಪುರ, ಫೆ.7– ಇತಿಹಾಸ ಪ್ರಸಿದ್ಧ ಬೆಟ್ಟದಪುರದ ಭ್ರಮರಾಂಬ ಸಮೇತ ಶ್ರೀ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಮಂಗಳವಾರ ವೈಭವದಿಂದ ನಡೆಯಿತು.

ಶಾಸಕ ಕೆ.ಮಹದೇವ್ ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಬಗೆ ಬಗೆಯ ಹೂಗಳಿಂದ ಅಲಂಕೃತಗೊಂಡ ರಥದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಬಸವೇಶ್ವರ, ವಿಘ್ನೇಶ್ವರ ಹಾಗೂ ಶಿಡ್ಲು ಮಲ್ಲಿಕಾರ್ಜುನಸ್ವಾಮಿಗೆ ಜೈಕಾರ ಹಾಕುವ ಮೂಲಕ ರಥಗಳನ್ನು ಎಳೆದು ಪುನೀತರಾದರು. ರಥೋತ್ಸವ ವೇಳೆ ರಸ್ತೆ ಬದಿಯಲ್ಲಿ ನೆರೆದಿದ್ದ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹಣ್ಣು-ಜವನ ಎಸೆದು ಪ್ರಾರ್ಥನೆ ಸಲ್ಲಿಸಿದರು. ದೇವಾಲಯದ ಆವರಣದಿಂದ ಆರಂಭವಾದ ರಥೋತ್ಸವ ರಥದ ಬೀದಿಯಲ್ಲಿ ಸಾಗಿ ಬೆಟ್ಟದ ಹೆಬ್ಬಾಗಿಲು ತಲುಪಿತ್ತು. ಬಳಿಕ ಅಲ್ಲಿ ಬಸವೇಶ್ವರ, ಮಲ್ಲಿಕಾರ್ಜುನಸ್ವಾಮಿ ಹಾಗೂ ವಿಘ್ನೇಶ್ವರನಿಗೆ ಸಂಜೆವರೆಗೂ ಪೂಜೆ ಸಲ್ಲಿಸಲಾಯಿತು.



ರಥೋತ್ಸವ ಅಂಗವಾಗಿ ಗ್ರಾಮದ ಬೀದಿಗಳನ್ನು ಬಣ್ಣ ಬಣ್ಣದ ರಂಗೋಲೆ ಹಾಗೂ ತಳಿರು ತೋರಣ ಕಟ್ಟಿ ಸಿಂಗರಿಸಲಾಗಿತ್ತು. ಅಲ್ಲದೇ ಮುಂಜಾನೆಯಿಂದಲೇ ದೇವಾಲಯದಲ್ಲಿ ದೇವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಅಲ್ಲದೇ ರಥೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು.

ಈ ವೇಳೆ ಶಾಸಕ ಕೆ.ಮಹದೇವ್ ಮಾತನಾಡಿ, ಕೊರೊನಾ ಹಿನ್ನಲೆಯಲ್ಲಿ ಕಳೆದ 2 ವರ್ಷಗಳಿಂದ ರಥೋತ್ಸವವನ್ನು ಸರಳವಾಗಿ ಆಚರಿಸಲಾಗಿತ್ತು. ಈ ವರ್ಷ ಜಿಲ್ಲಾಡಳಿತದ ಅನುಮತಿ ಮೇರೆಗೆ ಅದ್ಧೂರಿಯಾಗಿ ರಥೋತ್ಸವ ನಡೆಸಲಾಗಿದೆ. ದೇವರು ಎಲ್ಲರಿಗೂ ಒಳ್ಳೆಯದು ಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಗಿದೆ ಎಂದರು.

ಬೆಟ್ಟ ಹತ್ತಿದ ಭಕ್ತರು: ಬೆಳಗ್ಗೆಯಿಂದ ಸಂಜೆವರೆಗೆ ಶ್ರೀ ಶಿಡ್ಲು ಮಲ್ಲಿಕಾರ್ಜುನ ಬೆಟ್ಟವನ್ನು ಸಾವಿರಾರು ಭಕ್ತರು ಹತ್ತಿ, ಬೆಟ್ಟದ ಮೇಲಿರುವ ಶ್ರೀ ಶಿಡ್ಲು ಮಲ್ಲಿಕಾರ್ಜುನ ದೇವರ ದರ್ಶನ ಪಡೆದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬೆಟ್ಟದಪುರ ಹಾಗೂ ಬೈಲಕುಪ್ಪೆ ಠಾಣೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.


ಈ ಸಂದರ್ಭ ಮಾಜಿ ಸಚಿವ ವಿಜಯ್‌ಶಂಕರ್, ಕೌಲನಹಳ್ಳಿ ಸೋಮಶೇಖರ್, ತಹಸೀಲ್ದಾರ್ ಯದುಗಿರೀಶ್, ಉಪ ತಹಸೀಲ್ದಾರ್ ಶಶಿಧರ್, ಕಂದಾಯ ನಿರೀಕ್ಷಕ ಆನಂದ್, ಬೆಟ್ಟದಪುರ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಪಿಡಿಓ ದಿವಾಕರ್, ಎಸ್‌ಐ ಪ್ರಕಾಶ್ ಎಂ.ಎತ್ತಿನಮನಿ, ಬೈಲುಕುಪ್ಪೆ ಪೊಲೀಸ್ ಠಾಣೆ ಎಸ್‌ಐ ಬಸವರಾಜು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಪೂಜಾ ಸೇರಿದಂತೆ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಭಕ್ತರಿದ್ದರು.

ಗಿರಿಜಾ ಕಲ್ಯಾಣ: ಬ್ರಹ್ಮರಥೋತ್ಸವದ ಅಂಗವಾಗಿ ಸೋಮವಾರ ರಾತ್ರಿ ಗಿರಿಜಾ ಕಲ್ಯಾಣೋತ್ಸವ ಪ್ರಧಾನ ಅರ್ಚಕ ಸತೀಶ್ ಕಶ್ಯಪ್ ಹಾಗೂ ಪ್ರಭಾಶಂಕರ್ ನೇತೃತ್ವದಲ್ಲಿ ಅದ್ಧೂರಿಯಾಗಿ ಜರುಗಿತು.

ಬಿಜೆಪಿ ಅಧಿಕಾರಕ್ಕೆ ಬಂದರೆ ಬ್ರಾಹ್ಮಣ ಸಮುದಾಯದವರು ಸಿಎಂ ಎಂಬ

ಮಾಜಿ ಸಿಎಂ ಕುಮಾರಸ್ವಾಮಿ ಹೇಳಿಕೆ ಖಂಡನೀಯ

ತಿ.ನರಸೀಪುರ, ಫೆ.7– ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಬ್ರಾಹ್ಮಣ ಸಮುದಾಯದವರು ಸಿಎಂ ಆಗುತ್ತಾರೆ ಎಂಬ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿಕೆ ಖಂಡನೀಯ ಎಂದು ಬಿಜೆಪಿ ಮುಖಂಡ ತೋಟದಪ್ಪ ಬಸವರಾಜು ತಿಳಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿಯವರ ಅಸಂಬದ್ಧ ಹೇಳಿಕೆ ಜಾತಿ ಆಧಾರದ ಹೇಳಿಕೆಯಾಗಿದ್ದು ಅವರ ಪಕ್ಷದ 'ಜಾತ್ಯತೀತ ದಳ' ಹೆಸರನ್ನು ಬದಲಾಯಿಸಿ 'ಜಾತಿ ಕುಟುಂಬದ ಪಕ್ಷ' ಎಂದು ಹೆಸರಿಡುವುದು ಒಳಿತು ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್‌ನವರು ಜೆಡಿಎಸ್ 25 ಸೀಟಿಗಿಂತ ಹೆಚ್ಚಿಗೆ ಬರುವುದಿಲ್ಲ ಎಂದರೇ, ಜೆಡಿಎಸ್‌ನವರು ಕಾಂಗ್ರೆಸ್ 49 ಸೀಟಿಗಿಂತ ಹೆಚ್ಚಿಗೆ ಬರುವುದಿಲ್ಲ ಎಂದು ಹೇಳಿಕೆ ನೀಡುತ್ತಿದ್ದಾರೆ. ಅಂದರೆ ಈ ಬಾರಿ ಬಿಜೆಪಿಗೆ 150 ಸೀಟ್ ಗ್ಯಾರಂಟಿ ಎಂಬುದು ಎರಡೂ ಪಕ್ಷಗಳಿಗೆ ಮನದಟ್ಟಾಗಿರುವುದರಿಂದ ಹತಾಶ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಕಳೆದ ಬಾರಿ ಸಿದ್ದರಾಮಯ್ಯ ವೀರಶೈವ ಲಿಂಗಾಯತರನ್ನು ಬೇರ್ಪಡಿಸಲು ಹೋಗಿ ಮಣ್ಣು ಮುಕ್ಕಿದರು. ಹಾಗೆಯೇ ಈ ಬಾರಿ ಕುಮಾರಸ್ವಾಮಿ ಬ್ರಾಹ್ಮಣ ಸಿಎಂ ಹೇಳಿಕೆ ಮೂಲಕ ಸಮಸ್ತ ಹಿಂದೂ ಸಮಾಜ ಬೇರ್ಪಡಿಸಲು ಹೊರಟಿದ್ದಾರೆ. ಇಂತಹ ಸಮಾಜ ಘಾತಕ ಹೇಳಿಕೆ ಮೂಲಕ ರಾಜಕೀಯ ಮಾಡಲೊರಟಿರುವುದು ಜನರಿಗೆ ಹೇಸಿಗೆ ಹುಟ್ಟಿಸುತ್ತಿದೆ ಎಂದರು. ಜೆಡಿಎಸ್ ಅಧಿಕಾರಕ್ಕೆ ಬಂದರೆ ಮುಸ್ಲಿಮರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎನ್ನುವ ಬದಲು ಸಿ.ಎಂ.ಇಬ್ರಾಹಿಂ ಅವರನ್ನು ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ ಎಂದು ಸವಾಲು ಹಾಕಿದರು. ಪ್ರಧಾನಿ ಮೋದಿ ನೇತೃತ್ವದಲ್ಲಿ ವಿಶ್ವ ಮೆಚ್ಚುವ ರೀತಿ ಭಾರತ ಸಾಗುತ್ತಿರುವುದು ವಿಪಕ್ಷಗಳಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಜಾತಿ ಜಾತಿಯನ್ನು ಎತ್ತಿಕಟ್ಟಿ ಸಮಾಜ ಒಡೆಯಲು ಹೊರಟಿದ್ದಾರೆ. ಇಂತಹ ವಿರೋಧ ಪಕ್ಷಗಳಿಗೆ ರಾಜ್ಯದ ಜನತೆ ಈ ಬಾರಿ ಪಾಠ ಕಲಿಸಲಿದ್ದಾರೆ ಎಂದರು.



ಹುಣಸೂರಿನ ತಮ್ಮ ಕಚೇರಿಯಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ನೀಡಲಾದ 1ರಿಂದ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 150 ಕಾರ್ಮಿಕರ ಮಕ್ಕಳಿಗೆ ಟಿಫನ್ ಬಾಕ್ಸ್, ಫ್ಲಾಸ್ಕ್, ಪೇಂಟಿಂಗ್ ಬಾಕ್ಸ್, ಶಾಲಾ ಬ್ಯಾಗ್ ಇರುವ ಕಿಟ್ ಅನ್ನು ಶಾಸಕ ಹೆಚ್.ಪಿ.ಮಂಜುನಾಥ್ ವಿತರಿಸಿದರು.

ರಸ್ತೆ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಹೆಚ್.ಡಿ.ಕೋಟೆ, ಫೆ.7– ಸರ್ಕಾರದಿಂದ ಸಾಕಷ್ಟು ಅನುದಾನ ತಂದು ಕೋಟೆ ಹಾಗೂ ಸರಗೂರು ತಾಲೂಕುಗಳಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಹೆಬ್ಬಲಕುಪ್ಪೆ ಗ್ರಾಮದಲ್ಲಿ 34 ಲಕ್ಷ ರೂ. ವೆಚ್ಚದ ಗ್ರಾಮದ ಮುಖ್ಯರಸ್ತೆ ಡಾಂಬರೀಕರಣ ಹಾಗೂ ರೈತರ ಜಮೀನುಗಳಿಗೆ ನೀರು ಹರಿಸಲು 99 ಲಕ್ಷ ವೆಚ್ಚದ ಆಕ್ವಡೆಕ್ ಕೆನಾಲ್ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಇಲ್ಲದಿದ್ದರೂ, ಸರ್ಕಾರದಿಂದ ಸಾಕಷ್ಟು ಅನುದಾನ ತಂದು ಕೋಟೆ, ಸರಗೂರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ ಎಂದರು.

ಹೆಬ್ಬಲಗುಪ್ಪೆ ಗ್ರಾಮವನ್ನು 14 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ತಾಲೂಕಿನ ಗ್ರಾಮಗಳನ್ನು ಅಭಿವೃದ್ಧಿಪಡಿಸುವುದೇ ನನ್ನ ಮುಖ್ಯ ಗುರಿ ಎಂದರು.

ತಾಲೂಕಿನ ಜನತೆ ನನ್ನ ತಂದೆ ಮಾಜಿ ಶಾಸಕ ದಿವಂಗತ ಚಿಕ್ಕಮಾದು ಅವರಿಗೆ ನೀಡುತ್ತಿದ್ದ ಪ್ರೀತಿ, ವಿಶ್ವಾಸದ 2 ಪಟ್ಟು ನನಗೆ ನೀಡಿದ್ದೀರಾ. ನಿಮ್ಮ ಪ್ರೀತಿ, ವಿಶ್ವಾಸಕ್ಕೆ ನಾನು ಚಿರಋಣಿ. ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಶೇ.80 ರಷ್ಟು ತಾಲೂಕಿನ ಅಭಿವೃದ್ಧಿ ಕೈಗೊಂಡಿದ್ದೇನೆ. ಹೆಚ್ಚಿನ ಅಭಿವೃದ್ಧಿ ಮಾಡಲು ಎಲ್ಲರೂ ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ನನಗೆ ಅವಕಾಶ ಮಾಡಿ ಕೊಡಬೇಕು ಎಂದು ಮನವಿ ಮಾಡಿದರು. ಎನ್. ಬೆಳತ್ತೂರು ಗ್ರಾಮದಲ್ಲಿ 22 ಲಕ್ಷ ವೆಚ್ಚದ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಚಿಕ್ಕಮ್ಮ, ಉಪಾಧ್ಯಕ್ಷ ನಂಜುಂಡಸ್ವಾಮಿ, ಸದಸ್ಯರಾದ ಗೋವಿಂದರಾಜು, ಮಹೇಶ್, ಶಿವಲಿಂಗೇಗೌಡ, ರಾಜು, ಪ್ರಭಾಕರ್, ಪುಷ್ಪ, ಕಲ್ಪನಾ, ಸವಿತಾ, ಶಾರದಾ, ರೇಣುಕಾ, ಭಾಗ್ಯಮ್ಮ, ಕುಮಾರಿ, ತಮ್ಮನಾಯಕ, ಮುಖಂಡರಾದ ಗೋವಿಂದಶೆಟ್ಟಿ, ಕರಿಯಯ್ಯ, ಶಿವಣ್ಣ, ಶಿವರಾಜು, ನಾಗರಾಜು, ಮಂಜು, ನಾಗರಾಜ್‌ಶೆಟ್ಟಿ, ನಾಗೇಶ್, ಬಾಲರಾಜು, ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್, ಸಹಾಯಕ ಇಂಜಿನಿಯರ್ ವಿಶ್ವನಾಥ್ ಇನ್ನಿತರರಿದ್ದರು.

ವಿಜೃಂಭಣೆಯ ಶ್ರೀ ಮಹದೇಶ್ವರಸ್ವಾಮಿ ಕೊಂಡೋತ್ಸವ

ಸರಗೂರು, ಫೆ.7– ತಾಲೂಕಿನ ನಿಲುವಾಗಿಲು, ತುಂಬಸೋಗೆ ಗ್ರಾಮದಲ್ಲಿರುವ ನಿಲುವಾಗಿಲು ಶ್ರೀಮಹದೇಶ್ವರಸ್ವಾಮಿ ದನಗಳ ಜಾತ್ರಾ ಮಹೋತ್ಸವ ಅಂಗವಾಗಿ ಮಹದೇಶ್ವರ ಕೊಂಡೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು.



ಕಪಿಲಾ ನದಿ ದಡದಲ್ಲಿರುವ ದೇವಸ್ಥಾನವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. 3 ದಿನ ನಡೆಯುವ ಜಾತ್ರಾ ಮಹೋತ್ಸವ ಅಂಗವಾಗಿ ಕಪಿಲಾ ನದಿಗೆ ಮಹದೇಶ್ವರ ದೇವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಬಳಿಕ ಅಲ್ಲಿ ಹೋಮ-ಹವನ, ರುದ್ರಾಭಿಷೇಕ ನಡೆಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಮತ್ತೆ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆಯಲ್ಲಿ ದೇವಾಲಯಕ್ಕೆ ಕರೆತರಲಾಯಿತು.

ಈ ವೇಳೆ ಮಹದೇಶ್ವರರ ಉತ್ಸವಮೂರ್ತಿ ಬರುವಾಗ ದಾರಿಯುದ್ದಕ್ಕೂ ಭಕ್ತರು ಮಹದೇಶ್ವರ ಉಘೇ..., ಉಘೇ..ಮಾದಪ್ಪ ಎಂದು ಜೈಕಾರ ಹಾಕಿ ಪೂಜೆ ಸಲ್ಲಿಸಿ ಪುನೀತರಾದರು. ಮೆರವಣಿಗೆಯಲ್ಲಿ ವೀರಗಾಸೆ ಉತ್ಸವ ವಾದ್ಯಗೋಷ್ಠಿ, ಸತ್ತಿಗೆ ಸುರಪಾನಿಗಳು ಇದ್ದವು. ಉತ್ಸವಮೂರ್ತಿ ಮೆರವಣಿಗೆ ದೇವಾಲಯ ಆವರಣದ ತಲುಪುತ್ತಿದ್ದಂತೆ ದೇವಾಲಯವನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕಿ, ಕೊಂಡೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ, ಚಾಲನೆ ನೀಡಲಾಯಿತು. ಈ ವೇಳೆ ಭಕ್ತರು ಕೊಂಡ ಹಾಯುವ ಮೂಲಕ ಹರಕೆ ತೀರಿಸಿದರು.

ದನಗಳ ಜಾತ್ರೆ: ಜಾತ್ರಾ ಮಹೋತ್ಸವದಲ್ಲಿ ದನಗಳನ್ನು ಕಟ್ಟಲಾಗಿತ್ತು. ಅಲ್ಲದೇ ಕೊಂಡೋತ್ಸವ ನೋಡಲು ಸಾವಿರಾರು ಭಕ್ತರು ನೆರೆದಿದ್ದರು. ಅಲ್ಲದೇ ಸರತಿ ಸಾಲಿನಲ್ಲಿ ನಿಂತು ವಿಶೇಷ ಪೂಜೆ ಸಲ್ಲಿಸಿ, ದೇವರ ಕೃಪೆಗೆ ಪಾತ್ರರಾದರು. ಸರಗೂರು ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು.

ಎನ್‌ಟಿಎಂ ಶಾಲೆ ಪುನರ್ ನಿರ್ಮಾಣಕ್ಕೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಫೆ.7– ಎನ್‌ಟಿಎಂ ಶಾಲೆ ಪುನರ್ ನಿರ್ಮಾಣಕ್ಕೆ ಒತ್ತಾಯಿಸಿ ಎನ್‌ಟಿಎಂ ಶಾಲೆ ಉಳಿಸಿ ಹೋರಾಟದ ಒಕ್ಕೂಟದ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಶ್ರೀಕಂಠೇಶ್ವರ ದೇವಾಲಯದ ಎದುರು ಜಮಾಯಿಸಿದ ಹೋರಾಟ ಒಕ್ಕೂಟದ ಕಾರ್ಯಕರ್ತರು ರಾಜ್ಯ ಸರ್ಕಾರ, ಜಿಲ್ಲಾಡಳಿತ, ರಾಮಕೃಷ್ಣ ಆಶ್ರಮದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.




ಹೋರಾಟ ಸಮಿತಿ ಸದಸ್ಯ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರು ಮಹಾರಾಣಿಯವರ ದೂರದೃಷ್ಟಿ ಫಲವಾಗಿ ದೇಶದಲ್ಲೇ ಪ್ರಥಮ ಬಾರಿಗೆ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಶ್ರೇಯೋಭಿವೃದ್ಧಿಗಾಗಿ ಎನ್‌ಟಿಎಂ ಶಾಲೆ ಸ್ಥಾಪನೆಗೊಂಡಿತು. ಇಂತಹ ಐತಿಹಾಸಿಕ ಹಿನ್ನೆಲೆಯಿರುವ ಶಾಲೆಯನ್ನು ರಾಮಕೃಷ್ಣ ಆಶ್ರಮದವರು ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ್ದಾಗ ಶಾಲೆಯಲ್ಲಿ ತಂಗಿದ್ದರು ಎಂಬ ಕಾರಣ ನೀಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಪ್ರಭಾವ ಬಳಸಿ ಶಾಲೆ ಜಾಗ ಆಕ್ರಮಿಸಿಕೊಂಡು ಅಲ್ಲಿದ್ದ ಶಾಲಾ ಕಟ್ಟಡ ಕೆಡವಿ ವಿವೇಕ ಸ್ಮಾರಕ ನಿರ್ಮಿಸಿದ್ದಾರೆ. ಧಾರ್ಮಿಕ ಸಂಸ್ಕಾರ ಬೋಧಿಸುತ್ತೇವೆಂದು ಹೇಳುವ ರಾಮಕೃಷ್ಣ ಆಶ್ರಮದವರಿಗೆ ಶಾಲಾ ಕಟ್ಟಡ ಕೆಡುವುದು ನಮ್ಮ ಸಂಸ್ಕೃತಿಯಲ್ಲ ಎಂಬ ಪರಿಜ್ಞಾನವೂ ಇಲ್ಲ, ಶಾಲೆ ಪುನರ್ ನಿರ್ಮಾಣಕ್ಕಾಗಿ ನಡೆಸಿದ ಹೋರಾಟಗಾರರ ಹೋರಾಟ ಸಂದರ್ಭದಲ್ಲಿ ಶಾಲೆ ಪುನರ್ ನಿರ್ಮಿಸುವ ಭರವಸೆ ನೀಡಿದ್ದ ರಾಮಕೃಷ್ಣ ಆಶ್ರಮದವರು ಮಾತಿಗೆ ತಪ್ಪಿದ್ದಾರೆ. ಈ ಶಾಲೆ ಉಳಿಸುವವರೆಗೂ ನಮ್ಮ ಹೋರಾಟ ಕೈ ಬಿಡುವ ಪ್ರಶ್ನೆಯೇ ಇಲ್ಲ ಎಂದು ಕಿಡಿಕಾರಿದರು.

ಎಂ.ಮೋಹನ್‌ಕುಮಾರ್ ಮಾತನಾಡಿ, ಎನ್‌ಟಿಎಂ ಶಾಲೆಯೂ ಉಳಿಯಬೇಕು, ವಿವೇಕಾನಂದ ಸ್ಮಾರಕವೂ ನಿರ್ಮಾಣವಾಗಬೇಕು ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮುಂದೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಒಪ್ಪಂದದಂತೆ ರಾಮಕೃಷ್ಣ ಆಶ್ರಮದವರು ನಡೆದುಕೊಳ್ಳುತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಹೋರಾಟ ನಡೆಸಲಾಗುತ್ತಿದೆ. ಆಶ್ರಮದವರು ಕೊಟ್ಟ ಮಾತಿಗೆ ಬದ್ಧರಾಗಿ ಎನ್‌ಟಿಎಂ ಶಾಲೆ ಪುನರ್ ನಿರ್ಮಾಣಗೊಳಿಸಬೇಕು. ಇಲ್ಲವಾದಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಕಾವಲು ಪಡೆ ತಾಲೂಕು ಅಧ್ಯಕ್ಷ ಧರ್ಮೇಂದ್ರ, ಟಿ.ರವಿಗೌಡ, ಉಮೇಶ್, ಜಿ.ಪ್ರಕಾಶ್, ಬಸವರಾಜು, ರಾಜಕಿಶೋರ್, ಗೋವಿಂದರಾಜು, ಉಮೇಶ್, ಸ್ವಾಮಿ, ಇದ್ದರು.

ಕೋಳೂರಲ್ಲಿ ಅಂಬೇಡ್ಕರ್ ಭವನ ಕಾಮಗಾರಿಗೆ ಚಾಲನೆ

ಚುಂಚನಕಟ್ಟೆ, ಫೆ.7– ರಾಜಕಾರಣ ಉದ್ಯೋಗವಲ್ಲ. ರಾಜಕಾರಣದ ಮೂಲಕ ಶೋಷಿತರ ಬದುಕು ಹಸನು ಮಾಡಿದರೆ ಜನಪ್ರತಿನಿಧಿಯಾಗಿರುವುದು ಸಾರ್ಥಕ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಸಾಲಿಗ್ರಾಮ ತಾಲೂಕಿನ ಕೋಳೂರು ಗ್ರಾಮದಲ್ಲಿ 75 ಲಕ್ಷ ವೆಚ್ಚದ ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಿಮ್ಮ ಸಮಾಜ ಉದ್ಧಾರ ಮಾಡುವ ಬದಲು ಕೇವಲ ಓಟ್ ಬ್ಯಾಂಕ್ ಆಗಿ ನಿಮ್ಮನ್ನು ಬಳಸಿಕೊಳ್ಳುವ ಚಾಳಿ ರಾಷ್ಟ್ರೀಯ ಪಕ್ಷಗಳಿಗೆ ಅಂಟಿದ ರೋಗವಾಗಿದ್ದು, ಪ್ರಾದೇಶಿಕ ಪಕ್ಷ ಮಾತ್ರ ನಿಮ್ಮನ್ನು ಉದ್ಧರಿಸುತ್ತಿದೆ ಎಂದರು.

ಕ್ಷೇತ್ರದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲಾಗುತ್ತಿದ್ದು, ಸಂಸತ್ ಮಾದರಿಯಲ್ಲಿ ನಿರ್ಮಾಣವಾಗಲಿದೆ. ಕೋಳೂರು ಗ್ರಾಮದ ಭವನದ ಜಾಗಕ್ಕೆ ನೀಡಿದ ಹಣವನ್ನು ಈ ಹಿಂದೆ ಪಕ್ಷದಲ್ಲಿದ್ದ ನಾಯಕರು ಸಮಾಜದ ಮುಖಂಡರಿಗೆ ತಿಳಿಯದಂತೆ ನುಂಗಿ ಹಾಕಿದರು. ಆದಾಗ್ಯೂ ಗ್ರಾಮದ ಬಡ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ನೀವು ಯಾವುದೇ ಜನಪ್ರತಿನಿಧಿಗಳನ್ನು ಹಣ ಕೇಳಬೇಡಿ. ನಾನು ಮುಂದೆ ನಿಂತು 75 ಲಕ್ಷ ರೂ. ವೆಚ್ಚದ ಭವನ ಕಟ್ಟಿಸುತ್ತೇನೆ ಎಂದು ಭರವಸೆ ನೀಡಿದರು.

ಅಂಬೇಡ್ಕರ್ ಜೀವನ ಕುರಿತು ನಾಗರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಚನ್ನಂಗೆರೆ ಗ್ರಾಪಂ ಅಧ್ಯಕ್ಷೆ ಸವಿತಾ, ಎಪಿಎಂಸಿ ಮಾಜಿ ನಿರ್ದೇಶಕ ಕುಚೇಲ್, ಗ್ರಾಪಂ ಸದಸ್ಯೆ ಧನಲಕ್ಷ್ಮಿ, ಮಾಜಿ ಸದಸ್ಯ ರಮೇಶ್, ಜೆಡಿಎಸ್ ಯುವ ಅಧ್ಯಕ್ಷ ಮಧು, ಮುಖಂಡರಾದ ಬಿ.ರಮೇಶ್, ಮಹೇಶ, ತ್ರಿಜೇಂದ್ರ, ಕೃಷ್ಣಯ್ಯ, ಶಿಕ್ಷಕರಾದ ಜವರಯ್ಯ, ಜೈ ಭೀಮ್ ಸಂಘದ ಅಧ್ಯಕ್ಷ ರವಿ, ಗೌರವಾಧ್ಯಕ್ಷ ಮಹದೇವ, ಉಪಾಧ್ಯಕ್ಷ ಶಿವಮಹದೇವ್, ಕಾರ್ಯದರ್ಶಿ ಕುಮಾರ್, ಖಜಾಂಚಿ ವೆಂಕಟೇಶ, ಸಂಚಾಲಕ ಮನುಪ್ರಸಾದ್, ರಜನಿಕಾಂತ್, ತಮ್ಮಯ್ಯ, ಕಾಂತರಾಜು, ಪ್ರಸಾದ್ ಮತ್ತಿತರರಿದ್ದರು.

ಗ್ರಾಮ ಸಹಾಯಕರ ಹುದ್ದೆ ನೇಮಕಾತಿಯಲ್ಲಿ ಭ್ರಷ್ಟಾಚಾರ

ತಹಸೀಲ್ದಾರ್ ವಿರುದ್ಧ ಕ್ರಮಕ್ಕೆ ಹುದ್ದೆ ವಂಚಿತರ ಆಗ್ರಹ

ತಿ.ನರಸೀಪುರ, ಫೆ.7– ಗ್ರಾಮ ಸಹಾಯಕರ ಹುದ್ದೆ ನೇಮಕಾತಿಯಲ್ಲಿ ಅಕ್ರಮವೆಸಗಿರುವ ತಹಸೀಲ್ದಾರರು, ಅನುಕಂಪದ ಆಧಾರದ ಮೇಲೆ ದಶಕಗಳ ಕಾಲ ಸೇವೆ ಸಲ್ಲಿಸಿದ ಹಿಂದಿನ ಗ್ರಾಮ ಸಹಾಯಕರ ಕುಟುಂಬದ ಸದಸ್ಯರಿಗೆ ಹುದ್ದೆ ನೀಡದೆ ಅನ್ಯರನ್ನು ನೇಮಕ ಮಾಡಿಕೊಳ್ಳುವ ಮೂಲಕ ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಹುದ್ದೆ ವಂಚಿತ ಯುವ ಮುಖಂಡ ಹಾಗೂ ಗ್ರಾ.ಸ ಲೇ.ಮಹದೇವಯ್ಯ ಅವರ ಪುತ್ರ ಎಂ.ಜಿ. ಮನೋಜ್ ಕುಮಾರ್ ಆರೋಪಿಸಿದರು.



ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ತಂದೆಗೆ ಇಬ್ಬರು ಪತ್ನಿಯರಿದ್ದರಿಂದ ಹುದ್ದೆ ಪಡೆಯುವ ವಿಚಾರ ನ್ಯಾಯಾಲಯದಲ್ಲಿತ್ತು. ತೀರ್ಪಿನ ಬಳಿಕ ಕೆಲಸ ಕೊಡುವ ಬಗ್ಗೆ ಹಿಂದಿನ ಅಧಿಕಾರಿಗಳು ಕೂಡ ಖಾತರಿಪಡಿಸಿದ್ದರು. ಇತ್ಯರ್ಥಗೊಂಡ ತೀರ್ಪಿನ ಪ್ರತಿಯನ್ನು ಈಗಿನ ತಹಸೀಲ್ದಾರ್ ಸಿ.ಜಿ.ಗೀತಾ ಅವರಿಗೆ ಸಲ್ಲಿಸಿದ್ದರೂ, ನಮಗೆ ಹುದ್ದೆ ಕೊಡದೆ ಹೊರಗಿನ ವ್ಯಕ್ತಿ, ಅವರ ಖಾಸಗಿ ವಾಹನ ಚಾಲಕನನ್ನು ನೇಮಕ ಮಾಡಿಕೊಂಡು ಅಕ್ರಮವೆಸಗಿದ್ದಾರೆ ಎಂದು ದೂರಿದರು.

ಸರ್ಕಾರ ಹಾಗೂ ಜಿಲ್ಲಾಡಳಿತವನ್ನೇ ಓವರ್‌ಟೇಕ್ ಮಾಡಿರುವ ತಹಸೀಲ್ದಾರರು ಗ್ರಾಮ ಸಹಾಯಕರ ನೇಮಕಾತಿಯಲ್ಲಿ ಅರ್ಹರನ್ನು ವಂಚಿಸಿದ್ದಾರೆ ಎಂದು ಆರೋಪಿಸಿದರು.

ನಿವೃತ್ತ ಗ್ರಾ.ಸ ಹೊಂಬಾಳಯ್ಯ ಸಂಬಂಧಿ ರಾಜೇಂದ್ರ ಪ್ರಸಾದ್ ಮಾತನಾಡಿ, ಹೊಂಬಾಳಯ್ಯ ಅನಾರೋಗ್ಯಕ್ಕೆ ತುತ್ತಾದಾಗ ಅವರ ಪರ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಕ್ಕೆ ನಿವೃತ್ತರ ಕುಟುಂಬದ ಒಪ್ಪಿಗೆಯಂತೆ 2022 ಜೂ.27 ರಂದು ಹಿಂದಿನ ತಹಸೀಲ್ದಾರ್ ಗಿರಿಜಾ ಅವರು ಗ್ರಾಮ ಸಹಾಯಕ ಹುದ್ದೆಗೆ ನಿಯೋಜಿಸಿ ಆದೇಶ ನೀಡಿದ್ದರು. ಈಗಿನ ತಹಸೀಲ್ದಾರ್ ಅನ್ಯ ವ್ಯಕ್ತಿಯನ್ನು ಅಕ್ರಮ ನೇಮಕ ಮಾಡಿಕೊಂಡು ನನ್ನ ಬದುಕನ್ನೇ ಕಿತ್ತುಕೊಂಡಿದ್ದಾರೆ. ಜಿಲ್ಲಾಧಿಕಾರಿಗಳು ಗೀತಾ ಅವರ ಅಕ್ರಮ ನೇಮಕಾತಿ ರದ್ದುಗೊಳಿಸಿ, ನಮಗಾಗಿರುವ ಅನ್ಯಾಯ ಸರಿಪಡಿಸಬೇಕು. ತಪ್ಪಿದ್ದಲ್ಲಿ ಕಂದಾಯ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು.

ನಿವೃತ್ತ ಗ್ರಾ.ಸ ರಂಗನಾಥಯ್ಯ ಪತ್ನಿ ಮಂಚಮ್ಮ ಮಾತನಾಡಿ, ಕಂದಾಯ ಇಲಾಖೆಯಲ್ಲಿ ಸ್ಥಳೀಯವಾಗಿರುವ ಗ್ರಾಮ ಸಹಾಯಕ ಹುದ್ದೆಯನ್ನು ಅನುಕಂಪದ ಆಧಾರದ ಮೇಲೆ ನೀಡಬೇಕಿದ್ದರೂ, ನಿಯಮ ಉಲ್ಲಂಘಿಸಿ, ಅಕ್ರಮವಾಗಿ ಅನ್ಯರಿಗೆ ನೀಡಿರುವುದು ಆಡಳಿತದಲ್ಲಿ ಮಾನವೀಯ ಮೌಲ್ಯಗಳು ಮರೆಯಾಗಿವೆ. ಸರ್ಕಾರ ಹಾಗೂ ಜಿಲ್ಲಾಡಳಿತ ಕೂಡಲೇ ತಹಸೀಲ್ದಾರರ ವಿರುದ್ಧ ಕ್ರಮ ಜರುಗಿಸಿ, ಆಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರಂಗಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಚಳಿಗಾಲದ ರೇಸುಗಳು



1ನೇ ಎಕ್ಸ್‌ಟ್ರಾ ಡೇ, ಬುಧವಾರ 8-2-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ವೆಸುವಿಯಸ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಬೊನಿಟೋ 2. ಸ್ಟಾರ್ ಆಫ್ ಥಿಯಾ 3. ಮೈ ಒನ್ ಅಂಡ್ ಒನ್ಲಿ

II. ನಂಜನಗೂಡು ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ನಾಟಿ ಸೋ ನಾಟಿ 2. ಜಾಗುರ್ 3. ರ್‍ಯಾಪ್ಟರ್

III. ಶ್ರೀ ಹರಿಕೋಟ ಪ್ಲೇಟ್ ಡಿ2– 1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಓ ಮಂಚಲಿ 2 ಕೇಸರಿ ಕ್ವೀನ್ 3. ಒ ಬ್ಯೂಟಿಫುಲ್ ಒಬಿಲಿವಿಯನ್

IV. ಶ್ರೀ ಹರಿಕೋಟ ಪ್ಲೇಟ್ ಡಿ1– 1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಸನ್ ಶೈನ್ ಕೋಸ್ಟ್ 2. ಇಂಡಿಯನ್ ಗ್ಲೋರಿ 3. ಓಕರ್

V. My R.C.ಬುಕ್ ಮೇಕರ್ಸ್ ಅಸೋಸಿಯೇಷನ್ ಮಿಲಿಯನ್ 4 ವರ್ಷ (ಟರ್ಮ್ಸ್) ಮ.4.00ಕ್ಕೆ
1. ಕೂಲ್ ರೈಡರ್ 2. ಮೊಗಲ್ 3. ಪಾಲಿಷ್ ಗರ್ಲ್

VI. ಮೊರಿಶಿಯಸ್ ಪೆರೆಲ್ ಪ್ಲೇಟ್–1600 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಅವೊಜೋನಿಯ 2. ಪವರ್ ಆಫ್ ಕಾಂತಾರಾ 3. ಗಯಾಮ್

VII. ಪಣಜಿ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಪರ್‌ಫೆಕ್ಟ್ ಇಮಾಜಿನೇಷನ್ 2. ಅಸ್ತ್ರ 3. ಫನ್ ಅಂಡ್ ಲಾಫ್ಟರ್

ದಿನದ ಅತ್ಯುತ್ತಮ	ಕೂಲ್ ರೈಡರ್
ಡಬ್ಬಲ್	ನಾಟಿ ಸೋ ನಾಟಿ, ಓ ಮಂಚಲಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ವೆಂಕಟಸ್ವಾಮಾಚಾರ್ ನಿಧನ



ನಂಜನಗೂಡು, ಫೆ.7– ತಾಲೂಕಿನ ಹೆಮ್ಮರಗಾಲ ನಿವಾಸಿ, ನಿವೃತ್ತ ಮುಖ್ಯ ಶಿಕ್ಷಕ ವೆಂಕಟಸ್ವಾಮಾಚಾರ್ (84) ಮಂಗಳವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಮೂವರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದ ಜಮೀನಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಭಾರತ ಮೂಲದ ಅಮೆರಿಕನ್ ಬಾಲಕಿ ನತಾಶಾ ಪೆರಿಯನಾಯಗಂ ಮತ್ತೆ ವಿಶ್ವದ ಪ್ರತಿಭಾನ್ವಿತೆ



ವಾಷಿಂಗ್ಟನ್, ಫೆ.7– ಭಾರತೀಯ ಮೂಲದ ಅಮೆರಿಕನ್ ವಿದ್ಯಾರ್ಥಿನಿ ನತಾಶಾ ಪೆರಿಯನಾಯಗಂ ಅವರು ಸತತ ಎರಡನೇ ವರ್ಷ ವಿಶ್ವದ ಅತ್ಯಂತ ಬುದ್ಧಿವಂತ ವಿದ್ಯಾರ್ಥಿನಿ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ.

ಯುಎಸ್ ಮೂಲದ ಜಾನ್ಸ್ ಹಾಪ್‌ಕಿನ್ಸ್ ಸೆಂಟರ್ ಫಾರ್ ಟ್ಯಾಲೆಂಟೆಡ್ ಯೂತ್ ಸಂಸ್ಥೆಯು 76 ದೇಶಗಳ 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ನಡೆಸಿದ ಪರೀಕ್ಷೆಗಳ ಫಲಿತಾಂಶದ ಆಧಾರದಲ್ಲಿ 'ವಿಶ್ವದ ಬುದ್ಧಿವಂತ' ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಿದ್ದು, ನತಾಶಾ ಅಗ್ರಸ್ಥಾನ ಪಡೆದುಕೊಂಡಿದ್ದಾಳೆ. 13 ವರ್ಷದ ನತಾಶಾ ನ್ಯೂಜೆರ್ಸಿಯ ಫ್ಲೊರೆನ್ಸ್ ಎಂ.ಗೌಡಿನೀರ್ ಮಿಡಲ್ ಸ್ಕೂಲ್‌ನ ವಿದ್ಯಾರ್ಥಿನಿ. ಈಕೆ ಗ್ರೇಡ್ 5 ವಿದ್ಯಾರ್ಥಿನಿಯಾಗಿದ್ದಾಗ 2021ರಲ್ಲಿ ಜಾನ್ಸ್ ಹಾಪ್ಕಿನ್ಸ್ ಸೆಂಟರ್ ಫಾರ್ ಟ್ಯಾಲೆಂಟೆಡ್ ಯೂತ್ ಪರೀಕ್ಷೆಯನ್ನು ಬರೆದಿದ್ದಳು. ಆಕೆ ಎಲ್ಲಾ ಅಭ್ಯರ್ಥಿಗಳ ಪೈಕಿ ಅತ್ಯಧಿಕ ಶ್ರೇಣಿ ಗಳಿಸಿದ್ದಾಳೆ.

ಈ ವರ್ಷ, ಎಸ್‌ಎಟಿ, ಎಸಿಟಿ, ಶಾಲೆ ಮತ್ತು ಕಾಲೇಜು ಸಾಮರ್ಥ್ಯ ಪರೀಕ್ಷೆ ಅಥವಾ ಸಿಟಿವೈ ಟ್ಯಾಲೆಂಟ್ ಸರ್ಚ್‌ನ ಭಾಗವಾಗಿ ತೆಗೆದುಕೊಂಡ ಪರೀಕ್ಷೆಯಲ್ಲಿ ಅಸಾಧಾರಣ ಸಾಧನೆಗಾಗಿ ನತಾಶಾ ಅವರನ್ನು ಗೌರವಿಸಲಾಯಿತು ಎಂದು ವಿಶ್ವವಿದ್ಯಾಲಯವು ಸೋಮವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ನತಾಶಾ ಪೆರಿಯನಾಯಗಂ ಅವರ ಪೋಷಕರು ಚೆನ್ನೈ ಮೂಲದವರಾಗಿದ್ದಾರೆ. ನತಾಶಾ ಬಿಡುವಿನ ಸಮಯದಲ್ಲಿ ಡೂಡ್ಲಿಂಗ್ ಮತ್ತು ಜೆಆರ್‌ಆರ್ ಟೋಲ್ಕಿನ್ ಅವರ ಕಾದಂಬರಿಗಳನ್ನು ಓದಲು ಇಷ್ಟಪಡುತ್ತಾಳೆಂದು ನತಾಶಾ ಅವರ ಪೋಷಕರು ಹೇಳಿದ್ದಾರೆ. ಇದು ಕೇವಲ ಒಂದು ಪರೀಕ್ಷೆಯಲ್ಲಿ ನಮ್ಮ ವಿದ್ಯಾರ್ಥಿಗಳ ಯಶಸ್ಸಿನ ಗುರುತಿಸುವಿಕೆ ಅಲ್ಲ, ಅವರ ಅನ್ವೇಷಣೆ ಮತ್ತು ಕಲಿಕೆಯ ಮೇಲಿನ ಅವರ ಪ್ರೀತಿ ಮತ್ತು ಅವರು ತಮ್ಮ ಜೀವನದಲ್ಲಿ ಸಂಗ್ರಹಿಸಿದ ಎಲ್ಲಾ ಜ್ಞಾನಕ್ಕೆ ನೀಡುವ ಗೌರವವಾಗಿದೆ ಎಂದು ಜಾನ್ ಹಾಪ್ಕಿನ್ಸ್ ಸೆಂಟರ್ ಫಾರ್ ಟ್ಯಾಲೆಂಟೆಡ್ ಯೂತ್ (ಸಿಟಿವೈ)ನ ಕಾರ್ಯನಿರ್ವಾಹಕ ನಿರ್ದೇಶಕಿ ಡಾ ಆಮಿ ಶೆಲ್ಟನ್ ಹೇಳಿದ್ದಾರೆ.

ಕಲಾವಿದ ಬಾದಲ್ ನಂಜುಂಡಸ್ವಾಮಿಯ 'ಕನ್ನಡ' ಕೈಚಳಕಕ್ಕೆ ಪ್ರಧಾನಿ ಮೋದಿ ಫಿದಾ



ಬೆಂಗಳೂರು, ಫೆ.7–ಕನ್ನಡ ಭಾಷೆ ಅತ್ಯಂತ ಸುಂದರ ಭಾಷೆ, ಕನ್ನಡ ವರ್ಣಮಾಲೆಯನ್ನು ಮಕ್ಕಳು ಸುಲಭವಾಗಿ, ವಿನೋದವಾಗಿ ಹೇಗೆ ಕಲಿಯಬಹುದು ಎಂದು ಕಲೆಗಾರ ಬಾದಲ್ ನಂಜುಂಡಸ್ವಾಮಿ ಪ್ರತಿ ಅಕ್ಷರಕ್ಕೆ ಚಿತ್ರಗಳನ್ನು ಜೋಡಿಸಿ ತೋರಿಸಿ ಕೊಟ್ಟಿದ್ದರು. ಇದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ. ಎಸ್.ಕಿರಣ್ ಕುಮಾರ್ ಎಂಬುವರು ಹಂಚಿಕೊಂಡಿದ್ದ ಟ್ವೀಟ್‌ಗೆ ರೀಟ್ವೀಟ್ ಮಾಡಿದ ಪ್ರಧಾನಿ ಮೋದಿ ಭಾಷೆ ಕಲಿಯುವುದನ್ನು ಮೋಜಿನ ಚಟುವಟಿಕೆಯನ್ನಾಗಿ ಮಾಡಲು ಒಂದು ಸೃಜನಶೀಲ ಮಾರ್ಗ, ಸುಂದರವಾದ ಕನ್ನಡ ಭಾಷೆ ಎಂದು ಬಣ್ಣಿಸಿದ್ದಾರೆ. ತಮ್ಮ ಕಲೆಯನ್ನು ಭಾರತದ ಪ್ರಧಾನಿ ಗುರುತಿಸಿದ ಬಗ್ಗೆ ನಂಜುಂಡಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಭಾಗಾಂತ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಹಾಗೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ: 28–11–2016 ರಂದು ಆಗಿರುವ ನೋಂದಾಯಿತ ಕ್ರಯಪತ್ರ ಅಸಿಂಧುವೆಂದು ಆದೇಶಿಸಬೇಕೆಂದು ಮೈಸೂರಿನ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ : 194/2022 ರಂತೆ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಯಲ್ಲಿ ಸಿಟಿ ಯೂನಿಯನ್ ಬ್ಯಾಂಕ್ ಲಿ., ಇವರೂ ಸಹ ಪಕ್ಷಕಾರರಾಗಿರುತ್ತಾರೆ. ಘನ ನ್ಯಾಯಾಲಯವು ಸದರಿ ಬ್ಯಾಂಕ್‌ಗೆ ನೋಟಿಸನ್ನು ಜಾರಿಗೊಳಿಸಿ ದಿನಾಂಕ: 21–02–2023 ಕ್ಕೆ ಪ್ರಕರಣವನ್ನು ಮುಂದೂಡಲಾಗಿರುತ್ತದೆ. ಸದರಿ ಘನ ನ್ಯಾಯಾಲಯದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರಗಳನ್ನು ಕೈಗೊಳ್ಳಬಾರದೆಂದು ಘನ ನ್ಯಾಯಾಲಯವು ದಿನಾಂಕ: 11–02–2022 ರಂದು ಮಧ್ಯಕಾಲೀನ ಆದೇಶವನ್ನು ಹೊರಡಿಸಿರುತ್ತದೆ. ಆದ್ದರಿಂದ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದ್ದು, ಒಂದು ವೇಳೆ ಮುಂದುವರೆದು ಯಾವುದೇ ರೀತಿಯ ವ್ಯವಹಾರ ಮಾಡಿದಲ್ಲಿ ಸದರಿ ವ್ಯವಹಾರವು ಮೇಲ್ಕಂಡಂತೆ ಘನ ನ್ಯಾಯಾಲಯದ ಆದೇಶದ ರೀತ್ಯಾ ನಮ್ಮ ಕಕ್ಷಿದಾರರ ಹಕ್ಕಿಗೆ ಬದ್ಧವಾಗಿರುವುದಿಲ್ಲವೆಂದು ಹಾಗೂ ಮುಂದೆ ಉಂಟಾಗಬಹುದಾದ ಕಷ್ಟನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ತೊಣಚಿಕೊಪ್ಪಲು ಬಡಾವಣೆ, ಸರಸ್ವತಿಪುರಂ 8ನೇ ಮುಖ್ಯ ರಸ್ತೆ, 8ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಮನೆ ನಂ.76, ಇದರ ವಿಸ್ತೀರ್ಣ ಪೂರ್ವ – ಪಶ್ಚಿಮ : 50 ಅಡಿಗಳು, ಉತ್ತರ –ದಕ್ಷಿಣ : (108+104)/2 ಅಡಿಗಳು. ಇದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ : 75, ಪಶ್ಚಿಮಕ್ಕೆ: ಸ್ವತ್ತಿನ ಸಂಖ್ಯೆ 77, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ : 89.

ಸಹಿ/– **ಹೆಚ್.ಎನ್.ವೆಂಕಟೇಶ್**
ವಕೀಲರು,
ನಂ.514, ಬಿಂದಿಯಾ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ,
ಕೆ.ಆರ್.ಮೊಹಲ್ಲಾ, ಮೈಸೂರು.
ಮೊಬೈಲ್: 9448323246

ದಿನಾಂಕ: 07–02–2023

ಕಳೆದಿದೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೈದನಹಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು ಸರ್ವೆ ನಂ. 119 ರ ಜಮೀನುಗಳ ಕ್ರಯಪತ್ರದ ನೋಂದಣಿ ಸಂಖ್ಯೆ : MYN-1-06199-2007-08, ಸಿ.ಡಿ.ಸಂಖ್ಯೆ MYND146 ದಿನಾಂಕ : 04-07-2007 ಮತ್ತು ನೋಂದಣಿ ಸಂಖ್ಯೆ : MYN-1-06198-2007-08, ಸಿ.ಡಿ.ಸಂಖ್ಯೆ MYND146 ದಿನಾಂಕ : 03-07-2007 ರಂದು ಶ್ರೀ ಆರ್. ವಿ. ಹರ್ಷ ಬಿನ್ ಶ್ರೀ ಆರ್. ವಿ. ವೆಂಕಟರಾಮಯ್ಯ ರವರಿಗೆ ನೋಂದಣಿಯಾಗಿರುತ್ತದೆ. ಈ ಜಮೀನುಗಳ ಮೂಲ ಕ್ರಯಪತ್ರಗಳು ದಿನಾಂಕ : 25.01.2023 ರಂದು ಮೈಸೂರು ಸಿಟಿ, ಕುವೆಂಪುನಗರದಲ್ಲಿ ಕಳೆದುಹೋಗಿದ್ದು, ಈ ವಿಚಾರವಾಗಿ ದಿನಾಂಕ : 06.02.2023 ರಂದು, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರಿನ ಸಂಖ್ಯೆ : 1646523230000162 ಆಗಿರುತ್ತದೆ, ಯಾರಿಗಾದರು ಸಿಕ್ಕಿದ್ದಲ್ಲಿ ಸಂಪರ್ಕಿಸಿ ಮೊಬೈಲ್ ನಂ. 9108235061.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾ.ಕು.ನೀ. ಮತ್ತು ನೈ. ವಿಭಾಗ – ಮಡಿಕೇರಿ

ಸಂ:ಕಾ.ಇಂ/ಗ್ರಾಕುನೀ&ನೈ.ವ/ಎಇ/ಟೆಂಡರ್ ಸಂಖ್ಯೆ:/ಜೆ.ಜೆ.ಎಂ/11/ 2022–23 ದಿನಾಂಕ: 06–02–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ (E-Proc) ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಬಂಧನೆಗೊಳಪಟ್ಟಂತೆ, ಜೆ.ಜೆ.ಎಂ ಯೋಜನೆಯಡಿಯಲ್ಲಿ ಸೋಮವಾರಪೇಟೆ ತಾಲ್ಲೂಕಿನ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ – ಪ್ರಕ್ಯೂರ್‌ಮೆಂಟ್ ವೇದಿಕೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.

ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಸೋಮವಾರಪೇಟೆ ತಾಲ್ಲೂಕಿನ ಸುಂಟಿಕೊಪ್ಪ, ನಾರ್ಗಾಣೆ ಹಾಗೂ ಉಲುಗುಲಿ, ಜನವಸತಿಗಳಲ್ಲಿನ ಮನೆಗಳಿಗೆ ಎಫ್.ಹೆಚ್.ಟಿ.ಸಿ ಒದಗಿಸುವುದು.	599.62

1) ಪ್ರೀ–ಬಿಡ್ ಮೀಟಿಂಗ್ – ವಿಭಾಗ ಕಛೇರಿಯಲ್ಲಿ: 09–02–2023 ಮಧ್ಯಾಹ್ನ 12.00 ಗಂಟೆಗೆ.
2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 20–02–2023 ಸಂಜೆ 5.00 ಗಂಟೆಯವರೆಗೆ
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21–02–2023 ಸಂಜೆ 5.05 ಗಂಟೆ ನಂತರ
4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24–02–2023 ಬೆಳಗ್ಗೆ – 11.00 ಘಂಟೆ ನಂತರ

ಸೂಚನೆ: ಇತರೇ ಷರತ್ತು, ಹಾಗೂ ಕಾಮಗಾರಿಗಳ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು.

ಸಹಿ/– **ಕಾರ್ಯಪಾಲಕ ಇಂಜಿನಿಯರ್**
ಗ್ರಾ.ಕು.ನೀ & ನೈ ವಿಭಾಗ – ಮಡಿಕೇರಿ.